Registered No. M. 1393.

ಕಂಠೀರವ

KANTEERAVA

KANARESE. BI-WEEKLY

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

ಸಂಪುಟ ೨೨ | ಮಂಗಳೂರು, ೧೯೪೦ನೇ ಇಸವಿ ಜುಲೈ ತಾರೀಕು ೧೬ನೇ ಮಂಗಳವಾರ | ಸಂಚಿಕೆ ೩೧

VOL. XXII | MANGALORE, TUESDAY, JULY 16, 1940 | NO. 31

ಅಮೃತಾಂಜನ

(Regd.)

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

AMRUTANJAN DEPOTS. BOMBAY. MADRAS. CALCUTTA.

ಅಮೃತಾಂಜನ, ಲಿಮಿಟೆಡ್

ಬೊಂಬಾಯಿ — ಮದ್ರಾಸ್ — ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE

Bombay Life Assurance Co., Ltd.

(ESTD. 1908)

LIFE INSURANCE DISPELS DARKNESS OF THE MIND AND BRINGS ENLIGHTENMENT AND COURAGE, IMMORTALISES MAJOR PORTION OF YOUR INCOME WHETHER YOU SURVIVE OR NOT AND THUS MAKES LIFE WORTH LIVING TO YOU AND YOUR DEPENDANTS IN REALITY.

ASK US WHAT PARTICULAR SCHEME OF INSURANCE WILL SATISFY YOUR REQUIREMENTS AND YOUR PURSE.

Agency Applications from Active and Influential Ladies and Gentlemen are invited.

To Insure or to Represent consult:—

KOCHIKAR BROTHERS, LTD.,

Madras Branch Secretaries & Chief Agents for Bombay City and Suburbs,

The Bombay Life Bldg., Sir Lalubhai Samaldas Road, Gandhi Nagar, UDIPI

OR ANY OF THEIR FOLLOWING OFFICES AT:

(1) Puthiyara, Calicut. (2) Car Street, Mangalore. (3) Central Station Road, Trivandrum.

(4) Gautam Nivas, Charni Road, Girgaum, Bombay, No. 4. (5) Post Box No. 337, Mount Road, Madras. (6) Visweshwarapuram Circle, Bangalore City.

ಈ ವಾರದ ಕಥೆ

ನೆಳಲು ಬೆಳಕು

(ಶ್ರೀ. ಕೆ. ವಿ[illegible]ಣೈ, ಬಿ.ಎ.)

[ಕಥಾ ಸಾರಾಂಶ:—ವೇಣುವಿನ ಸಂಸಾರ; ಅವನ ಸಂಸಾರದಲ್ಲಿ ಹೆಂಡತಿ ವಿೂರೆ; ಸಾಕು ತಾಯಿ ರಾಧೆ. ವಿೂರೆಗೆ ಬುದ್ಧಿ ಸಾಲದು. ಆಕೆ ಕಠಿನ ರೋಗಕ್ಕೆ ತುತ್ತಾಗಿರುವ ಪತಿಯ ಸೇವೆಗಿಂತಲೂ ತಮ್ಮನ ಉಸನಯನ ಹೆಚ್ಚೆಂದು ತಿಳಿದವಳು. ವೇಣು ಇಂಥ ಅಪ್ರಬುದ್ಧ ಹೆಂಡತಿಯ ಅವಿವೇಕದಿಂದ ಸಂಸಾರದಲ್ಲಿ ಯಾವ ಸುಖವನ್ನೂ ಕಾಣದೆ ನೊಂದವನಾದರೂ ವಿೂರೆಯ ಮೇಲೆ ಅವನಿಗೆ ಅತ್ಯಧಿಕ ಪ್ರೇಮ. ಒಂದಲ್ಲ ಒಂದು ದಿನ ಅವಳೂ ತನ್ನಂತೆ ತನ್ನಲ್ಲಿ ಪ್ರೇಮವನ್ನು ಬೀರುವಳೆಂದು ನಂಬಿಗೆ. ಇಂಥ ನಂಬಿಕೆ ಕೆಡದಂತೆ, ವೇಣುವಿನ ಮನದ ಊರಿ ತಣಿಯುವಂತೆ, ಅವನ ಅಂತಿಮ ಕಾಲದ ಮನಶ್ಶಾಂತಿ ಕೆದರದಂತೆ, ರಾಧೆ ಯಾವ ರೀತಿಯಿಂದ ಸುಳ್ಳು ಹೇಳಿ, ವಿೂರೆಯ ವಿಷಯದಲ್ಲಿ ವೇಣುವಿನ ಆದರವನ್ನು ಹೆಚ್ಚಿಸುವಳೆಂಬುದು ಹಿಂದಿನ ಭಾಗದಿಂದ ತಿಳಿದು ಬರುತ್ತಿದೆ.]

'ಚಿಂತೆಯಿಲ್ಲ. ಪ್ರದರ್ಶನಕ್ಕೆ ಕಳುಹಿಸಲಿಕ್ಕಲ್ಲವಷ್ಟೆ! ಅಷ್ಟು ನಾಜೂಕಲ್ಲದಿದ್ದರೂ ಅದು ಕಾಲುಗಳನ್ನು ಬೆಚ್ಚಗಿರಿಸಬಲ್ಲುದಮ್ಮಾ!'

ಘೋರ ರಾತ್ರಿಯಲ್ಲಿ, ದೀಪದ ಬೆಳಕಿನಲ್ಲಿ, ವಿೂರೆ ಶಾಲನ್ನು ಹೊಲಿಯುವ ಆ ಕಲ್ಪಿತ ದೃಶ್ಯವೆ ವೇಣುವನ್ನು ಬೆರಗುಗೊಳಿಸಿತು. ಎಂಥ ಪರಿಶ್ರಮ! ಎಲ್ಲಿಲ್ಲದ ನಲ್ಮೆ! ಆಹಾ! ಎಷ್ಟು ಕರುಣಾಜನಕ ನೋಟವಿದು! ಅಲ್ಲೂ ಒಂದಿಷ್ಟು ಆನಂದವಿಡಿಯಲ್ಲ!

'ಡಾಕ್ಟರರು ಕೆಳಗಿರುವರೇನಮ್ಮಾ?'

'ಹೌದು! ಇಂದು, ಅವರಿಲ್ಲೇ ಇರುವರು ಮಗೂ.'

'ಆದರೆ ನಿದ್ದೆಗಾಗಿ, ಅಮಲಿನ ಔಷಧಿ ಕೊಡುವುದು ನಿರರ್ಥಕವೆಂದು ಅವರಿಗೆ ತಿಳಿಸಮ್ಮಾ. ಅದರಿಂದ ಬೇನೆಯು ಬಲಿಯುವುದಲ್ಲದೆ, ವಿಶ್ರಾಂತಿಯೊಂದಿಷ್ಟೂ ಸಿಗಲಾರದು. ಎಚ್ಚರದಿಂದಿರುವುದೇ ಎಷ್ಟಕ್ಕೂ ಲೇಸು . . . . ಅಮ್ಮಾ! ನನ್ನ ಮತ್ತು ವಿೂರೆಯ ವಿವಾಹವಾದುದೊಂದು ವೈಶಾಖ ಹುಣ್ಣಿಮೆಯ ರಾತ್ರಿಯೆಂಬ ನೆನಪಿದೆಯೇ ನಿನಗೆ? ನಾಳೆ ಅದೇ ವೈಶಾಖ ಹುಣ್ಣಿಮೆ. ಅಂದಿನ ಆ ತಾರೆಗಳೇ, ಇಂದೂ ಬೆಳಗುತ್ತಲಿವೆ. ವಿೂರೆಗೆ ಮಾತ್ರ ಆ ನೆನಪಿರಲಿಕ್ಕಿಲ್ಲ. ನಾನು ಹುಟ್ಟಸಬೇಕು. ಒಂದೆರಡು ನಿಮಿಷಗಳಿಗಾದರೂ ಕರೆಯಲಾರೆಯಾ? . . . ಏಕೆ ಸುಮ್ಮಗಿರುವೆಯಮ್ಮಾ! ಮನ ನೋಯಿಸಬಾರದೆಂದು ಡಾಕ್ಟರರ ಎಚ್ಚರಿಕೆಯೆ? ಆದರೆ ವಿೂರೆಯೊಡನೆ ಒಂದಿಷ್ಟು ಮಾತನಾಡಿದರೆ ಸಾಕು, ಅಮಲಿಗೆ ಬೇರೆ ಮದ್ದು ಬೇಡ . . . . ಅಳಬೇಡಮ್ಮಾ! ನಾನು ಹುಟ್ಟಾರಿಯೆನು. ಎಂದೂ ಅನುಭವಿಸದ ಮನೋಲ್ಲಾಸವಾಗುತ್ತಿದೆ ನನಗೆ. ಆದುದರಿಂದಲೇ ವಿೂರೆಯನ್ನು ಕರೆಯೆಂದುದು. ಇಲ್ಲ, ಇಲ್ಲ! ನೀನಳುವುದನ್ನು ಕಾಣಲಾರೆ. ಇಷ್ಟು ದಿನ ಸ್ವಸ್ಥಚಿತ್ತಳಾಗಿದ್ದ ನೀನು, ಇಂದೇಕೆ ಅಳುವಿಗೆ ಎಡೆಕೊಟ್ಟರುವೆ?'

'ಅಯ್ಯೋ! ಏನೆನ್ನಲಿ ವೇಣೂ! ಇಂದಿನ ತನಕ ಕಣ್ಣೀರ ಚಿಲುಮೆ ಬತ್ತಿ ಹೋಗಿದ್ದಿತೆಂದೇ ನನ್ನ ಭಾವನೆಯಾಗಿತ್ತು. ಆದರೆ ಇನ್ನೂ ಅದು ವೇಗದಿಂದ ಒಸರುತ್ತಲೇ ಇದೆ. ತಡೆಯಲಾರೆ, ತಡೆಯಲಾರೆ.'

'ವಿೂರೆಯನ್ನೊಮ್ಮೆಯಾದರೂ ಕರೆಯಮ್ಮಾ! ಮದುವೆಯಾದ ಆ ರಾತ್ರಿಯ ನೆನಪಿದೆಯೇ? ಎಂದು ಕೇಳುವಾಸೆ ನನಗೆ. ನಾಳೆ ಅವಳು . .'

'ಆಯಿತು ವೇಣು! ಹೋಗಿ ಕರೆತರುವೆನು. ಬಾಗಿಲಲ್ಲೇ ರಾಜು ಇದ್ದಾನೆ. ಏನಾದರೂ ಬೇಕಿದ್ದರೆ ಅವನನ್ನು ಕರೆ.'

ರಾಧಮ್ಮ ನೆಟ್ಟಗೆ ವಿೂರೆ ಮಲಗುವ ಕೋಣೆಗೆ ಹೋದಳು. ಹೋಗುತ್ತ ಎದೆಯಲ್ಲಿ ಉಕ್ಕೇರುವ ಸಂತಾಪವನ್ನು ಸಹಿಸದಾದಳು. ನೆಲದ ಮೇಲೆ ಕುಳಿತು ಒಂದೇ ಸವನೆ ಬಿಕ್ಕಿಬಿಕ್ಕಿ ಅಳತೊಡಗಿದಳು. 'ಅಯ್ಯೋ! ನಿರ್ದಯಿ! ರಾಕ್ಷಸಿ! ಪ್ರಾಣಪ್ರಿಯನ ಅದೊಂದು ಕೊನೆಯ ಬೇಡಿಕೆಯನ್ನಾದರೂ ಸಲಿಸಲಾರದೆ ಹೋದೆಯಾ? ಅವನು ತನ್ನಡೆಂದಿರುವುದನೆಲ್ಲ ನಿನಗಾಗಿ ತ್ಯಜಿಸಿದರೇನು? ನೀನು ಮಾತ್ರ ಕೃತಘ್ನಳಂತೆ, ತಾನಾಗಿ ಸಾಯುವವನನ್ನೂ ಕೊಲ್ಲುವೆಯಲ್ಲವೇ?'

ತಲೆ ಬಾಗಿಲಲ್ಲಿ ಕಾಲ ಸದ್ದಾದುದೊಂದೇ ಸರಿ. ವೇಣು ಬೆಚ್ಚಿಬಿದ್ದ,—ಎಂದಿನಿಂದಲೋ ಕಾದುದು ಕೊನೆಗಾದರೂ ಸಫಲವಾಯಿತೆಂದೆಣಿಸಿ!

'ವಿೂರಾ!' ಎಂದು ಮೆಲ್ಲನುಸುರಿದ.

'ನಾನು ರಾಯ್ರೋ! ರಾಜು. ಕರೆದಿರೇ ನನ್ನನ್ನು?'

'ವಿೂರೆಯನ್ನು ಕರೆ ರಾಜು.'

'ಯಾರನ್ನು ದೇವ್ರೆ?'

'ಬೇರಾರನ್ನೂ ಅಲ್ಲ, ನಿನ್ನ ಯಜಮಾನಿಯನ್ನು.'

'ಅವರಿನ್ನೂ ಹಿಂದೆ ಬರಲಿಲ್ಲವಲ್ಲಾ!'

'ಹಿಂದೆ ಬರಲಿಲ್ಲ? ಎಲ್ಲಿಂದ?'

'ತಿನಪುರದಿಂದ ರಾಯ್ರೋ.'

'ಅವಳಲ್ಲಿಗೆ ಹೋದುದಾವಾಗ?'

'ಇಂದಿಗೆ ಮೂರು ದಿನವಾಯಿತು!'

ವೇಣುವಿನ ವೊಗದಲ್ಲಿ ಬಿಳಿಪೇರಿತು. ಒಮ್ಮೆಯೇ ಅವನು ನಿಶ್ಚೇತನನಾದನು ತಲೆ ತಿರುಗಿದಂತಾಗಿ ದಿಂಬಿನಿಂದ ಜಾರಿ, ಕೆಳಗೆ ಬಿದ್ದನು. ಕಾಲ ಮೇಲಿನ ಶಾಲನ್ನು ದೂರ ಕ್ಕೊಗೆದನು ವೇಣು.

ರಾಧಮ್ಮ ಹಿಂದಿರುಗಿ ಬಂದರೂ, ವೇಣು ವಿೂರೆಯ ಸುದ್ದಿಯೆತ್ತಲೇ ಇಲ್ಲ. ಅವಳನ್ನು ಸಂಪೂರ್ಣ ಮರೆತನೆಂದೇ ಆಕೆ ಯೋಚಿಸಿದಳು.

'ಅಂದು ನಾನು ಕಂಡ ಆ ಕನಸಿನ ನೆನಪಿದೆಯೇನಮ್ಮಾ!'—ಕೇಳಿದ ವೇಣು.

'ಯಾವ ಕನಸು, ಮಗೂ,'

'ವಿೂರೆಯು ಎಷ್ಟು ಪ್ರಯಾಸಪಟ್ಟರೂ, ಬಾಗಿಲು ಒಂದಂಗುಲವಾದರೂ ಅಲುಗದಿದ್ದುದು. ಇಂದು ನನಗದರ ಅರಿವಾಯಿತಮ್ಮಾ! ಕೊನೆವರೆಗೂ ಆಕೆ ಅಲ್ಲೇ ನಿಂದಿರಬೇಕೆಂದು.'

ರಾಧಮ್ಮನ ಬಾಯಲ್ಲಿ ಮಾತು ಹೊರಡಲಿಲ್ಲ. ಈ ತನಕ ಸುಳ್ಳಿನಿಂದಲೇ ಅವನಿಗಾಗಿ ಆಕೆ ರಚಿಸುತ್ತ ಬಂದ ಆ ಗಾಳಿಗೋಪುರವು, ಅರೆಕ್ಷಣದಲ್ಲೇ ಕುಸಿದು ನೆಲಸಮವಾಯಿತೆಂದು ಆಕೆಗೆ ಮನವರಿಕೆಯಾಯಿತು. ದೇವರೇ ಮುನಿದ ಬಳಿಕ, ಆ ಮುನಿಸಿನಿಂದ ಪಾರಾಗುವ ಬಗೆಯೆಂತು?

'ಅಮ್ಮಾ! ನೀನು ನನ್ನಲ್ಲಿಟ್ಟ ಅವಿಚಲ ಪ್ರೇಮವು, ಜನ್ಮಜನ್ಮಾಂತರಕ್ಕೂ ಶಾಶ್ವತವಾಗಿಯೇ ನಿಲ್ಲದಿರದು. ನನ್ನೀ ಜೀವನವನ್ನೆಲ್ಲ ಅದರಿಂದಲೇ ತುಂಬಿ, ಆ ಭಾರವನ್ನೇ ಹೊತ್ತು, ನಾನಿಂದು ಹೊರಟಿರುವೆನು. ಮುಂದಿನ ಜನ್ಮದಲ್ಲಾದರೂ ನೀನೆನ್ನ ಮಗಳಾಗಿ ಹುಟ್ಟಬೇಕಮ್ಮಾ, ಆ ಪ್ರೇಮವನ್ನು ಮರಳಿ ಪಡೆಯಲಿಕ್ಕೆ'

[ಪುಟ ೧೩ ನೋಡಿ]

ಕಾಮಿನಿಯ ಸೌಂದರ್ಯದ ಕೀರ್ತಿಯ ಕಲಶ

ಮೃದು ಮತ್ತು ವೈಭವದಿಂದ ಬೆಳೆವ ಕೂದಲು. ನಿಮ್ಮ ಚೆಲುವನ್ನು ಹೆಚ್ಚಿಸಲು ಮತ್ತು ರಕ್ಷಿಸಲು ಮರೆಯದೆ ಕೊಳ್ಳಿರಿ—

ಕಾಮಿನಿಯಾ ಓಯ್ಲ್

(ರಿಜಿಸ್ಟರ್ಡ್)

ಪರಿಶುದ್ಧವೂ ಅತ್ಯುತ್ತಮವೂ ಆದ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಇದು ತಲೆಯ ತೊಡರುಗಳಿಗೆಲ್ಲ ದಿವ್ಯ ಔಷಧಿ. ಅಲ್ಲದೆ ಕೂದಲ ಬೇರನ್ನು ಬೆಳೆಯಿಸಿ, ಕೂದಲು ಉದುರುವುದನ್ನು ತಡೆಯುವುದಲ್ಲದೆ, ಇದರ ಪ್ರಿಯವಾದ ಸುಗಂಧ ಮನಸ್ಸನ್ನು ಆಹ್ಲಾದಕರವಾಗಿ ಇರಿಸುವುದು.

ಕಾಮಿನಿಯಾ ತೈಲ

ಬಂಗಾರದ ಪದಕಗಳನ್ನೂ ಪ್ರಶಂಸಾ ಪತ್ರಗಳನ್ನೂ ಸಂಭಾವನಾ ಪತ್ರಗಳನ್ನೂ ಅದರ ಅತ್ಯುತ್ಕೃಷ್ಟತೆಗಾಗಿ ರಾಷ್ಟ್ರದ ಸಕಲರಿಂದಲೂ ಪಡೆದಿದೆ.

ಬಾಟ್ಲಿಯೊಂದರ ಬೆಲೆ ರೂಪಾಯಿ 1. 3 ಬಾಟ್ಲಿಗಳಿಗೆ ರೂ. 2-10-0. ವಿ. ಪಿ. ಖರ್ಚು ಬೇರೆ. ಮುಕ್ತಾಖಾನೆ ಅಂಚೆ ಚೀಟೆ ಕಳುಹುವವರಿಗೆ ಮಾದರಿ ಸೀಸೆ ಪುಕ್ಕಟೆ. ಎಲ್ಲೆಲ್ಲೂ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್ ಹಾಗೂ ಜೀನಸು ಅಂಗಡಿಗಳಲ್ಲೂ ಇದು ಮಾರಲ್ಪಡುತ್ತದೆ.

ಸುಗಂಧಗಳ ರಾಜ—ಒಟ್ಟೋ ದಿಲ್ ಒಹಾರ್

(ರಿಜಿಸ್ಟರ್ಡ್)

ವಿಶಾಲ ಜಗತ್ತಿನಲ್ಲಿ ಇದಕ್ಕಿರುವ ಆದರವೇ ಇದರ ಶ್ರೇಷ್ಠತೆಯನ್ನು ವ್ಯಕ್ತಪಡಿಸುತ್ತದೆ. ನಿಮ್ಮ ಕರವಸ್ತ್ರದ ಮೇಲೆ ಬಿದ್ದ ಇದರ ಕೆಲವೇ ಬಿಂದುಗಳು ಮನಮೋಹಕ ಹಾಗೂ ಅಚ್ಚಳಿಯದ ಡೈಲಿ ಮತ್ತು ಜಾಜಿ ಹೂಗಳ ಸುಗಂಧವನ್ನು ಹೊರಸೂಸುವುದು. ½ ಔನ್ಸ್ ಬಾಟ್ಲಿಯ ಬೆಲೆ ರೂ. 1¼ ಮತ್ತು ಒಂದು ಡ್ರೇಮ್ ಬಾಟ್ಲಿಯ ಬೆಲೆ 12 ಆಣೆಗಳು. ವಿ. ಪಿ. ಚಾರ್ಜು ಬೇರೆ. ಪುಕ್ಕಟೆ ಮಾದರಿ ಸೀಸೆಗಾಗಿ 2 ಆಣೆ ಅಂಚೆ ಚೀಟೆ ಕಳುಹಿಸಿ. ಸುಗಂಧ ಕಾರ್ಡಿನ ಬೆಲೆ 1 ಆಣೆ.

ಪ್ರಥಮ ಏಜಂಟರು:—

ಎಂಗ್ಲೋ ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂಪೆನಿ, ಬೊಂಬಾಯಿ 2.

ಮಕ್ಕಳ ಪ್ಲೀಹ ಮತ್ತು ಯಕೃತ್ತಿನ ದೋಷಗಳು

ಮಕ್ಕಳ ಪ್ಲೀಹ ಮತ್ತು ಯಕೃತ್ತಿನ ದೋಷಗಳ ಆಕ್ರಮಣವು ಹೆಚ್ಚಾಗಿ ಅಪಾಯಕಾರಕವಾದುದು

ಈ ಕೆಳಗಣ ಸೂಚನೆಗಳು ಅಂತೂ ರೋಗದ ಪ್ರಥಮ ಪಾದದಲ್ಲಿ ಕಂಡುಬರುವುವು.

(1) ಕಾರಣವಿಲ್ಲದೆ ಆಗಾಗ ನಿಪರೀತ ಜ್ವರವೇರುವುದು. (2) ಮಲಬದ್ಧತೆ ಅಥವಾ ಅತಿಸಾರ. (3) ಕಾರಣವಿಲ್ಲದ ವಾಂತಿ. (4) ಮಣ್ಣು ಅಥವಾ ಕೆಸರು ವರ್ಣದ ಮಲ. (5) ಬಾಯಿ ರುಚಿ ಇಲ್ಲದಿರುವಿಕೆ. (6) ತುಸು ಹೊಟ್ಟೆಯುಬ್ಬು. (7) ಮೂತ್ರವನ್ನು ನೆಲದ ಮೇಲೆ ಆರಲು ಬಿಟ್ಟರೆ ಬಿಳಿ ಬಿಳಿಯಾಗಿ ಕಾಣುವಿಕೆ. (8) ತಣ್ಣಗಾದ ನೆಲದ ಮೇಲೆ ಕವಚಿ ಮಲಗಲು ಮಗು ಇಷ್ಟಪಡುವುದು. (9) ಮಗು ಹೆಚ್ಚಾಗಿ ಉತ್ಸಾಹವಿರದ, ಸೋಮಾರಿ, ಜಟುವಟಕೆಹೀನ, ನಗೆಯಿಲ್ಲದಾಗಿರುತ್ತದೆ. ಮಗು [illegible]ರೆಯುದಾಗುತ್ತದೆ.

ಬೆಳೆದ ರೋಗವಾದರೆ ಈ ಕೆಳಗಣ ಕುರುಹುಗಳು ಕಂಡುಬರುವುವು.

(1) ಪ್ಲೀಹದ ಭಾಗದಲ್ಲಿ ನೋವು. (2) ಹೆಚ್ಚಿನ ಜ್ವರ. (3) ಆರಿಸಿನ ಮುಂಡಿಗೆ (ಚರ್ಮ, ಕಣ್ಣುಗಳು ಮತ್ತು ಮೂತ್ರ ಹಳದಿಯಾಗಿರುವಿಕೆ). (4) ಹೊಟ್ಟೆಯಲ್ಲಿ ದ್ರವಪದಾರ್ಥದ ಶೇಖರಣ (ಹೊಟ್ಟೆ ಉಬ್ಬಿನಿಂದಾಗಿ ತಿಳಿಯಬಹುದು). (5) ಹೊಟ್ಟೆಯ ಪ್ರಮುಖ ನರಗಳು ಕಂಡುಬರುವವು. (6) ಕಾಲುಗಳು, ಕೈಗಳು ಮತ್ತು ಮುಖ ಬಾತಂತೆ ಕಂಡುಬರುವುದು.

ಈ ವಿಧದ ಪ್ಲೀಹ ಮತ್ತು ಯಕೃತ್ತಿನ ರೋಗಗಳು ಗುಣಕಾರಿಯಾಗಲು ಕಷ್ಟವೆಂದು ಸಾಮಾನ್ಯವಾಗಿ ಅಭಿಪ್ರಾಯವಿದೆ. **ಜಮ್ಮಿ ವೆಂಕಟ್ರಮಣಯ್ಯ ಗಾರುರವರಿಂದ ಕಂಡುಹಿಡಿದು ಪರಿಶೋಧಿಸಲ್ಪಟ್ಟ** ಅಸಮಾನ ಔಷಧಿ ಜಮ್ಮಿ ವೆಂಕಟ್ರಮಣಯ್ಯನವರ **ಲಿವರ್ ಕ್ಯೂರ್** (ರಿಜಿಸ್ಟರ್ಡ್)ನಿಂದ ರೋಗವನ್ನು ಪರಿಣಾಮಕಾರಕ ರೀತಿಯಲ್ಲಿ ಗುಣಪಡಿಸಬಹುದೆಂದು ಹೆಚ್ಚಿನ ವೈದ್ಯರು ಸಂಪೂರ್ಣವಾಗಿ ಭರವಸೆ ಹೊಂದಿದ್ದಾರೆ.

ಸೂಚನೆ:—ಕೃತಕಗಳಿಂದ ದೂರವಾಗಲು "ಲಿವರ್ ಕ್ಯೂರ್" ಎಂಬ ಟ್ರೇಡ್ ಮಾರ್ಕ್ ಮತ್ತು ಜಮ್ಮಿ ವೆಂಕಟ್ರಮಣಯ್ಯನವರ ಫೋಟೋವನ್ನು ಮುದ್ರೆಮಾಡಲ್ಪಟ್ಟ ವಿಕ್ರಿತವಾಗುವ ಹಳದಿ ರಟ್ಟಿನ ಪೆಟ್ಟಿಗೆಯ ಪ್ಯಾಕೆಟ್‌ಗಳನ್ನು ನೋಡಿರಿ. ಹೆಚ್ಚಿನ ವಿಚಾರಗಳಿಗೆ ಬರೆಯಿರಿ:—

ಜಮ್ಮಿ ವೆಂಕಟ್ರಮಣಯ್ಯ ಎಂಡ್ ಸನ್ಸ್,
ಲಿವರ್ ಕ್ಯೂರ್ ಆಫೀಸ್,
2 & 8 ಸಲಾಯಿ ಸ್ಟ್ರೀಟ್, ಮೈಲಾಪುರ, ಮದ್ರಾಸ್.
ಪೋಸ್ಟ್ ಬೋಕ್ಸ್ ನಂ. 608.

ಮರುಭೂಮಿಯಲ್ಲಿ ರಷ್ಯ ಬಂಗಾರ ಬೆಳೆಯಿಸಿದೆ!

ಅನಾಗರಿಕ ಪಶುಪಾಲಕರು; ಹತ್ತು ವರ್ಷಗಳಲ್ಲಿ ಭಾರತೀಯರಿಗಿಂತ ಮಿಗಿಲಾದ ಸ್ಥಾನ ಪಡೆದರು

ರಷ್ಯದ ಟರ್ಕ್‌ಮೇನಿಯದ ಇತಿಹಾಸ——ಜನಜೀವನ

ಸಾಮ್ರಾಜ್ಯಶಾಹಿತ್ವಕ್ಕೆ ಬಲಿಬಿದ್ದವರ ಅದೃಷ್ಟದ ವಿಚಾರವಾಗಿ ನಮಗೆ ಚೆನ್ನಾಗಿ ತಿಳಿದಿದೆ. ಇಂದು "ರೆಡ್" (ರಷ್ಯ) ಸಾಮ್ರಾಜ್ಯಶಾಹಿತ್ವ ಎಂಬ ಹೊಸತೊಂದು ವಿಚಿತ್ರ ಶಬ್ದವನ್ನು ಈ ಸಾಮ್ರಾಜ್ಯಶಾಹಿಗಳು ಪೋಣಿಸಿ ತಮ್ಮ ಕೃತ್ಯವನ್ನು ಮರೆಸಲೆಳಸಿದ್ದಾರೆ. ಹೇಗಿದ್ದರೂ ಸತ್ಯತೆಗಾಗಿ ಮಥನವನ್ನು ನಡೆಸುವುದು ನಮ್ಮ ಕರ್ತವ್ಯ. ಭಾರತದ ನೆರೆರಾಷ್ಟ್ರವಾದ ರಷ್ಯದ, ಈ ರೆಡ್ ಸಾಮ್ರಾಜ್ಯಶಾಹಿತ್ವದ, ಗೈಮೆಯ ಕಡೆಗೆ ತಿರುಗೋಣ. ರಷ್ಯದ ಕರ್ತವ್ಯದ ಕುರಿತಾಗಿ ಮಾತ್ರ ಹೇಳಿದರೆ, ಓದುಗರಿಗೆ 'ಉಪಸಂಹಾರ'ವನ್ನು ತಿಳಿಯುವುದು ಕಷ್ಟವಾಗದು.

ಕಾಸ್ಪಿಯನ್ ಸಮುದ್ರದಿಂದ ಈಶಾನ್ಯಕ್ಕೆ ಆಮುದರ್ಯ ನದಿಯ ತನಕದ, ಈರಾನ್ ಮತ್ತು ಅಫಗಾನಿಸ್ಥಾನಗಳ ಗಡಿಗಳಲ್ಲಿರುವ ಪ್ರಾಂತ್ಯವೇ ಸನ್ಮೃದ್ಧವಾದ, ಟರ್ಕ್‌ಮೇನಿಯನ್ ಸೋವಿಯಟ್ ಸೋಶಿಯಲಿಸ್ಟ್ ರಿಪಬ್ಲಿಕ್. ವಿಶಾಲವಾದ ಪ್ರದೇಶವಿದಾದರೂ, ಜನಸಂಖ್ಯೆ ಅಲ್ಪ. ವಿಸ್ತಾರದಲ್ಲಿ ರಷ್ಯದ ವಿವಿಧ ಯೂನಿಯನ್ ರಿಪಬ್ಲಿಕ್‌ಗಳಲ್ಲಿ ಇದು ನಾಲ್ಕನೆಯದು. ೧೨ ಲಕ್ಷ ಜನಸಂಖ್ಯೆಯಲ್ಲಿ ಶೇಕಡಾ ೭೨ರಷ್ಟು ಟರ್ಕ್‌ಮೇನಿಯನರು, ಶೇ ೧೦ರಷ್ಟು ಲುಸ್‌ಬೆಕ್ ಮತ್ತು ಶೇ ೮ ರಷ್ಯನರು. ಉಳಿದವರು ಇತರ ರಾಷ್ಟ್ರೀಯರು.

ಈ ಪ್ರಾಂತ್ಯದ ಉತ್ತರ ಭಾಗದ—ಕೋಪೆಟ್-ಡಗ್ ಪರ್ವತಾವಳಿಗಳ ಮಗ್ಗುಲಲ್ಲಿ ಕೃಷಿಯು ಉತ್ತಮ ರೀತಿಯಲ್ಲಿದೆ; ಮಾತ್ರವಲ್ಲದೆ ಕೃಷಿಯು ಇಲ್ಲಿ ಮಾತ್ರ ಸಾಧ್ಯವಿದೆ. ಪ್ರಾಂತ್ಯದ ಇತರ ಭಾಗಗಳಲ್ಲಿನ ಸರಕಾರಿ ಹಾಗೂ ಕಲೆಕ್ಟಿವ್ ಹೊಲಗಳಲ್ಲಿನ ಬೇಸಾಯವು, ಕಾಲಿವೆಗಳ ನೀರಿನ ಸಹಾಯದಿಂದಲೇ ಸಾಗುತ್ತಿದೆ. ಕೃಷಿ—ಮುಖ್ಯವಾಗಿ ಹತ್ತಿ, ಗೋಧಿ ಮತ್ತು ಎಣ್ಣೆ ಸಸ್ಯಗಳು ಸಮೃದ್ಧವಾಗಿವೆ.

ಮರುಭೂಮಿಯಲ್ಲಿ ಖನಿಜ ಸಂಪತ್ತಿ

ಟರ್ಕ್‌ಮೇನಿಯಾ ಪ್ರಾಂತ್ಯದ ಶೇಕಡಾ ೬೦ರಷ್ಟು ಪ್ರದೇಶವು ಜಗತ್ತಿನ ದೊಡ್ಡ ಮರುಭೂಮಿಗಳಲ್ಲೊಂದಾದ ಕಾರಾ-ಕುಮ್ ಮರುಭೂಮಿಯಿಂದ ಆವರಿಸಲ್ಪಟ್ಟಿದೆ. ಇಲ್ಲಿ ರಷ್ಯದ ಭೂಸಂಶೋಧಕರು ಎಣ್ಣೆ ಹಾಗೂ ಗಂಧಕಗಳ ಗನಿಗಳನ್ನು ಕಂಡು ಹಿಡಿದು, ಮರುಭೂಮಿಯ ಮಧ್ಯದಲ್ಲಿ ಗನಿಗಳು ತಲೆ ಎತ್ತುವಂತೆ ಮಾಡಿದ್ದಾರೆ. ಎಣ್ಣೆ ಮಾತ್ರವಲ್ಲದೆ ಟರ್ಕ್‌ಮೇನಿಯದಲ್ಲಿ ಕಲ್ಲಿದ್ದಲು, ಬೆರೈಟ್, ಸುಣ್ಣ, ಗಿಪ್ಸಮ್ ಮುಂತಾದ ಖನಿಜಗಳೂ ದೊರೆಯುವದಲ್ಲದೆ; ಜಲಶಕ್ತಿಯಿಂದ ವಿದ್ಯುತ್ ತಯಾರಿಸಲು ಈ ಪ್ರದೇಶ ಹೆಸರಾಗಿದೆ! ಇದು ಇಂದಿನ ಟರ್ಕ್‌ಮೇನಿಯನ್ ಪ್ರಾಂತ್ಯದ ಉಚ್ಚ ಪರಿಸ್ಥಿತಿಯಾಯಿತು. ಹಿಂದೆ ಇದು ಹೇಗಿತ್ತು?

೧೮೭೭ರಿಂದ ೧೮೮೫ರ ತನಕ ನಡೆದ ಯುದ್ಧದ ಪರಿಣಮವಾಗಿ, ಅಸಮಾನ ಸವಾರರೂ, ಪಶುಪಾಲನ ವೃತ್ತಿಯಲ್ಲೇ ಜೀವನ ಸಾಗಿಸುತ್ತಿದ್ದ ಅವಿದ್ಯಾವಂತರೂ ಆಗಿದ್ದ ಇಲ್ಲಿನ ಜನತೆಯನ್ನು ರಷ್ಯದ ಸರಕಾರ ಗೆದ್ದು ವಶಪಡಿಸಿಕೊಂಡಿತು. ಈ ಸಾಹಸಿಗಳನ್ನು, ಜಾರ್ ಅರಸರುಗಳು ಹಿಂಸಿಸಿ, ಹೀನವಾಗಿ ಕಂಡು ಮೂಲೆಗೆ ತಳ್ಳಿದರು. ಸ್ವತಂತ್ರ ಜನಾಂಗವನ್ನು ಸತ್ವಹೀನರಾಗಿ ಮಾಡಿದರು. ಜಾರ್ ಅರಸರ ಪ್ರತಿನಿಧಿಗಳು ಇಲ್ಲಿನ ಮಂದಿಯನ್ನು ದಂಡಿಸಿ, ಹತ್ತಿ, ಉಣ್ಣೆ, ಚರ್ಮ, ರೇಶ್ಮೆ ಮುಂತಾದವುಗಳನ್ನು ರಷ್ಯಕ್ಕೆ ಸಾಗಿಸತೊಡಗಿದರು. ರಷ್ಯವು ಈ ಕಚ್ಚಾ ಮಾಲುಗಳಿಂದ ತಯಾರಿಸಿದ ವಸ್ತುಗಳನ್ನು ಮತ್ತೊಂದೆಡೆ ಕಳುಹತೊಡಗಿತು.

ಜಮೀನ್ದಾರರ ಜಾಗೀರು ಖಾನರ ಹಾಗೂ ಧರ್ಮ ಗುರುಗಳ ಸಹಾಯದಿಂದ ಈ ಪಶುಪಾಲಕ ಜನಾಂಗದಲ್ಲಿ ಅಂತಃಕಲಹವನ್ನು ಹುಟ್ಟಿಸಿ, ತಮ್ಮ ಅಧಿಕಾರವನ್ನು ಸ್ಥಿರವಾಗಿ ಉಳಿಸಿಕೊಳ್ಳುವದರೊಡನೆ ಕೈಗೆ ಬಂದುದನ್ನೆಲ್ಲ ರಷ್ಯ ದೋಚಿಕೊಳ್ಳಲು ತೊಡಗಿತು. ಸರಿ! ಇಂತಹ ರೀತಿಯ ಆಟ ಇಲ್ಲಿ ಮಾತ್ರವಲ್ಲ, ಜಗತ್ತಿನ ಸಕಲ ಸಾಮ್ರಾಜ್ಯಶಾಹಿ ರಾಷ್ಟ್ರಗಳೂ ತಮ್ಮ ತಮ್ಮ ವಸಾಹತುಗಳಲ್ಲಿ ಹೂಡಿ, ತಮ್ಮ ಚೀಲಗಳನ್ನು ತುಂಬಿಕೊಂಡುವು

ಸಮತಾವಾದಿ ರಷ್ಯ

ರಷ್ಯದ ಸಾಮ್ರಾಜ್ಯಶಾಹಿ ಸರಕಾರವು ಕೆಲ ಸಗಾರರ ಬಂಡಾಯದ ಮೂಲಕ ೧೯೧೭ರಲ್ಲಿ ನಾಶಪಡಿಸಲ್ಪಟ್ಟೊಡನೆ ಈ ದಾಸ್ಯ ಜೀವನದಲ್ಲಿ ನರಳುತ್ತಿದ್ದವರ ಭಾಗ್ಯವು ತೆರೆಯಿತು. ಬೋಲ್ಶೆವಿಕ್ ಹಾಗೂ ರಷ್ಯದ ಮಜೂರರ ಸಹಾಯದಿಂದ ಟರ್ಕ್‌ಮೇನಿಯದ ಮಂದಿಯೂ ಪ್ರಜಾ ಸರಕಾರವನ್ನು ಸ್ಥಾಪಿಸಿ, ಸಮತಾವಾದಿ ತತ್ವವನ್ನು ಆರಂಭಿಸಿದರು. ೧೯೨೪ರಲ್ಲಿ ಇದು ಎಲ್ಲರಿಗಾಗಿ ಇರುವ, ಎಲ್ಲರ ಪ್ರಾಂತ್ಯವಾಯಿತು; ಟರ್ಕ್‌ಮೇನಿಯನ್ ಸೋಸಿಯಲಿಸ್ಟ್ ಸೋವಿಯಟ್ ರಿಪಬ್ಲಿಕ್ ಸ್ಥಾಪಿತವಾಯಿತು. ರಷ್ಯದ ಅರುಣೋದಯವು, ಮೇಲ್ಮೈಯು, ಲೆನಿನ್‌ನ ನಾಯಕತ್ವದಲ್ಲಿ ಆರಂಭವಾಗುತ್ತಿದ್ದಂತೆ, ಅಲ್ಲಿನ ಮಜೂರರೂ, ಮಂದಿಯೂ ಟರ್ಕ್‌ಮೇನಿಯದ ಜನತೆಗೆ ಸಕಲ ಸಹಾಯವನ್ನು ಕೊಟ್ಟು ಅವರು ತಮ್ಮ ಕೈಗಾರಿಕೆ, ಕೃಷಿ, ವಿಜ್ಞಾನ, ಸಂಸ್ಕೃತಿ, ಕಲೆಗಳನ್ನು ಬೆಳೆಸಿಕೊಳ್ಳುವಂತೆ ಮಾಡಿದರು. ಮೂಲೆಗುಂಪಾದ ಪ್ರಾಂತ್ಯವನ್ನು ಮಂದಿ ಮಜೂರರ ಸಹಾಯದಿಂದ ತಲೆ ಎತ್ತಿ ನಿಲ್ಲಿಸಿದರು.

ಅಂದಿನಿಂದ ಅತ್ಯಂತ ದೊಡ್ಡ ದೊಡ್ಡ ಕೈಗಾರಿಕೆಗಳು ಟರ್ಕ್‌ಮೇನಿಯದಲ್ಲಿ ಆರಂಭವಾಗಿವೆ. ಎರಡು ೫ ವರ್ಷಗಳ ಯೋಜನೆಯ ಕಾಲದಲ್ಲಿ ಸುಮಾರು ಸಾವಿರ ಮಿಲಿಯ ರೋಬಲ್‌ಗಳನ್ನು ರಷ್ಯದ ಸರಕಾರವು, ಟರ್ಕ್‌ಮೇನಿಯದ ಕೈಗಾರಿಕೆ, ಕೃಷಿ, ವ್ಯಾಪಾರದ ಮಾರ್ಗಗಳಲ್ಲಿ ಸುರಿಸಿದೆ. ಇಂದು ಇಲ್ಲಿಗೆ ಬೇಕಾಗುವ ಸಾಮಗ್ರಿಗಳಲ್ಲಿ ಶೇ. ೯೦ರಷ್ಟು ಹೊಸದಾಗಿ ಸ್ಥಾಪಿತವಾದ ಕಾರ್ಖಾನೆಗಳಲ್ಲೂ, ಗಿರಣಿಗಳಲ್ಲೂ ತಯಾರಾಗುತ್ತಿದೆ!

ಅಸಮಾನ ಪ್ರಗತಿ

ಇತ್ತೀಚಿಗೆ ಕೆಲ ವರ್ಷಗಳಲ್ಲಿ ಟರ್ಕ್‌ಮೇನಿಯಾದಲ್ಲಿ ಹೊಸದಾಗಿ ಸ್ಥಾಪಿತವಾದ ಸಂಸ್ಥೆಗಳಲ್ಲಿ ಕಿಜಿಲ್-ಅರ್ವತ್‌ನಲ್ಲಿನ ಕಾರು ಮತ್ತು ಮೋಟರ್ ರಿಪೇರಿ ಕಾರ್ಖಾನೆ, ಅಶಖಾಬಾದ್‌ನಲ್ಲಿರುವ ಯಂತ್ರಗಳ ಕಾರ್ಖಾನೆ, ಕರಸ್ನೋವಾಡ್ಸ್‌ಕ್‌ನಲ್ಲಿರುವ ಪ್ರಾಮುಖ್ಯ ಹಡಗು ಕಾರ್ಖಾನೆ ಹಾಗೂ ಹಲವಾರು ಗಿರಣಿಗಳು ಮುಖ್ಯವಾಗಿವೆ. ಆಹಾರ ಸಾಮಗ್ರಿಯು ತಯಾರಿಯೂ ಸಾಗುತ್ತಿದೆ; ಗಾಜಿನ ಕಾರ್ಖಾನೆಯೊಂದು ಅಶಖಾಬಾದ್‌ನಲ್ಲಿ ಇದೀಗ ಸ್ಥಾಪಿತವಾಗಿದೆ. ಟರ್ಕ್‌ಮೇನಿಯನ್ ಜಮಖಾನುಗಳಂತೂ ಜಗತ್ಪ್ರಖ್ಯಾತವಾದವುಗಳು; ಅಲ್ಲದೆ ಹೊಸ ಮಂದಿ ಹೊಸ ಕಾಲದ ವಿಜ್ಞಾನ ಜ್ಞಾನದಿಂದ ಈ ಪುರಾತನ ಕೈಗಾರಿಕೆಯನ್ನು ಉಚ್ಚ ಸ್ಥಿತಿಗೇರಿಸಿದ್ದಾರೆ.

ಕಳೆದ ೧೦ ವರ್ಷಗಳಲ್ಲಿ ಕೈಗಾರಿಕೆಗಳಲ್ಲಿ ದುಡಿಯುವವರ ಸಂಖ್ಯೆ ಹತ್ತು ಮಡಿ ಹೆಚ್ಚಿದೆ. ಟರ್ಕ್‌ಮೇನಿಯಾ ರಿಪಬ್ಲಿಕ್‌ನಲ್ಲಿ ಇಂದು ಮಜೂರರು ಹಾಗೂ ಕೈಗಾರಿಕೆಗಳಲ್ಲಿನ ಆಫೀಸರರ ಸಂಖ್ಯೆ ಸುಮಾರು ೧೪೦ ಸಾವಿರವಿದೆ. ಇವರಲ್ಲಿ ಅರ್ಧಾಂಶಕ್ಕಿಂತಲೂ ಹೆಚ್ಚಿನವರು ಟರ್ಕ್‌ಮೇನಿಯನರು ಮಾತ್ರವಲ್ಲದೆ ಇದಕ್ಕಿಂತಲೂ ಹೆಚ್ಚಿನ ಆಚ್ಚರಿಯೆಂದರೆ ಶೇಕಡಾ ೩೦ರಷ್ಟು ಮಂದಿ ಹೆರುವ ಅಡಿಗೆಮನೆಯ ಪ್ರಾಣಿಗಳಂತಿದ್ದ ಟರ್ಕ್‌ಮೇನಿಯನ್ ಸ್ತ್ರೀಯರು! ಇದು ಮಾಯಾಜಾಲದ ಮಾಟದಂತಹ ಬದಲಾವಣೆ!

ರಷ್ಯದ ಇತರ ಪ್ರದೇಶಗಳಲ್ಲಿನಂತೆ ಟರ್ಕ್‌ಮೇನಿಯದಲ್ಲೂ "ಸಂಘಟಿತ" ಬೇಸಾಯ ಸಾಗುತ್ತಿದೆ. ಶೇಕಡಾ ೯೫ರಷ್ಟು ಮಂದಿ ರೈತರು ಈ ಬೇಸಾಯದಲ್ಲಿ ದುಡಿಯುತ್ತಾರೆ. ನೂರಾರು ವರ್ಷಗಳಿಂದ ಒಮೊಚಾ ಎಂಬ ಮರದ ನೇಗಿಲಿನಿಂದ ಊಳಲ್ಪಡುತ್ತಿದ್ದ ನೆಲವಿಂದು ನಾಲ್ಕು ಸಾವಿರಕ್ಕೂ ಮಿಕ್ಕಿದ ಉಳುವ ಯಂತ್ರ (ಟ್ರೇಕ್ಟರ್)ಗಳಿಂದ ಉಳಲ್ಪಡುತ್ತಿದೆ.

೧೯೩೭ರಲ್ಲಿ ಕೃಷಿ ಮಾಡಲ್ಪಡುತ್ತಿದ್ದ ಪ್ರದೇಶದ ವಿಸ್ತಾರ ೧೯೨೫ರಲ್ಲಿದ್ದುದಕ್ಕಿಂತ ಮೂರು ಮಡಿ ಹೆಚ್ಚಾಗಿದೆ. ಕೃಷಿಯು ವಿಶಾಲತೆಯಿಂದ, ಪ್ರಗತಿಯಿಂದ ರೈತರ ಜೀವನ ಸುಧಾರಿಸಿದೆ; ಹಗುರವಾಗಿದೆ; ತೃಪ್ತಿಕರವೂ ಸುಖಮಯವೂ ಆಗಿದೆ. ಕೃಷಿ ವಿಚಾರವಾಗಿ ತಿಳಿಸುವವರ ಹೆಸರೇ ಕೇಳಿರದ ಪ್ರಾಂತ್ಯಕ್ಕೆ, ಸುಮಾರು ೨೨೫ ಮಂದಿ ಕೃಷಿ ವಿಜ್ಞಾನಿಗಳು, ಸಾಕು ಪ್ರಾಣಿಗಳನ್ನು ಸಾಕುವ ಜ್ಞಾನಿಗಳು, ಕೃಷಿ ವಿದ್ಯಾವಂತರು, ನೀರಾವರಿ ವಿಚಾರವರಿತವರು ಹಾಗೂ ಇತರ ಕೃಷಿ ಸಂಬಂಧದ ವಿಜ್ಞಾನಿಗಳು ಕಳೆದ ವರ್ಷ ತೆರಳಿ, ಮಂದಿಗೆ ತಮ್ಮ ಸಕಲ ಸಹಾಯವನ್ನೂ, ಸೇವೆಯನ್ನೂ ಅರ್ಪಿಸಿದರು.

೧೯೧೭ರ ಬಡವರ ಬಂಡಾಯವಾಗುವ ಮುನ್ನ ಧನಿಕರ ಸರಕಾರ ಆಳಿದು ಬಡವರ ರಾಜ್ಯವಾಗುವ ಮುನ್ನ, ಟರ್ಕ್‌ಮೇನಿಯದಲ್ಲಿ ಸೈನ್ಯದಲ್ಲಿದ್ದವರೂ ಕೂಡಿ ಒಟ್ಟು ೯ ಮಂದಿ ವೈದ್ಯರಿದ್ದರು. ಇಂದಿನ ಸೋವಿಯಟ್ ಟರ್ಕ್‌ಮೇನಿಯದಲ್ಲಿ ಸಾವಿರ ಮಂದಿ ಡಾಕ್ಟರರಿದ್ದಾರೆ; ಅಲ್ಲಿನ ಆಸ್ಪತ್ರೆಗಳಲ್ಲಿನ ಮಂಚಗಳ ಒಟ್ಟು ಸಂಖ್ಯೆ ಸುಮಾರು ೩೪೦೦.

ಅಕ್ಷರತೆ

ಬಂಡಾಯದ ಪೂರ್ವದಲ್ಲಿ ಟರ್ಕ್‌ಮೇನಿಯ ಪ್ರಾಂತ್ಯದಲ್ಲಿದ್ದ ಅಕ್ಷರಸ್ಥರ ಸಂಖ್ಯೆ ಶೇಕಡಾ ಒಂದಕ್ಕೂ ಕಡಿಮೆ. ಇಂದು ಈ ಅಕ್ಷರತಾ ಜ್ಞಾನ ಶೇಕಡಾ ೪೫ಕ್ಕೂ ಮಿಕ್ಕಿದೆ. ಶಾಲೆಗಳಲ್ಲಿ ಆಯಾ ಪ್ರಾಂತ್ಯದ ಹಾಗೂ ಆಯಾ ಜನಾಂಗಗಳ ಮಾತೃಭಾಷೆಯಲ್ಲೇ ಶಿಕ್ಷಣವು ನಡೆಯುತ್ತಿದೆ. ಸುಮಾರು ೧೪೫೫೦೦ ಮಕ್ಕಳು ಇಂದು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇವರಲ್ಲಿ ಸುಮಾರು ೪೦ ಸಾವಿರ ಟರ್ಕ್‌ಮೇನಿಯನ್ ಹೆಣ್ಣು ಮಕ್ಕಳು. ಇಲ್ಲಿ ೩೭ ಹೆಚ್ಚಿನ ವಿದ್ಯಾಭ್ಯಾಸದ ಸಂಸ್ಥೆಗಳಿವೆ. ೭೫೦೦ ಮಂದಿ ಕೈಗಾರಿಕೆ, ಇಂಜಿನಿಯರಿಂಗ್ ಇತ್ಯಾದಿ ವಿಚಾರಗಳಲ್ಲಿ ಕಲಿಯುತ್ತಿದ್ದಾರೆ.

ಥಿಯೇಟರುಗಳು, ಸಿನೆಮಗಳು, ಕ್ಲಬ್‌ಗಳು, ವಾಚನಾಲಯಗಳೇ ಮುಂತಾದ ಸಾರ್ವಜನಿಕ ಸಂಸ್ಥೆಗಳ ಸಂಖ್ಯೆ ಅವ್ಯಾಹತವಾಗಿ ಹೆಚ್ಚಿದೆ. ೨೭ ದಿನ ಪತ್ರಿಕೆಗಳಿವೆ. ಆಯಾ ಭಾಷೆಯ ಜನತೆಗಾಗಿ ಸಹಸ್ರಾರು ಪುಸ್ತಕಗಳು ಪ್ರಕಟಿಸಲ್ಪಡುತ್ತಿವೆ.

ಒಂದು ಕಾಲದಲ್ಲಿ ಕತ್ತಲೆ, ಅವಿದ್ಯೆ, ಬಡತನ, ಅನಾಗರಿಕತೆಯಿಂದ ತುಂಬಿದ ಪ್ರದೇಶ ಬರೇ ೧೭ ವರ್ಷಗಳಲ್ಲಿ, ಐಂದ್ರಜಾಲಿಕನ ಆಟದಂತೆ, ಭಾರತಕ್ಕಿಂತಲೂ ಹೆಚ್ಚಿನ ನಾಗರಿಕತೆಯ ಸ್ಥಿತಿಗೆ ಏರಿದೆ ಎಂದರೆ ಯಾರಿಗೆ ತಾನೆ ಆಚ್ಚರಿಯಾಗದಿರದು?

YOUR FUTURE ★
THE WELL-BEING OF YOUR DEPENDANTS ★
THE UNCERTAINTY OF TO-MORROW! ★

THESE ARE PROBLEMS WHICH FACE A MAN RELENTLESSLY.

It will not do for you to despair. Human intelligence—its history read with the experience of Wars, Famine, Epidemics, Unemployment, Accidents, has perfected in LIFE INSURANCE a safeguard against the difficulties of Future.

Insurance today is a necessity to the rich and poor. It is an estate—an investment which knows no Depreciation. Take out your Policy in the "Popular". It is a local enterprise and deserves your goodwill and co-operation.

The Popular Insurance Company, Limited,

Head Office: **Mangalore, S. J.**

Bombay Branch:
Prospect Chambers,
Hornby Road.

★

Madras Branch:
13, Thambu Chetty St.,
George Town.

★ ಕಳೆದ ವಾರ ★

ಡಿಫೆನ್ಸ್ ಆಫ್ ಇಂಡಿಯಾ ರೂಲ್ಸಿಗೆ

ಶ್ರೀ. ಸುಭಾಷ್‌ಚಂದ್ರ ಭೋಸರೂ ಒಬ್ಬರು ಬಲಿಬಿದ್ದ ಹಾಗಾಯಿತು! ಪ್ರಾಯಶಃ ಹಾಲ್ವೆಲ್ ಸ್ಮಾರಕದ ಧ್ವಂಸ ಅಥವಾ ಅದನ್ನು ಅಲ್ಲಿಂದ ತೆಗೆಯುವ ಪ್ರಯತ್ನದಲ್ಲಿ ಇವರು ಮುಂದಾಳಾಗಿ ನುಗ್ಗಬಹುದೆಂಬ ಈ ಕಾರಣವೇ ಇವರ ಕೈದಿಗೆ ಮೂಲವಾಯಿತೆಂದು ಊಹಿಸಲು ಬರುವಂತಾಯಿತು. ಈ ಸ್ಮಾರಕವನ್ನು ಕಿತ್ತೊಗೆಯುವ ಅಥವಾ ಇದ್ದಲ್ಲಿಂದ ಅತ್ತ ದಾಟಿಸುವ ಈ ವಿಷಯವು ಬಂಗಾಳದ ಮಂತ್ರಿಮಂಡಲದ ಯೋಚನೆಯಲ್ಲಿದ್ದು ಸ್ವಲ್ಪ ಕಾಲವಾಯಿತು. ಮದ್ರಾಸಿನ ಕಾಂಗ್ರೆಸ್ ಸರಕಾರವು, ತನ್ನಲ್ಲಿದ್ದ ನೀಲರ ಪ್ರತಿಮೆಯು ಸಾರ್ವಜನಿಕ ಅಭಿಮಾನಕ್ಕೆ ಕುಂದ ಕವನ್ನು ಉಂಟುಮಾಡತಕ್ಕುದೆಂದು ತಿಳಿದು, ಅದನ್ನು ಕಿತ್ತು ಬಿಸಾಡುವಲ್ಲಿ ಆ ಸರಕಾರ ಕ್ಕೇನೂ ನಷ್ಟವಾಗಲಿಲ್ಲ. ಹಾಗಾದರೆ ಅದೇ ರೀತಿಯ ಕಾರ್ಯಕ್ರಮವನ್ನೇ ಬಂಗಾಳ ಮಂತ್ರಿ ಮಂಡಲವೂ ಏಕೆ ಅನುಸರಿಸಬಾರದಿತ್ತು? ಇಷ್ಟೇ ಅಲ್ಲದೆ ಹಲವು ಮಂದಿ ಆಧ್ಯ ಯುರೋಪೀಯರೂ, —ಇವರಲ್ಲಿ ಹಲವರು ಕಲ್ಕತ್ತೆಯವರೇ— ಈ ಹಾಲ್ವೆಲ್ ಸ್ಮಾರಕವನ್ನು ಅಲ್ಲಿಂದ ಕಿತ್ತು ತೆಗೆಯಬೇಕೆಂದು "ಸ್ಟೇಟ್ಸ್‌ಮ್ಯಾನ್" ಪತ್ರಿಕೆಯಲ್ಲಿ ಬರೆದ ಲೇಖಗಳು, ಬಂಗಾಳದ ಮಂತ್ರಿ ಮಂಡಲಕ್ಕೆ ವಿಶೇಷವಾದ ಸಾಹಾಯ್ಯವನ್ನು ಮಾಡಿದ್ದುವೆಂದು ಬೇರೆ ಹೇಳಬೇಕಾಗಿಲ್ಲ. ಇಷ್ಟಿದ್ದರೂ ಆ ಸ್ಮಾರಕವನ್ನು ಎಂದು ತೆಗೆಯುವುದೆಂಬ ಸೂಚನೆಯೆಂದೂ ಇಲ್ಲದೆ, ಸತ್ಯಾಗ್ರಹಿಗಳ ಕೈದು ಮಾತ್ರ ನಡೆಯುತ್ತಿದೆ. ಸತ್ಯಾಗ್ರಹವನ್ನು ಹೂಡಿದುದರ ವಿಷಯದಲ್ಲಿ ಭಿನ್ನಾಭಿಪ್ರಾಯವಿರಬಹುದಾದರೂ, ಮಿ ಹಕ್ಕರು ಶ್ರೀ. ಭೋಸರನ್ನು ಜೈಲಲ್ಲಿ ಕಂಡು ಮಾತಾಡಿದ ಬಳಿಕ ಈ ಪ್ರಶ್ನೆಯು ಸರ್ವ ಸಮರ್ಪಕವಾಗಿ ಬಗೆಹರಿದೀತೆಂದು ಹಾರೈಸೋಣ.

* * *

ಮಹಾತ್ಮಾಜಿಯವರು

"ಏಕ್ಸಿಸ್" ರಾಷ್ಟ್ರಗಳೊಡನೆ ಬ್ರಿಟನ್ ಕಾದಾಡುವುದು ಬಿಡಲಿ ಎಂದಿದ್ದಾರೆ. ಇದಕ್ಕೆ ಕಾರಣ ಬ್ರಿಟನ್ ಯುದ್ಧಮಾಡಿ, ಮಾಡಿದಣಿದು ಬಳಲಿದೆ ಎಂಬುದಲ್ಲ; ಮುಖ್ಯ 'ಯುದ್ಧ ವೆಂಬುದು ಕೆಟ್ಟದೆಂಬುದರಿಂದಲೇ'. ಬ್ರಿಟನ್ ಈಗ ಭಾಗವಹಿಸಿರುವ ಪಶುಬಲದ ಶಕ್ತಿಯು ಆ ರೀಕ್ಷೆಯಲ್ಲಿ ಬ್ರಿಟನ್ ಸೋಲಬಾರದೆಂದೇ ಮಹಾತ್ಮರ ಅಭಿಲಾಷೆ. ಹಾಗೇ ಪಶುಶಕ್ತಿಯ ಕಾದಾಟದಲ್ಲಿ ಬ್ರಿಟನ್ ಗೆಲ್ಲಬೇಕೆಂದೂ ಅವರು ಅನ್ನುವುದಿಲ್ಲ. ನಾಜಿತ್ವದೊಡನೆ ಬ್ರಿಟನ್ ಯುದ್ಧಮಾಡಬೇಕಾದರೆ ಅದಕ್ಕೆ ತಕ್ಕ ವಜ್ರಾಯುಧವು ಒಂದೇ—ಅದು ಮತ್ತೆ ಅಹಿಂಸಾಮಯವಾದ ಕಾದಾಟ! ಅದನ್ನು ಬಿಟ್ಟು ಈಗಿನಂತೆ ಸಶಸ್ತ್ರಪಾಣಿಗಳಾಗಿ ಕಾದಾಡುವುದರಿಂದ ಏನೇನೂ ಉಪಯೋಗವಿಲ್ಲ; ಈ ತೆರನ ಯುದ್ಧದಿಂದ ಬ್ರಿಟನ್ ತನ್ನನ್ನು ತಾನು ಕಾಪಾಡಿಕೊಳ್ಳಲಾರದು; ಅಥವಾ ಮನುಷ್ಯಕುಲವನ್ನು ಉದ್ಧರಿಸಲಾರದು ಎಂದು ಮಹಾತ್ಮರ ಹೇಳಿಕೆ. ಆಗಲಿ! ಒಂದು ವೇಳೆ ಯುದ್ಧ ಕೆಟ್ಟುದೆಂಬುದನ್ನು ನಾವೂ ಒಪ್ಪಿದರೂ, ಬ್ರಿಟನ್ ತನ್ನ ಶತ್ರುತ್ವದ ಕೈಯನ್ನು ಹಿಂದಕ್ಕೆಳೆಯುವುದರಿಂದ, ಬ್ರಿಟಿನ ರಕ್ಷಣೆಯಾಗಲೀ, ಮನುಷ್ಯಕುಲದ ಉದ್ಧಾರವಾಗಲೀ ಹೇಗೆ ಸಾಧ್ಯವಾದೀತು? ಬ್ರಿಟಿನ ಈ "ಅಹಿಂಸಾ ಮಾರ್ಗ"ವು, ಕ್ರೂರರಾದ ನಾಜಿಗಳಿಗೆ ಇನ್ನಷ್ಟು ಪ್ರೋತ್ಸಾಹವನ್ನು ಉಂಟುಮಾಡಿ, ಕೊನೆಗೆ ಆ "ಅಹಿಂಸಾ ಮಾರ್ಗ"ವೇ, ಬ್ರಿಟಿನ ನಿರ್ಮೂಲಕ್ಕೆ ಕಾರಣವಾಗದೇ? ಅನ್ನುವಾಗ ಯಾವ ಜನಾಂಗವಾದರೂ ಈ ಅಹಿಂಸಾ ಮಾರ್ಗವನ್ನು ಹೇಗೆ ಅನುಸರಿಸೀತು?

* * *

ಬಡತನದಲ್ಲಿ ಅನಾನುಕೂಲವೆಷ್ಟೋ ಇದೆ;

ಅದರಂತೆಯೇ ಕೆಲ ಕೆಲವು ಅನುಕೂಲತೆಗಳೂ ಇವೆ. ಬಡತನದ ಕೆಟ್ಟೊಂದಲ್ಲದಿದ್ದರೆ, ಚೀನೀಯರು, ಅಷ್ಟೊಮ್ಮೆ ಪ್ರಬಲರಾದ ಜಪಾನರ ಮೇಲೆ, ಸಾರೋದ್ಧಾರವಾಗಿ, ೪ ವರ್ಷಗಳ ದೀರ್ಘಕಾಲದ ವರೆಗೆ, ಯುದ್ಧ ಮಾಡಲು ಸಮರ್ಥರಾಗುತ್ತಿದ್ದರೇ? ಮುಖ್ಯವಾಗಿ ಸ್ಥಿರ ಸಂಕಲ್ಪವೂ, ಏಕ ನಿರ್ಧಾರವೂ ಇವು ಅನಿವಾರ್ಯವಾದ ಗಣನೀಯವಾದ ವಿಷಯಗಳಾಗಿವೆ ಮತ್ತು ಈ ಅಂಶದ ಹೋಲಿಕೆಯಲ್ಲಿ ಚೀನೀಯರು ಮಿಕ್ಕ ಯಾವ ಯುರೋಪೀಯ ಜನಾಂಗಗಳಿಗೂ ಕಡಿಮೆಯಾದವರಲ್ಲವೆಂದು ಅವರಿಂದು ಜಗತ್ತಿಗೇ ತೋರಿಸಿ ಕೊಟ್ಟದ್ದಾರೆ. ನೋಡಿ! ಫ್ರೆಂಚರ ಕಡೆಗೆ! ಅದೊಂದು ಅತ್ಯುಜ್ಜ್ವಲ ನಾಗರಿಕತೆಯನ್ನು ಪಡೆದ, ಅಭಿವೃದ್ಧಿಯನ್ನು ಸಂಪಾದಿಸಿದ ಜನಾಂಗ; ದೇಶ. ಆದರೂ ಅಂಥವರ ಅವಸ್ಥೆಯಾದರೂ ಏನಾಯಿತು? ಸ್ವಲ್ಪ ಕಾಲ ಕಾಳಗವಾಡಿ, ಮುಂದೆ ಕಾಳಗ ಬೇಡವೆಂದೆಣಿಸಿ, ಅತ್ಯಲ್ಪ ಸಮಯದಲ್ಲಿಯೇ ಕೈ ಸೋತು, ಶತ್ರುಗಳಿಗೆ ಶರಣಾಗತರಾದರು. ಅಷ್ಟೇ ಹೊರತು ಚೀನೀಯರಂತೆ ದೀರ್ಘಕಾಲ ಕಾಳಗವಾಡಬೇಕೆಂದು ಬಯಸಲೇ ಇಲ್ಲ. ಚೀನೀಯರು ಕೂಡ ಸಾವಿರಾರು ಪ್ರಾಣಗಳನ್ನು ಕಳೆದುಕೊಂಡಿದ್ದರು; ತಮ್ಮ ಹಲವು ನಗರ, ಪಟ್ಟಣಗಳನ್ನು ಕೈಬಿಟ್ಟಿದ್ದರು; ಅವರ ಇತರ ಆಸ್ತಿಸ್ವಾಸ್ಥ್ಯಗಳಾದರೂ ಅಸಾಧ್ಯವಾದ ನಷ್ಟ ಕಷ್ಟಗಳಿಗೊಳಗಾಗಿದ್ದುವು. ಇಷ್ಟಾದರೂ ಆ ಚೀನೀಯರು ತಮ್ಮ ಸ್ವಾತಂತ್ರ್ಯಕ್ಕಾಗಿ ಕಾದಾಡಿದರು; ಇನ್ನೂ ಕಾದಾಡುತ್ತಲೇ ಇರುವರು. ಸರಳವಾದ ಅವರ ಜೀವನ ಪದ್ಧತಿಯೂ, ಅವರ ಬಡತನವೂ ಅವರ ಸಂಗ್ರಾಮವನ್ನು ಬಿಡದೆ ಸಾಗಿಸಲು ಸಹಕಾರಿಯಾಗಿ ನಿಂತುವು. ಇಷ್ಟರ ವರೆಗೆ ಯುರೋಪೀಯರು ಧೈರ್ಯ-ಶೌರ್ಯಗಳಲ್ಲಿ, ಸಹನೆಯಲ್ಲಿ, ಸ್ವಾತಂತ್ರ್ಯ ಪ್ರೇಮದಲ್ಲಿ ತಮಗೆಂದಿಗೂ ಆಷ್ಯಾದವರು ಸರಿಗಟ್ಟಲಾರರೆಂದು ಜಂಬ ಹೊಡೆಯುತ್ತಿದ್ದರು. ಹಾಗೆ ನಮಗೆಲ್ಲ ಹೇಳಿಕೊಟ್ಟಿದ್ದರು. ಇನ್ನು ಫ್ರಾನ್ಸ್ ಹಾಗೂ ಚೀನದವರ ಉದಾಹರಣೆಯನ್ನು ಕಂಡ ಮೇಲಾದರೂ 'ಈ ಗುರು ಮಂತ್ರೋಪದೇಶ'ವನ್ನು ಕೈಬಿಡುವ ಬುದ್ಧಿ ಬಂದೀತೋ ಹೇಗೋ ತಿಳಿಯದು!

ಹಾರಾಡುವ ಸಬ್‌ಮೆರಿನ್‌ಗಳು

ಜಪಾನಿನ ಅಸಮಾನ ಸಾಹಸ

ಕಳೆದ ಒಂದು ವರ್ಷದಿಂದ ಜಪಾನಿನ "ಯೆಸೊ" ಹಡಗು ರಚನಾ ಕೇಂದ್ರದಲ್ಲಿ "ಸಬ್‌ಮೆರಿನ್" ಒಂದರ ಪರೀಕ್ಷೆ ನಡೆಯುತ್ತಿದೆ. ಅತೀ ಚಿಕ್ಕ ರೀತಿಯ ಈ ಯಂತ್ರವು ಇದಾಗಲೇ ಪರಿಣಾಮಕಾರಕವಾಗಬಹುದೆಂಬ ಆಶೆಯನ್ನು ಜಪಾನೀ ಯುದ್ಧಾತುರಿಗಳಲ್ಲಿ ಹುಟ್ಟಿಸಿದೆ. ಬರೇ ೬-೭ ಗಜ ಉದ್ದವಿದ್ದು, ಇದು ನೀರಿನಲ್ಲಿ ಬೇಕಾದಂತೆ ತಪ್ಪಿಸಿಕೊಂಡು ಸರಿಯಬಲ್ಲುದಲ್ಲದೆ, ಭೀಕರವೂ ಆಗಿರುವುದಂತೆ.

ಇಂದು ಜಪಾನಿನ ಬಳಿ ಇಂತಹ ಸುಮಾರು ೧೦ ಸಬ್‌ಮೆರಿನ್‌ಗಳಿವೆ. ಇವುಗಳ ಶಕ್ತಿ ಅದೆಷ್ಟೆಂದರೆ ಇಡೀ ಹಡಗುಪಡೆಯನ್ನೇ ನಾಶಪಡಿಸಲು ಇವು ಸಾಕು. ಅಲ್ಲದೆ ಇದು ಫಕ್ಕನೆ ಜರ್ಮನರ ಕೈಗೆ ಬೀಳುವ ಸಂಭವವೂ ಇಲ್ಲ; ಕಾರಣ ಜಪಾನೀಯರ ಶೋಧ.

ಇತ್ತೀಚಿಗೆ ೧೫ ಮಂದಿ ಚಾಣಾಕ್ಷ ಇಂಜಿನಿಯರೂ, ಮೂವರು ಪತ್ರಿಕಾ ಪ್ರತಿನಿಧಿಗಳೂ ಆಹ್ವಾನಿಸಲ್ಪಟ್ಟು, ಅವರಿಗೆ ಈ ಹೊಸ ತೆರನ ಸಬ್‌ಮೆರಿನ್‌ನ ವಿವಿಧ ಸಾಹಸಗಳನ್ನೂ, ಆಟಗಳನ್ನೂ ತೋರಿಸಲಾಯಿತು. ನೀರಿನ ಅಡಿಯಲ್ಲಿ ಇತರ ಸಬ್‌ಮೆರಿನ್‌ಗಳಂತೆ ಸಾಗಬಲ್ಲ ಇದು, ಫಕ್ಕನೆ ನೀರಮೇಲಕ್ಕೆ ಬರಲು ಅದರ ಗರಿಗಳು ತಿರುಗುವುದರಿಂದಾಗಿ ಮೇಲಕ್ಕೆದ್ದು, ಜಲವಿಮಾನದಂತೆ ಗಾಳಿಯಲ್ಲಿ ಹಾರಾಡಬಲ್ಲುದು.

ಈ ಹೊಸ ಶೋಧದ ಶೋಧ ನಡೆಸಿದ ಸಿ. ಇ. ಟಿಸೊನೂಮಾ, ಮೀನಿನ ದೇಹದಾಕೃತಿಯ ಈ ಯಂತ್ರವನ್ನು ತಾನೇ ನಡೆಸಿ, ಇದರ ಸಾಹಸಗಳನ್ನು ಕಾಣಲು ಬಂದವರ ಇದಿರು ನೀರಲ್ಲಿ ಮುಳುಗಿ ಮಾಯವಾದ. ಸುಮಾರು ಹತ್ತು ನಿಮಿಷಗಳ ನಂತರ ಸಬ್‌ಮೆರಿನ್ ನೀರ ಮೇಲಕ್ಕೆ ಬಂದಿತು. ಅದರ ಮೇಲ್ಬದಿಯಿಂದ ಮೊದಲು ಎರಡು, ಆ ಮೇಲೆ ಒಂದು, ಮತ್ತೊಂದು ಹೀಗೆ ನಾಲ್ಕು ಕೈಗಳು ಕಾಣಿಸಿಕೊಂಡುವು. ಸರಿ, ಇಡೀ ಸಬ್‌ಮೆರಿನೇ ನೀರಿನಿಂದ ಮೇಲಕ್ಕೆ ಏರಲು ಆರಂಭಿಸಿತು. ಸಬ್‌ಮೆರಿನ್ ನೀರ ಮೇಲಕ್ಕೆ ಬಂದ ಬರೇ ಆರು ನಿಮಿಷಗಳಲ್ಲಿ ಅದು ಗಾಳಿಯಲ್ಲಿ ಹಾರಾಡಲು ತೊಡಗಿತು.

ಈ ಹಾರಾಡುವ ಮೀನು, ಅಪಾಯವಿಲ್ಲದೆ, ನೀರ ಅಡಿಯಲ್ಲೇ ೧೦-೧೫ ಮೈಲಿಗಳ ದೂರ ಸರಿಯಬಲ್ಲುದು ಗಾಳಿಯಲ್ಲಿ ಹಾರಲು ಉಪಕ್ರಮಿಸಿದರೆ, ತಾಸಿಗೆ ೬೦೦ ಮೈಲಿಗಳ ವೇಗದಲ್ಲಿ ಸರಿಯಬಲ್ಲುದು. ತನ್ನೊಡನೆ ನಾಲ್ಕು ಟಾರ್ಪೆಡೋಗಳನ್ನೂ ಇದು ಹೊರಬಲ್ಲುದು. ಅರುವತ್ತು ಅಶ್ವಶಕ್ತಿಯ ಮೂರು ಇಂಜಿನುಗಳಿರುವ ಈ ಸಬ್‌ಮೆರಿನ್ ಹಗುರವಾದ ಲೋಹದಿಂದ ತಯಾರಿಸಲ್ಪಟ್ಟಿದೆ. ಇದರ ಗರಿಗಳು ರೇಶ್ಮೆಯಿಂದ ತಯಾರಿಸಲ್ಪಟ್ಟವು

ಯುದ್ಧದ ಹಡಗದ ಮುಂದೆ ಇದು ಸೊಳ್ಳೆಯಂತೆ ಕಾಣಬಹುದು. ಆದರೆ ಈ ಸೊಳ್ಳೆ ಭಯಂಕರವಾದುದು. ಹಡಗುಗಳ ಪರಿವಾರವನ್ನೇ ನಾಶಪಡಿಸಬಲ್ಲುದು.

ನೂತನ ಪಾಠಪಟ್ಟಗನುಸಾರವಾಗಿ ಪ್ರಕಟಿಸಲ್ಪಟ್ಟ ಈ ಕೆಳಗಿನ ನಮ್ಮ ಹೊಸ ಪುಸ್ತಕಗಳು ಮದ್ರಾಸು ಟೆಕ್ಸ್‌ಟ್ ಬುಕ್ ಕಮಿಟಿಯವರಿಂದ ಕ್ಲಾಸು ಉಪಯೋಗಕ್ಕಾಗಿ ಮಂಜೂರಾತಿಯನ್ನು ಹೊಂದಿವೆ.
(Vide consolidated list of approved books, Fort St George Gazette, dated 30-4-1940, pages 59, 60, 62, 68, 70, 71, 86, 87, 88, 92 & 155).

(1) **ಹೊಸ ಕನ್ನಡ ಪಾಠಮಾಲೆ**—೧ರಿಂದ 5ನೇ ದರ್ಜೆಯ ವರೆಗೆ.
(2) **ನೂತನ ಬಾಲ ಗಣಿತ**—3ನೇ ದರ್ಜೆಯಿಂದ 8ನೇ ದರ್ಜೆಯ ವರೆಗೆ.
(3) **ಭಾರತದ ಇತಿಹಾಸ**—6ನೇ, 7ನೇ ಮತ್ತು 8ನೇ ದರ್ಜೆಗಳಿಗೆ
(4) ಡಿ ಡಿ I, II, III, IV ಮತ್ತು V ಫಾರ್ಮುಗಳಿಗೆ.
(5) **ನೂತನ ಸಾಮಾನ್ಯ ಗಣಿತ**—IV ಫಾರ್ಮಿಗೆ.

ಹೊಸ ಕನ್ನಡ ಪಾಠಮಾಲೆಯ 6, 7 ಮತ್ತು 8ನೇ ದರ್ಜೆಯ ಪುಸ್ತಕಗಳು ಅಚ್ಚಿನಲ್ಲಿವೆ.

ಹೆಚ್ಚಿನ ಮಾಹಿತಿಗೆ ನಮಗೆ ಬರೆದುಕೊಳ್ಳಿರಿ: —

ಬಾಲಸಾಹಿತ್ಯ ಮಂಡಲ, ಲಿಮಿಟೆಡ್, ಮಂಗಳೂರು.

★ **You Can Write a Book.** ★

"Certainly not" you will probably say. But hear this. A great author was once asked to name his favourite work. He replied immediately "My bank pass book".

You too can write a book; not a novel perhaps or a poem but one like this author's favourite—the true story of a man who keeps his money matters in order. And a very interesting story it will prove.

Estd. 1906

RESOURCES OF A CRORE ★ **CANARA BANK LIMITED**

ಶಾಸ್ತ್ರೀಯ ಅಮೂಲ್ಯ

ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾ 1-2-0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧಮಹರ್ಷಿಗೆ ಅಶ್ವಿನೀದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3-0-0. ಅಂಚೆವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರುಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಂಕುಚಿತವನ್ನಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ: ಬಾಟ್ಲಿ 1ಕ್ಕೆ ರೂ. 2-0-0.
ಪೋಸ್ಟೇಜು ವಗೈರೆ ಬೇರೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

ಶ್ರೀ। ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ವಿಜೆಂಟರನ್ನಾಗಿ ನೇಮಕಮಾಡಿಯಿದೆ.

ಜಂತನಾಶಕ ಪುಡಿ

ಜಂತುಗಳು ಹೊಟ್ಟೆಯೊಳಗೆ ಬೆಳೆದರೆ ಯಾವ ತರದ ಪೋಷಕ ತಿಂಡಿಗಳು ತಿಂದರೂ ಶರೀರಕ್ಕೆ ಉಪಯೋಗವಿರದು. ಅಲ್ಲದೆ ಸಣ್ಣ ಹುಡುಗರಿಗೆ ಈ ಹುಳುವಿನಿಂದ ತುಂಬಾ ಕೆಡಕಾಗಿರುವದು. ನಮ್ಮ ಜಂತಿನ ಪುಡಿಯಿಂದ ಹೊಟ್ಟೆಯೊಳಗಿನ ಚಿಕ್ಕ ದೊಡ್ಡ ಹುಳಗಳು ಸಲೀಸಾಗಿ ಮಲದೊಡನೆ ಬಿದ್ದು ಹೋಗುವದು. ಇದಕ್ಕೆ ಹರಳೆಣ್ಣೆ ತೆಕ್ಕೊಳ್ಳುವದು ಬೇಡ. ಪೆಕೆಟು 1ಕ್ಕೆ 0-1-0.

ಮೆಜಿಕ್ ಕ್ಯೂರ್

ಈ ಪ್ರಸಿದ್ಧವಾದ ಔಷಧಿಯು, ಅರ್ಧ ತಲೆನೋವು, ವಾಯು ಹೊಟ್ಟಿನೋವು, ಜಳಜ್ವರ, ಹಲ್ಲುನೋವು, ನೆಗಡಿ, ಕೆಮ್ಮು, ಇನ್‌ಫ್ಲ್ಯೂಯೆಂಜ ಮುಂತಾದವುಗಳ ಮೇಲೆ ಗುಣಕಾರಿಯಾಗಿದೆ. ಪೆಕೆಟು 1ಕ್ಕೆ 0-1-6.

ತಯಾರಿಸುವವರು:
SHIVAJI CHEMICAL WORKS,
BELGAUM.

ವಿಕ್ರಿತ ಮಾಡುವವರು:
ಶ್ರೀ. ಹರಿದಾಸ್ ಭಂಡಾರಿಗಳು ಮತ್ತು ಷಾ ಕಂಪೆನಿ, ಮಂಗಳೂರು.

ವಿದೇಶ

ಐಯರ್‌ಲ್ಯಾಂಡ್

ಐಯರ್‌ಲ್ಯಾಂಡಿನ ತಾಟಸ್ಥ್ಯ ಬ್ರಿಟನ್ನಿಗೆ ತಲೆಬೇನೆ ತಂದಿದೆ. ವೈರಿಗಳು ಈ ಪ್ರಾಂತ್ಯದ ಮೇಲೆ ಬಿದ್ದು ಮುಂದೆ ಇಂಗ್ಲಾಂಡಿನ ಮೇಲೇರಿ ಬರಬಹುದೆಂಬ ಸಂಶಯ ಬಲವಾಗಿದೆ. ಇದೀಗ ಸಂಧಾನದ ಮಾರ್ಗ ಅಳಿದುದರಿಂದ ಐಯರ್‌ಲ್ಯಾಂಡಿನ ತಾಟಸ್ಥ್ಯ ಭಂಗದ ಸಂಭವವಿರುವಂತೆ ಮಾಡಲು ಬ್ರಿಟನ್ನು ಯೋಚಿಸುತ್ತಿದೆ.

ಫ್ರಾನ್ಸ್

ಫ್ರೆಂಚ್ ನ್ಯಾಯವಿಧಾಯಕ ಸಭೆಯು ಹೊಸ ಘಟನೆಯನ್ನು ಕಾರ್ಯತಃ ತರಲು ಸರ ಕಾರಕ್ಕೆ ಅಧಿಕಾರ ಕೊಟ್ಟಿದೆ.

ಅಮೇರಿಕೆ

ರಕ್ಷಣಾ ಕಾರ್ಯಕ್ಕಾಗಿ ಅಮೇರಿಕೆಯು ಪುನಃ ಳಲಳಲ ವಿಲಿಯ ಡಾಲರುಗಳನ್ನು ವ್ಯಯಿ ಸಲು ನಿಶ್ಚಯಿಸಿದೆ ಯುರೋಪಿನ ಸಮರದಲ್ಲಿ ತಾವು ಭಾಗವಹಿಸುವುದಿಲ್ಲೆಂದೂ, ತಮ್ಮ ರಕ್ಷ ಣೆಗೆ ಸದಾ ಸಿದ್ಧವಾಗಿಯೇ ಇರಲು ಈ ಸಾಹಸ ವೆಂದೂ ರೂಸ್‌ವೆಲ್ಟರು ಸಾರಿದ್ದಾರೆ ಈ ಯೋಜನೆಯಿಂದ ೧೫ ಲಕ್ಷ ಸೇನೆಗೆ ಬೇಕಾದ ಸಕಲ ಶಸ್ತ್ರಾಸ್ತ್ರಗಳೂ, ಟ್ಯಾಂಕ್‌ಗಳೂ, ೨೪೫೯ ವಿಮಾನಗಳೂ ರಚಿಸಲ್ಪಡುವವಂತೆ.

ಇಂಗ್ಲೀಷ್ ಕಾಲಿವೆ

ಇಲ್ಲಿ ಇದುವರೆಗೆ ಸಾಗಿರದಂತಹ ಭೀಕರ ವಿಮಾನ ಯುದ್ಧವೊಂದು, ಬ್ರಿಟಷ್ ಹಾಗೂ ಜರ್ಮನ್ ವಿಮಾನ ಪಡೆಗಳೊಳಗೆ ಸಾಗಿತೆಂದು ವಾರ್ತೆ. ಜರ್ಮನ್ ವಿಮಾನಗಳು ದಕ್ಷಿಣ ಇಂಗ್ಲಾಂಡ್ ಹಾಗೂ ಇತರ ಬದಿಗಳಲ್ಲಿ ಸುಮಾರು ೫೦೦ ಬಾಂಬುಗಳನ್ನು ಸುರಿಸಿವೆ. ೧೪ ಜರ್ಮನ್ ವಿಮಾನಗಳು ಉರುಳಿಸಲ್ಪಟ್ಟವೆ.

ಬೊಹೇಮಿಯ

ಇಲ್ಲಿ ಕೊಮ್ಯುನಿಸ್ಟ್ ಹಾಗೂ ಮಜೂರ ದಳದ ಕೆಲಸಗಾರರನ್ನು ಜರ್ಮನ್ ಗೂಢಚಾ ರರು ಹಿಂಸಿಸುತ್ತಿರುವರೆಂದು ಲಂಡನಿನ ವಾರ್ತೆ.

ಕೆನಡಾ

ಕೆನಡಾವು ಬ್ರಿಟನ್ನಿಗೆ ಯೋಗ್ಯ ಸಹಾಯ ಕೊಡುವದರೊಡನೆ ತನ್ನ ರಕ್ಷಣೆಯ ಕಾರ್ಯ ಕ್ಕಾಗಿ ಮಂದಿಯನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವ ಯೋಜನೆ ನಡೆಸಿದೆ. ಅಲ್ಲದೆ ಈಗಿರುವ ಸಕಲ ಸೈನಿಕರನ್ನೂ ಯುರೋಪಿನೆಡೆ ಕಳುಹಿಸಲಾಗು ವುದೆಂದು ಗೊತ್ತಾಗಿದೆ.

ಹಂಗೇರಿ

ಹಂಗೇರಿಯು ತನಗೆ ರುಮೇನಿಯದಿಂದ ದೊರೆಯಬೇಕಾದ ಪ್ರದೇಶಕ್ಕಾಗಿ ಈಗ ಯತ್ನಿ ಸದೆ ಸುಮ್ಮನಿರಬೇಕಾಗಿ ಜರ್ಮನಿಯು ಸೂಚಿ ಸಿರುವದೆಂದು ತಿಳಿದುಬಂದಿದೆ.

ಹಿಟ್ಲರ್‌ನ ಸಂಧಾನ

ಮೆಡಿಟರೇನಿಯನ್ ಹಾಗೂ ಪೂರ್ವ ಯುರೋಪಿನಲ್ಲಿ ಮೊದಲು ಗೊಂದಲ ಹರಡಿ, ಬ್ರಿಟನ್ನಿನೊಡನೆ ಸಂಧಾನಕ್ಕೆ ಮುಂದಾಗಬಹು ದೆಂದು ಮಿ। ವೆರ್ನನ್ ಬಾರ್ಟ್‌ಲೆಟ್‌ರವರು ಹೇಳಿರುವರು. ನಾಜಿ ಅಂಕೆಯ ರೇಡಿಯೋ ಗಳು ಮಿ. ಚರ್ಚಿಲ್ಲರನ್ನು ಹೊರದೂಡಿ ನಾಜಿ ಗಳಲ್ಲಿ ಸೌಹಾರ್ದ ತೋರುವ ಸರಕಾರವನ್ನು ಬ್ರಿಟಿಷರು ಸ್ಥಾಪಿಸಿ ಬದುಕಲೆಂದು ಉಪದೇಶ ವೀಯುತ್ತಿವೆ.

ರುಮೇನಿಯಾ

ರುಮೇನಿಯವು ಜನಾಂಗ ಸಂಘದ ಸಂಬಂಧ ಮುರಿದಿದೆ

ಉತ್ತರ ಆಫ್ರಿಕಾ

ಬ್ರಿಟಷ್ ಮಾಯಲೆಯ ಮೇಲೆ ವೈರಿಗಳ ವಿಮಾನಗಳು ಸಾಕಷ್ಟು ಹಲ್ಲೆ ನಡೆಸಿವೆ. ವಿವಿಧ ಪ್ರದೇಶಗಳಲ್ಲಿ ವಿಮಾನಗಳ ಸಾಹಸ ಸಾಗು ತ್ತಿದೆ.

ಟರ್ಕಿ

'ಟರ್ಕಿಯ ತಾಟಸ್ಥ್ಯಕ್ಕೆ ಭಂಗಬಂದಲ್ಲಿ ಅದು ಕೊನೆಯ ತನಕ ಕಾದಲು ನಿಶ್ಚಯಿಸಿದೆ' ಎಂದು ಟರ್ಕಿಯ ಪ್ರಧಾನರಾದ ಡಾ॥ ಸೇಡಮ್ ರವರು ಜರ್ಮನಿಗೆ ಎಚ್ಚರಿಕೆ ಇತ್ತಿದ್ದಾರೆ. ಟರ್ಕಿಯು ಬ್ರಿಟನ್ನಿಗೆ ಯಾವ ಸಹಾಯವನ್ನು ಮಾಡುವುದಿಲ್ಲವಾದರೂ, ಜರ್ಮನರ ಕುಹಕ ಗಳಿಂದ ಕ್ಷೋಭೆಗೊಂಡಿದೆ



3 'ಎಸ್ಪ್ರೊ' ಬಿಲ್ಲೆಗಳಿಗೆ ಆಣೆಗಿಂತ, ಅಥವಾ 30 ಬಿಲ್ಲೆಗಳಿಗೆ 10 ಆಣೆಗಿಂತ ಹೆಚ್ಚಾಗಿ ಕೊಡುವ ಕಾರಣವಿಲ್ಲ. ಎಸ್ಪ್ರೊ ಎಲ್ಲೆಲ್ಲಿಯೂ ದೊರೆಯುತ್ತದೆ. ಪ್ರತಿಯೊಂದು ಬಿಲ್ಲೆಯನ್ನೂ ಪ್ರತ್ಯೇಕವಾಗಿ ಸೀಲು ಮಾಡಲಾಗಿದೆ. ಮತ್ತು ಪ್ರತಿಯೊಂದೂ ತೇವವನ್ನು ಹೀರದಂತಹ ಆವರಣಗಳ ಲ್ಲಿವೆ. ಅವು ವರ್ಷಗಟ್ಟಲೆಗಳವರೆಗೆ ಹೊಸದಾಗಿಯೂ ಶುದ್ಧವಾಗಿಯೂ ಇರುವುವು.

'ಎಸ್ಪ್ರೊ' ಒಂದೇ ಹನ್ನೆರಡು ಔಷಧಿಗಳಿಗೆ ಸರಿಸಮಾನ

'ಎಸ್ಪ್ರೊ' ಏನು ಮಾಡುತ್ತದೆ?

ಮಲೇರಿಯಾ ಜ್ವರವನ್ನು ನಿವಾರಣೆಮಾಡುತ್ತದೆ-

5 ನಿಮಿಷಗಳಲ್ಲಿ ತಲೆನೋವನ್ನು ನಿಲ್ಲಿಸುತ್ತದೆ ಒಂದೇ ರಾತ್ರಿಯಲ್ಲಿ ವಾತರೋಗವನ್ನು ಓಡಿಸುತ್ತ ದೆ. ಹಲವು ನಿಮಿಷಗಳಲ್ಲೇ ಜ್ವರವನ್ನು ಇಳಿಸುತ್ತದೆ. ಹಲ್ಲು ನೋವನ್ನೂ ನರಗಳ ನೋವನ್ನೂ ತಕ್ಷಣ ನಿಲ್ಲಿಸುತ್ತದೆ. ನೋವುಗಳನ್ನೂ ಶೂಲೆಗಳನ್ನೂ ಶಮನಗೊಳಿಸುತ್ತದೆ. ನಿದ್ದೆ ಬಾರದ ವರಿಗೆ ಸುಖ ನಿದ್ದೆ ಬರಿಸುತ್ತದೆ. ಮನಸ್ಸಿನ ಕಿರಿಕಿರಿಯನ್ನು ನಿವಾರಿಸುತ್ತದೆ. ಸ್ತ್ರೀಯರ ಶೂಲೆಗ ಳನ್ನು ನಿವಾರಿಸುತ್ತದೆ. ಅದರಿಂದ ಬಾಯಿಮುಕ್ಕಳಿಸಿದರೆ ಗಂಟಲು ಕೆರೆತವು ಹೋಗುತ್ತದೆ. ನೆಗಡಿಯನ್ನೂ, ಇನ್‌ಫ್ಲ್ಯುಯೆಂಜಾವನ್ನೂ ಪರಿಹರಿಸುತ್ತದೆ. ಡಂಗೀ ಜ್ವರವನ್ನು ಶೀಘ್ರವಾಗಿ ಕಿತ್ತೊಗೆಯುತ್ತದೆ. ಸಾಂಕ್ರಾಮಿಕ ವ್ಯಾಧಿಗಳನ್ನೆಲ್ಲ ಕೊನೆಗಾಣಿಸುತ್ತದೆ.

ಆರೋಗ್ಯಕರವಾದ ಮೂಲಕಗಳನ್ನು ತೆಗೆದುಕೊಳ್ಳಬೇಕಿ ನೋವನ್ನೂ ಜ್ವರವನ್ನೂ ನಿವಾರಿಸಲು 'ಎಸ್ಪ್ರೊ' ಸೇವಿಸಿರಿ

ಒಂದು ಮೊಗು ಕೂಡ 'ಎಸ್ಪ್ರೊ'ವನ್ನು ಕೆಡು ಕಿಲ್ಲದೆ ಸೇವಿಸಬಹುದು.

'ಎಸ್ಪ್ರೊ' ಹೃದಯಕ್ಕಾಗಲಿ ಜಠರಕ್ಕಾಗಲಿ ಹಾನಿಕರವಲ್ಲ.
'ಎಸ್ಪ್ರೊ'ವನ್ನು ಯಾವಾಗ ಬೇಕಾದರೂ
ಎಲ್ಲಿಯಾಗಲಿ, ಯಾವಿಧದಲ್ಲಿಯಾಗಲಿ.
ಸೇವಿಸಬಹುದು.

ಎಲ್ಲೆಲ್ಲೂ ಮಾರಲ್ಪಡುತ್ತದೆ.

ಏಜೆಂಟರು: ಜೆ. ಎಲ್. ಮೊರಿಸ್ ಸನ್ ಎಂಡ್ ಜೋನ್ಸ್ (ಇಂಡಿಯಾ) ಲಿಮಿಟೆಡ್, ಪೋ. ಬಾ. 1370, ಮದರಾಸು. (ಫೋ॥ 3126) ಮತ್ತು ಬ್ರಾಂಚುಗಳು.

K-B103

ಬ್ರಿಟನ್—ಜಪಾನ್

ಬ್ರಿಟನ್ನು ಸಂಪೂರ್ಣವಾಗಿ ಚೀನದ ಕೈ ಬಿಟ್ಟು, ಜಪಾನಿಗೆ ಹೆದರಿ ನಿಂತಿದೆ. ಚೀನಕ್ಕೆ ಬರ್ಮದ ಮೂಲಕ ಯಾವ ಸಾಮಗ್ರಿಯನ್ನೂ ಕಳುಹಿಸಲಾಗುವುದಿಲ್ಲವೆಂದು ಬ್ರಿಟನ್ ತಿಳಿಸಲು, ಜಪಾನೇ ಈ ಕಾರ್ಯದ ರಕ್ಷಣೆ ಸಾಗುವಂತೆ ತಕ್ಕ ಅಧಿಕಾರಿಗಳನ್ನು ನೇಮಿಸಲಿದೆ.

ಅಮೇರಿಕೆ

ಪ್ರೆಸಿಡೆಂಟ್ ರೂಸ್‌ವೆಲ್ಟರಿಗೇ ಅಧ್ಯಕ್ಷ ಪದವಿಯು ಮೂರನೆಯ ಬಾರಿಗೆ ದೊರೆಯ ಬಹುದೆಂಬ ಸಂದೇಹವೊದಗಿದೆ.

ಫ್ರಾನ್ಸ್ ಮಂತ್ರಿಮಂಡಲ

ಇದರ ರಚನೆ ನಡೆದು ಮಾರ್ಷಲ್ ಪೀಟೆನ್ ರವರು ಫ್ರಾನ್ಸಿನ ಸರ್ವಾಧಿಕಾರಿಗಳಾಗಿದ್ದಾರೆ. ಮಂತ್ರಿಮಂಡಲದಲ್ಲಿ ಮಿ।ಗಳಾದ ಲಾವಲ್, ಅಲಿ ಬರ್ಟ್, ಮಾರ್ಕ್ವೆಟ್, ಬೋಡೀನ್, ಬೋತಿಲ್ಲಿ ಯರ್, ಜನರಲ್ ವೇಗಾಂಡ್, ಮಿರ್‌ಕೋಕ್ಸ್, ಬಾರ್ನೆಗರೀ, ಕಾಜಿಯಟ್, ಪೀತ್ರಿ, ಲೆಮೆರಿ ಯವರು ಸೇರಿದ್ದಾರೆ.

ಬ್ರಿಟಿಷ್ ಸಾಹಸ

ಬ್ರಿಟನ್ನಿನ ಪೂರ್ವ ಕರಾವಳಿಯ ಮೇಲೆ ನಿತ್ಯದಂತೆ ಜರ್ಮನ್ ವಿಮಾನಗಳು ಭೀಕರ ಹಲ್ಲೆ ನಡೆಸಿದಾಗ, ಬ್ರಿಟಷ್ ವಿಮಾನಗಳು ನಾಲ್ಕು ಜರ್ಮನ್ ವಿಮಾನಗಳನ್ನು ಕೆಳಗುರು ಳಿಸಿದುವು.

ರುಮೇನಿಯ

ರುಮೇನಿಯದ ಎಣ್ಣೆ ಕೈಗಾರಿಕೆಯನ್ನು ಸರಕಾರವು ತನ್ನ ವಶ ಸೆಳೆದುಕೊಳ್ಳಬೇಕೆಂದು ಜರ್ಮನಿ ತಿಳಿಸಿದೆ. ಹೀಗೆ ಮಾಡಿದರೆ ವಿವಿಧ ರಾಷ್ಟ್ರಗಳಿಗೆ ಹೋಗುವ ಎಣ್ಣೆ ತಪ್ಪಿ ಹೋಗು ವುದು. ಇದಕ್ಕೆ ಪ್ರತಿಯಾಗಿ ಜರ್ಮನಿಯು; ರುಮೇನಿಯದ ಭಾಗವನ್ನು ಹಂಗೇರಿಯು ಕೇಳ ದಂತೆ ಮಾಡುವುದಂತೆ.

ಯಚ್.ಯಂ.ಯಸ್. "ವಾರಿಯರ್ ೨"

ಇಂಗ್ಲೀಷ್ ಕಾಲಿವೆಯಲ್ಲಿ ವೈರಿಗಳ ಬಾಂ ಬಿಗೆ ಸಿಕ್ಕಿ ಬ್ರಿಟಿಷರ ರಕ್ಷಣಾ "ವಾರಿಯರ್ ೨" ಳುಗಿತಂತೆ.

ಸ್ಪೈನ್

ಇಲ್ಲಿ ಜರ್ಮನಿಯಲ್ಲಿ ಅಚ್ಚಾದ ನೋಟು ಗಳು ಹರಡಲು ತೊಡಗಿನೆಯಂತೆ. ಅಂತೂ ಇಲ್ಲಿಂದ ಬೇಕಷ್ಟು ಬಂಗಾರ ನುಂಗುವ ಯೋಜನೆ ಜರ್ಮನಿಯದು. ಇದರಿಂದ ಸ್ಪೈನ್ ಗಾಬರಿ ಗೊಂಡಿದೆ.

Ford

8 H. P. Four Cylinder Car

The Most Economical Car



U. Subraya Nayak,
FORD DEALER,
MANGALORE.

ರಾಜಾ ಸ್ನೋ

ಅಂದಕ್ಕಾಗಿ

ಮಣ್ಯಂ ಅಂಡ್ ಕೋ.,
ಮದರಾಸು ಮತ್ತು ಬೆಂಗಳೂರು

PANDIT BANK,
MANGALORE.

ಪಂಡಿತ್ ಬೇಂಕ್,

ಕೋರ್ಟು ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ಮ ಕಾಯಂ ಠೇವಣಾತಿ ಯಾನೆ ಡಿಪೊಜಿಟ್‌ಗಳನ್ನು ಪಡಕೊಳ್ಳುವದೂ, ಚಿನ್ನಾಭರಣ ವಗೈರೆಗಳ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡುವದೂ, ಸೇಫ್ ಡಿಪೊಜಿಟ್ ಪಡೆಯುವದೂ ವಗೈರೆ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹಳ ಸುಲಭವಾದ ಬಡ್ಡಿ ವ ಶರತುಗಳೊಡನೆ ಮಾಡೋಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬೆಲಿಟಿಯದು ಆಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿನ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಬಹಳ ಸುಲಭವಾದ ಬಡ್ಡಿ ದರಗಳಲ್ಲಿ ಹಣ ಎಡ್ವಾನ್ಸ್ ಮಾಡೋಣಾಗುತ್ತದೆ.

ಚಾಲ್ತಿ ಠೇವಣಾತಿ:

ಪ್ರತಿದಿನದ ತಿಲ್ಕಿನ ಮೇಲೆ	ಶೇಕಡಾ 1½ %
ಸೇವಿಂಗ್ಸ್ ಬ್ಯಾಂಕ್:	ಶೇಕಡಾ 3 %

ನಿರಖು ಠೇವಣಾತಿ:

6 ತಿಂಗಳುಗಳಿಗೆ	ಶೇಕಡಾ 4 %
1 ವರ್ಷಕ್ಕೆ	ಶೇಕಡಾ 4½ %

PANDIT SHIVA RAO, B.A., LL.B.,
PROPRIETOR.

PANDIT SANJIVA RAO, B.A.
AGENT.

ಗ್ರೇಂಡ್
ಆಕ್ಷನ್ ಸೇಲ್

ತಾ. 10-7-1940ರಿಂದ
ಕೆಲವೇ ದಿವಸಗಳ ವರೆಗೆ ಮಾತ್ರ
ಪ್ರತಿ ಆದಿತ್ಯ ಬುಧ ಶುಕ್ರವಾರಗಳಲ್ಲಿ

ಅನೇಕ ತರದ ಜವುಳಿಗಳನ್ನು ಬಹು ಕಡಿಮೆ ಬೆಲೆಯಲ್ಲಿ ಏಲಂ ಮಾಡಲಾಗುವುದು.

ಏಲಂ ಸಂಜೆ ಘಂಟೆ 5ಕ್ಕೆ ಪ್ರಾರಂಭ.

ಏಲಂ ಇಲ್ಲದ ಸಮಯಗಳಲ್ಲಿ ಅತೀ ಕಡಿಮೆ ಬೆಲೆಯಲ್ಲಿ ರಖಂ ಮತ್ತು ಚಿಲ್ಲರೆ ವಿಕ್ರಿತವು ಮಾಡಲಾಗುವುದು.

ಸೇಲಂಕಾರ್,
ಎ. ವರದರಾಜು ಚೆಟ್ಟಿಯಾರ್,
ಜವುಳಿ ಅಂಗಡಿ ಮಾರ್ಕೆಟ್ ರೋಡು,
ಮಂಗಳೂರು.

For Sale

H. M. V. Cabinet Size Gramophone, in perfect order with many latest Film Records. Price Rs. 125/—or nearabout.

Apply sharp:
B. B.,

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

THE CANARA BANKING CORPORATION, LTD.

(Incorporated in British India)

ನಾಟಕವು ಆಟವಲ್ಲ. ಜೀವನದ ಆಸೆಯ ಸಂಗ್ರಾಮ ದರ್ಶನ ಮಾರ್ಗ.
—ಸೂಕ್ತಿಮಾಲೆ

XXII] ಮಂಗಳೂರು, ತಾರೀಕು ೧೬—೭—೧೯೪೦ [೩೧
೧೮೬೨ ವಿಕ್ರಮ ಸಂವತ್ಸರದ ಆಷಾಢ ಶು। ೧೨ ಕುಜವಾರ

ಹಿಂದೀಯರೂ, ಡಿಫೆನ್ಸ್ ಸರ್ವಿಸೂ

ಸೈನ್ಯ ಶಾಖೆಯಲ್ಲಿ ಹಿಂದೀಯರಿಗೆ ಉದ್ಯೋಗ ದೊರಕಿಸಿ ಕೊಡುವ ಕುರಿತು, ಈಚಿಗೆ ಮಿ. ಅಮರಿಯವರು ಕೊಟ್ಟಿರುವ ಆ ಉತ್ತರವು, ಬಹಳ ಮಟ್ಟಿಗೆ ನಿರಾಶೆಯನ್ನು ಉಂಟು ಮಾಡುವುದಾಗಿದೆ ಎನ್ನಬೇಕು. ಆ ಉತ್ತರದಿಂದ ಕೆಲವು ಮಂದಿ ಹಿಂದೀಯರಿಗೆ ಕೆಲಸ ಸಿಕ್ಕಿರ ಬಹುದೆಂದು ವೇದ್ಯವಾಗುವುದಾದರೂ, ಈ ಶಾಖೆಯ ಉದ್ಯೋಗಗಳಿಗಾಗಿ ಅರ್ಜಿ ಹಾಕಿದ ಹಲವರಿಗೆ ಕೆಲಸ ದೊರಕಲಿಲ್ಲವೆಂದೂ ಸ್ಪಷ್ಟವಾಗುತ್ತಿದೆ. ಇದಕ್ಕೆ ಕಾರಣವು "ಅರ್ಜಿದಾರರಲ್ಲಿ ಯೋಗ್ಯತೆ ಸಾಲದಿರುವುದೇ ಆಗಿರಬೇಕೆ"ಂದು ಮಿ. ಅಮರಿಯವರ ಸಮಾಧಾನ

ಮಿ. ಅಮರಿಯವರು, ಇಷ್ಟಾದರೂ, ಹಿಂದೂ ಉಮೇದುವಾರರು ಯಾವ ವಿಷಯಗಳಲ್ಲಿ ಕಡಿಮೆಯಾದವರೆಂದು ಸೂಚಿಸಿಲ್ಲ ಅವರು ಸೈನ್ಯ ಶಾಖೆಯ ಕೆಲಸಗಳಲ್ಲಿ ಭಾಗವಹಿಸಬೇಕಾದರೆ ಎಂತಹ ಯೋಗ್ಯತೆಯನ್ನು ಸಂಪಾದಿಸಿರಬೇಕೆಂದು ಆ ನಮ್ಮ ಸ್ಟೇಟ್ ಸೆಕ್ರಟರಿಗಳು, ಕಂಠೋಕ್ತವಾಗಿ ನಮೂದಿಸುವುದಿಲ್ಲ. ಒಟ್ಟಿನಲ್ಲಿ "ಇಂಡಿಯದಲ್ಲಿ ಯೋಗ್ಯರಾದ 'ರಿಕ್ರ್ಯೂಟ್'ಗಳು ದೊರೆಯುವುದಿಲ್ಲ!" ಎಂಬ ಇದೊಂದು ಸಂಗತಿ ಮಾತ್ರ ಈಗ ಸ್ಥಾಪಿಸಲ್ಪಟ್ಟ ಹಾಗಾಗಿದೆ. ಹಾಗಾದರೆ, ಇಷ್ಟೊಂದು ದೊಡ್ಡ ಸಂಖ್ಯೆಯ ಅರ್ಜಿಗಳನ್ನು ಏತಕ್ಕೆ ತಿರಸ್ಕರಿಸಬೇಕಾಯಿತೆಂಬ ವಿಷಯದಲ್ಲಿ, ಸಿಲೆಕ್ಷನ್ ಬೋರ್ಡ್ ತನ್ನದೊಂದು ವರದಿಯನ್ನೂ ಬರೆದೊಪ್ಪಿಸುವುದೂ ಅತ್ಯಗತ್ಯವೇ ಆಗಿದೆಯಲ್ಲವೇ? ಆ ವರದಿಯೊಂದು ಮುಂದೆ ಬಂದರೆ, ಆಗ ಈ ಆ ಅರ್ಜಿದಾರರು ತಾವು ಯಾವ ಭಾಗದಲ್ಲಿ ಹಿಂದುಳಿದಿದ್ದೇವೆ, ಯಾವ ಭಾಗದಲ್ಲಿ ಮುಂದೆ ಬರಬೇಕು ಎಂದು ತಿಳಿಯಲಾಸ್ಪದವಾಗದೇ?

ಇತರ ವಿಷಯಗಳು ಹೇಗಿದ್ದರೂ, ಇದೊಂದು ವಿಷಯವು ಎಲ್ಲ ದೇಶಗಳಿಗೂ ಅನ್ವಯಿಸುತ್ತಿದೆ ಎಂಬುದು ನಿರ್ವಿವಾದ. ಫ್ರಾನ್ಸ್ ತನ್ನ ಸೈನ್ಯಾಧಿಕಾರಿಯಾಗಿ ಕೆಲಸ ಮಾಡಲು ಸ್ವಿಸ್ ದೇಶೀಯರನ್ನು ಜುನಾಯಿಸುವುದಿಲ್ಲ; ಅಥವಾ ಬ್ರಿಟನೂ ಸ್ವೀಡನಿನವರನ್ನು ನಮ್ಮ ಸೈನ್ಯಕ್ಕೆ ಅಧಿಕಾರಿಗಳಾಗಿ ಬನ್ನಿ ಎಂದು ಕರೆಯುವುದಿಲ್ಲ. ಅದೇ ರೀತಿಯಲ್ಲಿ ಇಂಡಿಯದ ರಕ್ಷಣೆಯಾದರೂ ಇಂಡಿಯದವರ ಮೇಲೆ ಬಿದ್ದ ಭಾರವೇ ಆಗಿದೆ. ಅದಕ್ಕೆ ತಕ್ಕಂತೆ ಅವರಿಗೆ ಶಿಕ್ಷಣವು ದೊರೆಯಬೇಕಲ್ಲದೆ, ಅವರಿಗಿಂತ ಸಮರ್ಥರಾದ ಅನ್ಯ ದೇಶೀಯರಿದ್ದಾರೆಂಬ ಕಾರಣದಿಂದ, ಅವರನ್ನು ಮುಂದೆ ತಂದು ಇವರನ್ನು ಹಿಂದಿಕ್ಕುವುದು ನ್ಯಾಯವಲ್ಲ. ಈ ಸೂತ್ರವನ್ನು ಒಪ್ಪಿಕೊಂಡಲ್ಲಿ, "ಹಿಂದೀಯರನ್ನು ದೊಡ್ಡ ಸಂಖ್ಯೆಯಿಂದ ರಿಕ್ರೂಟ್ ಮಾಡಲು ಸಾಧ್ಯವಾಗಲಿಲ್ಲ"ವೆಂಬ ಮಿ. ಅಮರಿಯವರ ಆ ಹೇಳಿಕೆಯು ಎಷ್ಟು ಶುಷ್ಕವಾದುದೆಂದು ತನ್ನಂತೆ ವೇದ್ಯವಾಗದಿರದು.

ಹಿಂದುಸ್ಥಾನದ ದುರಾದೃಷ್ಟದಿಂದ, ಎಲ್ಲಿ ನೋಡಿದರೂ, ಇಂಡಿಯದ ಡಿಫೆನ್ಸ್ ಸರ್ವಿಸುಗಳಲ್ಲಿ, ಹಿಂದುಸ್ಥಾನದವರನ್ನು ಸಾಧ್ಯವಿರುವಷ್ಟು ಕಡಿಮೆ ಸಂಖ್ಯೆಯಲ್ಲಿಯೇ ಉಪಯೋಗಿಸಿಕೊಳ್ಳುವ ಈ ಮನೋವೃತ್ತಿಯೇ ಕಂಡು ಬರುತ್ತಿದೆ. ಉದಾಹರಣೆಗಾಗಿ, ರಾಯಲ್ ವಿಮಾನ ಬಲದ ನಾನ್ ಕಮಿಶನ್ಡ್ ರ್ಯಾಂಕಿನ ಸಿಬಂದಿಯ ರಿಕ್ರ್ಯೂಟ್‌ಮೆಂಟಿನ ಕಥೆಯನ್ನೇ ನೋಡಿ. ಈ "ಆರ್. ಎಫ್. ಎ ಬಲದ ವಿವಿಧ ಸರ್ವಿಸುಗಳಿಗಾಗಿ, ೩೫೦ ಮಂದಿ ಬೇಕಾಗಿದ್ದಾರೆ" ಎಂದು ಆ ಅಧಿಕಾರಿಗಳ ಜಾಹಿರಾತು. ಆದರೆ ಅವರೆಲ್ಲ ಬ್ರಿಟಿಷ ಮೂಲದವರೇ ಆಗಿರಬೇಕು! ಇಷ್ಟೇ ಅಲ್ಲದೆ "ಇದು ಇದೊಂದು ವ್ಯವಹಾರವನ್ನು ಸಂಪಾದಿಸಲು ತರುಣರಿಗೊಂದು ಉತ್ತಮ ಸಂದರ್ಭ; ಹಾಗೂ ಜತೆಯಲ್ಲಿಯೇ ತಮ್ಮ ದೇಶಕ್ಕೆ ಅಮೂಲ್ಯ ಸೇವೆಯನ್ನು ಅರ್ಪಿಸಲೂ ಇದೇ ಸುವರ್ಣ ಸಂಧಿ" ಎಂದೂ ಅದರಲ್ಲಿ ಸೂಚಿಸಲಾಗಿದೆ.

ಮತ್ತೆ ಈ ಜನಗಳ ಯೋಗ್ಯತೆಯಾದರೂ ಎಷ್ಟಿರಬೇಕೆಂದು, ಈ ಅಧಿಕಾರಿಗಳು ಪ್ರಕಟಿಸಿದ್ದಾರೆ, ಬಲ್ಲಿರಾ? "ಈ ಶಾಖೆಗೆ ಸೇರುವ ಜನಗಳಿಗೆ "ಟೆಕ್ನಿಕಲ್" ಗುಣ ವಿಶೇಷಗಳೇನೂ ಅಗತ್ಯವಲ್ಲ. ಆದರೆ ವಿದ್ಯಾ ಪರಿಮಿತಿಯಲ್ಲಿ ಅವರು ಕನಿಷ್ಠಪಕ್ಷ ಜುನಿಯರ್ ಕ್ರೇಂಬಿಜ್ ಅಥವಾ ಅದಕ್ಕೆ ಸಮಾನ ತರಗತಿಯ ವರೆಗೆ ಏರಿದವರಾಗಿರಬೇಕು".

ಇದರ ಅರ್ಥವೇನೆಂದರೆ, ಅವರು ಎಸ್. ಎಸ್ ಎಲ್. ಸಿ. ವರೆಗೆ ಓದಿದ್ದರೆ ಸಾಕು! ಹಾಗಾದರೆ, ನಮ್ಮಲ್ಲಿ ಅಷ್ಟೇ ಯೋಗ್ಯತೆ ಪಡೆದ, ಎಸ್. ಎಸ್. ಎಲ್. ಸಿ. ಪರೀಕ್ಷೆ ಪಾಸಾದ ಸಾವಿರಾರು ಮಂದಿ ತರುಣರು, ಅಂತಹ ಉದ್ಯೋಗ ಸ್ಥಾನಗಳಿಗೆ ದೊರಕಲಾರರೇ? ಆದರೆ ನಮಗೆ ತಿಳಿದ ಮಟ್ಟಿಗೆ, ಇಂತಹ "ಚಾನ್ಸು"ಗಳೊಂದೂ ನಮ್ಮವರಿಗೆ ದೊರಕಿದುದಿಲ್ಲ. ಒಂದು ವೇಳೆ, ಇದು, ಈ ಆರ್. ಎಫ್. ಎ. ಬ್ರಿಟಿಷರ ಬಲ, ಆದುದರಿಂದ ಈ ಏರ್ಪಾಡು ಎನ್ನಬಹುದಾದರೂ, ಈ ಹೊಸ ರಿಕ್ರ್ಯೂಟ್‌ಗಳನ್ನು ತರಬೇತು ಮಾಡುವಲ್ಲಿ ವೆಚ್ಚ ಮಾಡುವ ಆ ಹಣವನ್ನು, ಇಂಡಿಯದ ವಿಮಾನಬಲದ ವಿಸ್ತರಣ ಕಾರ್ಯಕ್ಕೂ, ಇಂಡಿಯದ ರಕ್ಷಣಾರ್ಥವಾದ ಹಿಂದೀಯರ ತರಬೇತಿಗಾಗಿಯೂ ಖರ್ಚು ಮಾಡಲಾಗದೇ ಎಂದು ಒಬ್ಬನು ಪ್ರಶ್ನಿಸಬಹುದಲ್ಲ!

ರೂಪಾಯಿಗಳ ಸಂಗ್ರಹ

ದೊಡ್ಡ ನಗರದ ಕೆಲವೊಂದು ಮಂದಿ ರೂಪಾಯಿ ನಾಣ್ಯಗಳನ್ನು ಕೂಡಿಹಾಕು ಒಂದು ಭ್ರಾಂತಿಯುಂಟಾಗಿರುವುದು ನಿರಾಧಾರವಾದ ಭಯದ ಮೂಲವೆಂದು ಹೇಳಬೇಕಾಗಿಲ್ಲ ಈ ರೀತಿ ರೂಪಾಯಿ ಗಳನ್ನು ಸಂಗ್ರಹಿಸುವುದರಿಂದ, ಆ ಸಂಗ್ರಹ ರಿಗಾಗಲೀ, ಸಮಾಜಕ್ಕಾಗಲೀ ಎಳ್ಳಷ್ಟೂ ಕಾರವಿಲ್ಲ. ಒಂದು ವೇಳೆ, ಕರೆನ್ಸಿ ನೋಟು ಇನ್ನು ಕೊಂಚಕಾಲದಲ್ಲಿ ಬೆಲೆ ಇಲ್ಲದವುಗಳೆಂದೇ ತರ್ಕಕ್ಕಾಗಿ ಇಟ್ಟುಕೊಂಡರೆ, ಬೆ ಮೇಲೆ ಮುದ್ರಿತವಾದ ಈ ರೂಪಾಯಿ ಹೇಗೆ ತನ್ನ ಬೆಲೆ ಇಟ್ಟುಕೊಳ್ಳುವುದೋ—ಯ ಗೊತ್ತು? ಅಷ್ಟೇ ಅಲ್ಲದೆ ಕರೆನ್ಸಿ ನೋಟುಗ ವಟಾಯಿಸಲು ಎಲ್ಲ ಸೌಕರ್ಯಗಳನ್ನೂ ಸಿರುವಾಗ, ಮತ್ತೂ ಈ ರೂಪಾಯಿಗ ಸಂಗ್ರಹಿಸುವ ಭ್ರಾಂತಿ ಏಕೆ? ನಮ್ಮ ಸರ ದಲ್ಲಿ ಬೆಳ್ಳಿಯ ನಿಧಿ ಧಾರಾಳವಿದೆ; ಬೇಕಾದಷ್ಟು ರೂಪಾಯಿಗಳನ್ನು ಬ ಬಲ್ಲುದು.

ಈಗ ಒದಗಿರುವ ಸಂಕಷ್ಟವು, ರೂಪ ಗಳನ್ನು ಜನತೆಗೆ ಒದಗಿಸುವುದಲ್ಲ; ಆ ರೂಪ ಗಳು ಖಾಸಗಿ ಜನರ ಬೊಕ್ಕಸದಲ್ಲಿ ಸೇರಿ ಕು ಕೊಳ್ಳದಂತೆ ಮಾಡುವುದೇ. ಉದಾಹರಣೆ ಒಬ್ಬ ಖಾಸಗಿ ಮನುಷ್ಯನ ಬಳಿಯಲ್ಲಿ ೧ ಕೆ ರೂಪಾಯಿ ಸೇರಿಹೋಯಿತೆನ್ನೋಣ. ಅವನು ಅದನ್ನು ಚಲಾವಣೆಗೆ ಹಾಕದಿ ಸಣ್ಣ ವ್ಯಾಪಾರಿಗಳ ಕೈ ಕಟ್ಟಿಹೋಗುವುದು. ಬಗೆಯ ಅನಾನುಕೂಲತೆಯು ಪ್ರಾಪ್ತವಾ ದೆಂದು ಕಂಡುದರಿಂದಲೇ, ಸರಕಾರವೂ ಶಾಸನ ಮಾಡಿ, ಅಗತ್ಯವಿರುವುದಕ್ಕಿಂತ ಹ ನಾಣ್ಯವಿಟ್ಟುಕೊಳ್ಳಕೂಡದೆಂದು ನಿರ್ಬಂಧಿ ಅಗತ್ಯವುಂಟಾಯಿತು. ಅಂದರೆ, ಬೆಳ್ಳಿಯ ಸರಕಾರದ ವಶದಲ್ಲಿ ಕಡಿಮೆ ಇದೆ ಎಂದು ಅರ್ಥವಲ್ಲ. ರೂಪಾಯಿಗಳ ಕೇಳಿಕೆ ವಿಪ ಹೆಚ್ಚಿ, ಆ ಕೇಳಿಕೆಯಂತೆ ಕೂಡಲೇ ಕೂ ರೂಪಾಯಿ ನಾಣ್ಯಗಳನ್ನು ಮುದ್ರಿಸುವ ಕಾ ಕೊಂಚ ಪ್ರಯಾಸಕ್ಕಿಟ್ಟುದುದರಿಂದಲೇ ನಾಣ್ಯಗಳ ಮೇಲೆ ಒಂದು ಹಿಡಿತಡೆಯನ್ನು ಸಲು ಕಾರಣ.

ಕಳೆದ ಜೂನ್ ತಿಂಗಳ ಮೊದಲು ಮ ವಾರಗಳಲ್ಲಿ ರಿಜರ್ವ್ ಬ್ಯಾಂಕ್ ಬೇಕಾದ ರೂಪಾಯಿ ನಾಣ್ಯಗಳನ್ನು ಹೊರ ಹಾಕಿ ಆದರೂ ಆ ನಾಣ್ಯಗಳ ಬರಗಾಲ ಇಂಗ ಕಾರಣ ಈ ರೂಪಾಯಿಗಳೆಲ್ಲ ಖಾಸಗಿ ಭಂಡಾರ ಸೇರಿ ಸಣ್ಣ ವ್ಯಾಪಾರಿಗಳ ಕೈಕಟ್ಟ ಅವರು ಬಂದ ಗಿರಾಕಿಗಳ ಕರೆನ್ಸಿ ನೋ ಗಳನ್ನು ಸ್ವೀಕರಿಸಿ ಚಿಲ್ಲರೆ ಕೊಡಲು ಹಿ ದರು. ಈ ಸಮಯದಲ್ಲಿ ರಿಜರ್ವ್ ಬ್ಯಾ ವರು, ಪೇಟೆಗಳಲ್ಲಿ ೫-೧೦ ರೂಪಾಯಿ ನೋಟುಗಳಿಗೆ ರೂಪಾಯಿಗಳನ್ನು ಒದಗಿ ಏರ್ಪಾಡು ಮಾಡಿದ್ದರೆ, ವಿಶ್ವಾಸವು ತನ್ನಂತೆ ಸ್ಥಾಪನೆಯಾಗಿ ಹೋಗುತ್ತಿದ್ದಿತು.

ಬೊಂಬಯಿಯಲ್ಲಿ ಕೆಲವು ಕಡೆ "ಡಿಸ್ಕೌಂ ಪಡೆದೇ ಕರೆನ್ಸಿ ನೋಟುಗಳನ್ನು ಪಟಾ ಲಾಯಿತೆಂದು ಹೇಳಲಾಗಿದೆ. ನಿಜವಾಗಿ ಅಂತಹ ಸ್ಥಿತಿಗೇನೂ ಅವಕಾಶವಿರಲಿಲ್ಲ! ರಿಂದ ವಿಶೇಷ ಭೀತಿಗೆ ಕಾರಣವಾಗಿ ಕೆ ಗಲಭೆಯೂ ಆಗಿಹೋಯಿತು. ಈಗೇ ರೂಪಾಯಿ ಹಾಗೂ ೫॥ ರೂಪಾಯಿಗಳ ನೋ ಗಳ ಏರ್ಪಾಡಿಗಾಗಿ ಸೂಚನೆ ಹೊರ ಆದರೆ ಇದರಿಂದ ಹಿತವಾಗುವುದೆನ್ನುವುದ ಅಹಿತವಾಗುವ ಭೀತಿಯೇ ಹೆಚ್ಚೆಂದು ತೋ ತ್ತದೆ. ಮುಖ್ಯವಾಗಿ ಕರೆನ್ಸಿ ನೋಟ ಲ್ಲಿ ಅಕ್ರಮ ಮಾರ್ಗವನ್ನು ಅನುಸರಿಸು ಮೇಲೆ ಕಠಿನ ಶಾಸನವನ್ನು ಜರುಗಿಸುವು ಅವರವರ ಅಗತ್ಯಕ್ಕೆ ಬೇಕಾದಷ್ಟು ರೂಪ ಗಳನ್ನು ಅಲ್ಲಲ್ಲಿಗೆ ಒದಗಿಸುವುದೂ ಸ್ವಯದ ಕ ವೆಂದರೆ ಸಾಕಾಗಿದೆ.

ಮಾನ್ಯ ವೈಸ್ರಾಯರು ಜುಲೈ ೨೧ಕ್ಕೆ ಸಿಮ್ಲದಿಂದ ಹೊರಟು ಪತ್ನೀ ಸಮೇತರಾಗಿ, ಕುಟುಂಬದೊಡನೆ, ಢಿಲ್ಲಿ, ಮದ್ರಾಸ್, ಊಟಕಮಂಡ್, ಪೂನ ಮತ್ತು ಮುಂಬಾಯಿಗಳನ್ನು ಸಂದರ್ಶಿಸಲಿರುವರೆಂದು ತಿಳಿದುಬಂದಿದೆ.

ಕಾಂಗ್ರೆಸ್ ಮಂತ್ರಿಮಂಡಲದ ಕಾಲದಲ್ಲಿ ಸೆರೆ ಹಿಡಿಯಲ್ಪಟ್ಟು ಇದೀಗ ಕಳೆದ ತಾ. ೧೩ ರಲ್ಲು ಬಿಡುಗಡೆ ಮಾಡಲ್ಪಟ್ಟ ಶ್ರೀ. ಯಸ್. ಯಸ್. ಬಾಟ್ಲಿವಾಲರೆಂಬ ಮಜೂರ ನಾಯಕರು ಪುನಃ ಅದೇ ದಿನ ಡಿಫೆನ್ಸ್ ಕಾನೂನಿನ ಮೇರೆಗೆ ಸೆರೆ ಹಿಡಿಯಲ್ಪಟ್ಟಿದ್ದಾರೆ.

ಶ್ರೀ. ಜಯಪ್ರಕಾಶ ನಾರಾಯಣರಿಗೆ ಜೈಲಿನಲ್ಲಿ ಏದೆ ನೋವು ಬಂದರೂ, ಈಗಿರುವ ಕೆಲ ತಡೆಗಳ ನಿವಾರಣೆಯಾಗದೆ ವೈದ್ಯಸಹಾಯ ಪಡೆಯಲಾರೆನೆಂದು ಹಟ ಹಿಡಿದಿದ್ದಾರೆ.

ಕಟಕ್‌ನಲ್ಲಿ ಒರಿಸ್ಸಾ ಪೋಲೀಸರು ಕೆಲವು ಮನೆಗಳನ್ನು ಜಪ್ತಿನಡೆಸಿ, ೯ ಮಂದಿಯನ್ನು ಡಿಫೆನ್ಸ್ ಕಾನೂನಿನ ಮೇಲೆ ಸೆರೆ ಹಿಡಿದಿದ್ದಾರೆ.

ಪಂಜಾಬ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸದಸ್ಯರೂ, ಗುಜ್ರನ್‌ವಾಲದ ಮುನಿಸಿಪಲ್ ಕಮಿಶನರೂ ಆದ ಸರ್ದಾರ್ ಔತರ್ ಸಿಂಗ್‌ರನ್ನು ಯಾರೋ ಮುಸಲ್ಮಾನನು ತಿವಿದು ಗಾಯಗೊಳಿಸಿ, ಕೈಯಲ್ಲಿ ಕತ್ತಿ ಹಿಡಿದಂತೆಯೇ ಇಬ್ಬರು ಇತರ ಸೀಖರನ್ನು ಗಾಯಗೊಳಿಸಿ ಗೊಂದಲ ಹಬ್ಬಿಸಲು ಅವನನ್ನು ಹೆಚ್ಚಿನ ಮಂದಿ ಬಂದು ಹಿಡಿದು ಬರ್ಚಿಯಿಂದಿರಿದು ಕೊಂದರು. ಮುಸ್ಲಿಮನಿಗೆ ತಲೆ ಸರಿ ಇರಲಿಲ್ಲವೆಂದು ಹೇಳಲಾಗಿದೆ. ಪೋಲೀಸ್ ಕಾವಲು ಭೀಕರವಾಗಿ ಸಾಗುತ್ತಿದೆ.

ಕೊಯಂಬುತ್ತೂರಿನ ಕಬ್ಬಿನ ವ್ಯವಸಾಯಗಾರರು ಸಕ್ಕರೆಯ ಕಾರ್ಖಾನೆಯೊಂದನ್ನು ಸ್ಥಾಪಿಸುವ ಯೋಜನೆ ನಡೆಸುತ್ತಿದ್ದಾರೆ.

ಸಗೋಧದ ವಕೀಲರೂ, ಮುನಿಸಿಪಲ್ ಕಮಿಷನರೂ ಆದ ರಾಮ್ ಪ್ಯಾರಲಾಲ್‌ರವರು ಡಿಫೆನ್ಸ್ ಕಾನೂನಿನ ಮೇರೆಗೆ ಸೆರೆ ಹಿಡಿಯಲ್ಪಟ್ಟಿದ್ದಾರೆ.

ಕಲ್ಕತ್ತೆಯ 'ಭಾರತ್' ಎಂಬ ಬಂಗಾಳಿ ದಿನಪತ್ರಿಕೆಯ ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು ಸೆರೆ ಹಿಡಿಯಲ್ಪಟ್ಟು ಕ್ಷಮೆ ಕೇಳಿದ್ದರಿಂದ ಬಿಡುಗಡೆ ಹೊಂದಿದ್ದಾರೆ.

ನಾಗಪುರದ ಸೋಸಿಯಲಿಸ್ಟ್ ಶ್ರೀ. ವಿ. ಯಸ್. ದಂಡೇಕಾರ್‌ರವರು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಭೀಮಾವರಮ್ ತಾಲೂಕು ಕಾಂಗ್ರೆಸ್ ಕಮಿಟಿ ಸೆಕ್ರೆಟರಿ ಶ್ರೀ. ದರ್ಭಾ ಶ್ರೀರಾಮಮೂರ್ತಿಯವರ ಸೆರೆಯಾಗಿದೆ.

ತಿರುಪ್ಪೂತ್ತೂರಿನ ಶ್ರೀ. ಜಿ. ಸುಂದರರಾಜ ಮೂಪನರ್ ಸೆರೆ ಹಿಡಿಯಲ್ಪಟ್ಟಿದ್ದಾರೆ.

ಸುಪ್ರಸಿದ್ಧಕೋಟ್ಯಾಧೀಶರಾದ ಶ್ರೀ. ವಾಲ್‌ಚಂದ್ ಹೀರಾಚಂದ್ ಜೈನ್‌ರವರು ಮೈಸೂರ್ ಸರಕಾರದೊಡನೆ ಮಾತುಕಥೆ ಬೆಳೆಸಿ, ಬೆಂಗಳೂರಿನಲ್ಲಿ ವಿಮಾನ ಕಾರ್ಖಾನೆಯನ್ನು ಸ್ಥಾಪಿಸಲು ನಿಶ್ಚಯಿಸಿದ್ದಾರೆ.

ಒಂದು ಮಿಲಿಯ ಸೀಖರು ಸಿದ್ಧವಿದ್ದಾರೆ

ಪೇಶಾವರದಲ್ಲಿ ಒಂದು ಭಾಷಣವೀಯುತ್ತ ತಿರೋಮಣಿ ಗುರುದ್ವಾರ ಪ್ರಭರ್ದಕ ಸಮಿತಿಯ ಅಧ್ಯಕ್ಷರಾದ ಮಾಸ್ಟರ್ ತಾರಾ ಸಿಂಗ್‌ರವರು, "ಬ್ರಿಟಿಷರು ಕಾಂಗ್ರೆಸಿನ ಕೇಳಿಕೆಯನ್ನು ಪೂರೈಸಿದರೆ, ಒಂದು ಮಿಲಿಯ ಸೀಖರು ಬ್ರಿಟಿಷ್ನಿಗಾಗಿ ಕಾದಾಡಲು ಸಿದ್ಧರೇ ಇದ್ದಾರೆ" ಎಂದರು.

ಇಂದಿನ ವಾರ್ತೆ

ಚೀನದ ಕೈ ಬಿಟ್ಟರು

ಬ್ರಿಟನ್ನು ಇದೀಗ ಚೀನಕ್ಕೆ ಸಹಾಯ ಒದಗಿಸಲು ಇದ್ದ ಬಾಗಿಲನ್ನು ತಡೆದು ಅದರ ಕೈ ಬಿಟ್ಟಿದೆ. ಇಂಡೋ ಚೀನದ ಗವರ್ನರ್ ಜನರಲ್ ಕರ್ನಲ್ ಕಾಟ್ರೂಕ್ಸ್ ಕೂಡಾ ತನ್ನಿಂದಾದ ಸಕಲ ಸಹಾಯವನ್ನೂ ಜಪಾನಿಗೆ ಕೊಡುವುದಾಗಿ ಭರವಸೆ ಕೊಟ್ಟಿದ್ದಾನೆ.

ಚಿಕ್ಕ ರಾಷ್ಟ್ರಗಳು ಅಳಿಯಬೇಕು

"ಯುರೋಪಿನ ವಿವಿಧ ರಾಷ್ಟ್ರಗಳೆಲ್ಲ ಜರ್ಮನಿಯ ನಾಯಕತ್ವದಲ್ಲಿ ಬಾಳಬೇಕು. ವಿವಿಧ ಭಾಗಗಳಾಗಿ ಯುರೋಪಿನಂತಹ ಚಿಕ್ಕ ಪ್ರಾಂತ್ಯವನ್ನು ವಿಭಾಗಿಸಲು ಸಾಧ್ಯವಿಲ್ಲ. ಈ ಬಾಳಲಾಗದ, ಕಾದಾಡುವ ಪುಟ್ಟ ರಾಷ್ಟ್ರಗಳಿಂದಲೇ ಯುರೋಪಿನ ಶಾಂತಿಗೆ ಭಂಗಬರುವುದು" ಎಂದು ಜರ್ಮನ್ ಪತ್ರಿಕೆಯ ವಾದ.

ಗಾಂಧಿಜಿಗಳ ಪ್ರಾರ್ಥನೆ ನಿರಾಕರಿಸಲ್ಪಟ್ಟಿತು

ಬ್ರಿಟಿಷರಿಗಾಗಿ ಮಹಾತ್ಮರು ಮಾಡಿದ ಪ್ರಾರ್ಥನೆಗೆ, ಮಾನ್ಯ ವೈಸ್ರಾಯರು "ನಿಮ್ಮ ವಿಚಾರದಲ್ಲಿ ಅಭಿಮಾನವಿದ್ದರೂ ಇಡೀ ಸಾಮ್ರಾಜ್ಯವೇ ಕಾದಾಡಲು ಬಗೆದುದರಿಂದ ನಿಮ್ಮ ಪ್ರಯೋಗ ಪ್ರಯೋಗಿಸಲು ಸಾಧ್ಯವಿಲ್ಲವಾಗಿದೆ" ಎಂಬರ್ಥದ ಉತ್ತರವಿತ್ತಿದ್ದಾರೆ.

ಬ್ರಿಟನ್ನು ಸಿದ್ಧವಾಗಿದೆ

ಜರ್ಮನರ ಅದೆಂತಹ ದಾಳಿಯನ್ನೂ ಬ್ರಿಟನ್ನು ಇಂದು ತಡೆಯಲು ಸಿದ್ಧವಾಗಿದೆ. ಬ್ರಿಟನಿನ್ನು ಯುದ್ಧ ಆರಂಭವಾಗಿದೆ–ಮಾತ್ರ. ಅದು ತನ್ನ ಸ್ವಾತಂತ್ರ್ಯ, ದೇಶ, ಜನಜೀವನಗಳ ರಕ್ಷಣೆಗಾಗಿ ಕಾದಾಡುತ್ತಿದೆ; ಅದರಲ್ಲಿ ಜಯ ತಂದೇ ತರುತ್ತದೆ–ಎಂದು ಮುಂತಾಗಿ ಮಿ। ಎ. ವಿ. ಅಲೆಕ್ಸಾಂಡರರು ತಮ್ಮದೊಂದು ಭಾಷಣದಲ್ಲಿ ನುಡಿದರು.

ಪೋಪರೂ–ಪೀಟೆನ್ ಸರಕಾರವೂ

ಪೀಟೆನ್ ಸರಕಾರವನ್ನು ಪೋಪರು ಹರಸಿದ್ದಾರೆ ಎಂದು ಮುಂತಾಗಿ ಬಂದ ವಾರ್ತೆ ಸುಳ್ಳೆಂದೂ, ಇಂದು ಬ್ರಿಟನ್ನು ಕ್ರೈಸ್ತ ಮತ್ತು ಕ್ರೈಸ್ತ ಧರ್ಮಗಳನ್ನು ಬಲಾತ್ಕಾರದ ಕೈಯಿಂದ ರಕ್ಷಿಸಲು ಕಾದಾಡುತ್ತಿದೆ–ಎಂದೂ ವೆಸ್ಟ್‌ಮಿನ್‌ಸ್ಟರಿನ ರೋಮನ್ ಕೆಥೊಲಿಕ್ ಆರ್ಚ್ ಬಿಷಪರಾದ ಕಾರ್ಡಿನಲ್ ಹಿನ್ಸ್‌ಲೇಯವರು ಒಂದು ಹೇಳಿಕೆ ಹೊರಡಿಸಿದ್ದಾರೆ.

ಗಾಂಧಿ ಚಿಮಿಣಿ ಏಟ್ಟೆ

ಗಾಂಧೀಜಿ, ನೆಹರು ಮುಂತಾದ ರಾಷ್ಟ್ರದ ವಿವಿಧ ನಾಯಕರ ಹೆಸರುಗಳನ್ನು ಸಿಗರೇಟು, ಮುಂತಾದ ವಸ್ತುಗಳಿಗೆ ಇಡುವ ವ್ಯಾಪಾರೀ ಕೃತ್ಯವನ್ನು ಪಂಡಿತ ನೆಹರುಗಳು ಖಂಡಿಸಿದ್ದಾರೆ.

ಹಂಗೇರಿ

ಇದು ಇದೀಗ ಸಂಪೂರ್ಣವಾಗಿ ಜರ್ಮನಿಯ ಕಡೆಗೆ ತಿರುಗಿದೆ. ಇದರ ಸರಕಾರದ ಸಕಲ ಬಾಹ್ಯ ಸಂಬಂಧಗಳೂ ಜರ್ಮನಿಗೆ ಅನುಕೂಲವಾಗಿಯೇ ನಡೆಯುವವಂತೆ.

ಬ್ರಿಟಿಷ್ ಸೇನೆ

ಬ್ರಿಟನ್ನಿನಲ್ಲಿ ಸೈನ್ಯಕ್ಕೆ ಸೇರಿದ ೧೯೧೭ರ ದರ್ಜೆಯ ಸೈನಿಕರ ಸಂಖ್ಯೆ ೩೨೫೯೭. ಇವರಲ್ಲಿ ಸೇನೆಗೆ ಸೇರಲು ಒಪ್ಪದವರು ೧೬೪೯.

ಡಿಫೆನ್ಸ್ ಕಾನೂನು

ಕಟಕ್

ಇಲ್ಲಿನ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ. ಜಗನ್ನಾಥ ಮಿಸ್ರರಿಗೆ ೧೪ ತಿಂಗಳ ಕಠಿನ ಸಜೆ ಹಾಗೂ ೨೦೦ ರೂ.ಗಳ ದಂಡ, ದಂಡ ತೆರಲು ತಪ್ಪಿದರೆ ಪುನಃ ೬ ತಿಂಗಳ ಸಜೆ–ವಿಧಿಸಲಾಗಿದೆ.

ತಂಪನ್ನುಂಟುಮಾಡುವುದು - - -
- ಮತ್ತು ಬಹಳ ಸುವಾಸನೆಯುಳ್ಳದ್ದು.

ವಿನೋಲಿಯದ ವಿಷಯವಾಗಿ ಮೊತ್ತ ಮೊದಲು ನೀವು ಕಂಡುಕೊಳ್ಳುವುದು ಅದರ ವಿಶೇಷವಾದ ಪರಿಮಳವು. ನೀವು ಸ್ನಾನ ಮಾಡಿದಮೇಲೆ ಬಹಳ ಹೊತ್ತಿನವರೆಗೂ, ಹೊಸದಾದ ಮತ್ತು ಮಧುರವಾದ ಗುಲಾಬಿಯ ಹೂವಿನ ಪರಿಮಳದಂಥ ಅದರ ಮನೋಹರವಾದ ಸುವಾಸನೆಯು ನಿಮ್ಮನ್ನು ಬಿಡುವುದಿಲ್ಲ. ಮತ್ತು ಅದು ಬಹಳ ತಂಪನ್ನುಂಟು ಮಾಡುವುದು. ಅದರಿಂದ ಸ್ನಾನಮಾಡಿದರೆ ನಿಮಗೆ ನವಚೈತನ್ಯವುಂಟಾಗುವುದು, ಮೈಕಾಂತಿ ಹೆಚ್ಚುವುದು; ಮನೋಲ್ಲಾಸವೂ, ಹುರುಪೂ, ಸೌಂದರ್ಯವೂ ಹೆಚ್ಚುವುವು.

VINOLIA
WHITE ROSE SOAP

VWR. 2-169 KN VINOLIA CO., LIMITED, LONDON, ENGLAND

ಗಯಾ

ಅಖಿಲ ಭಾರತ ಕಿಸಾನ್ ಸಭೆಯ ಅಧ್ಯಕ್ಷ ಬಾಬಾ ಸೋಹನ್ ಸಿಂಗ್ ಮತ್ತು ಕಾರ್ಯದರ್ಶಿ ಡಾ॥ ಭೋಗ್ ಸಿಂಗ್ ಇವರ ಸೆರೆನಡೆದಿದೆ.

ಕಲ್ಕತ್ತ

ಶ್ರೀ.ಗಳಾದ ಚಂದ್ರಮನ್ ಸಿಂಗ್, ಬೀರೇಶ್ವರ ಭಟ್ಟಾಚಾರ್ಯ, ದೇವೇಂದ್ರ ವಿಜಯ ಸೇನ್ ಗುಪ್ತ, ಅಮೂಲ್ಯಚಂದ್ರಸೇನ್, ಸೈಲಾಜ ರಂಜನ್ ಮಿತ್ರಮಸ್ತ್ರಿಕಿ, ಅವನೀ ಮೋಹನ ಚಕ್ರವರ್ತಿ, ನಾನಿದಾಸ್ ಗುಪ್ತ ಇವರನ್ನು ನಗರದಿಂದ ನಗರದ ಸುತ್ತಿನ ಪ್ರದೇಶದಿಂದ ಹೊರಗಟ್ಟಿ ಕೈಗಾರಿಕೆ ಕೇಂದ್ರಗಳಿಗೆ ಕಾಲಿಡಕೂಡದೆಂದು ಸರಕಾರ ತಿಳಿಸಿದೆ.

ಕಾಶಿ

ಭಾರತದ ಲೇಬರ್ ಪಾರ್ಟಿಯ ಕಾರ್ಯದರ್ಶಿ ಶ್ರೀ. ಶಿಶಿರ್ ಕುಮಾರ್ ರೋಯ್ ಸೆರೆ ಹಿಡಿಯಲ್ಪಟ್ಟಿದ್ದಾರೆ.

ಕಡಲೂರು

ಭಾಷಣವೊಂದನ್ನು ಕೊಟ್ಟ ಆರೋಪದ ಮೇಲೆ ರಾಣಿಪೇಟೆ ಲೇಬರ್ ಯೂನಿಯನಿನ ಕಾರ್ಯದರ್ಶಿ ಶ್ರೀ. ಆರ್. ಜಗನ್ನಾಥನ್‌ರವರು ಒಂದು ವರ್ಷದ ಕಠಿನ ಸಜೆಗೆ ಗುರಿಪಡಿಸಲ್ಪಟ್ಟಿದ್ದಾರೆ.

ರಾಜಮಹೇಂದ್ರಿ

ಪೂರ್ವ ಗೋದಾವರಿ ಜಿಲ್ಲಾ ರೈತ ಸಂಘದ ಅಧ್ಯಕ್ಷ ಹಾಗೂ ಸೋಶಿಯಲಿಸ್ಟ್ ಪಾರ್ಟಿ ಕಾರ್ಯದರ್ಶಿ ಶ್ರೀ. ಪಿ. ಸೂರ್ಯನಾರಾಯಣ ರಾಜು ಇವರನ್ನು ಸೆರೆಹಿಡಿಯಲಾಗಿದೆ.

ಕೇರಳ

ಜಿಲ್ಲಾ ಬೋರ್ಡು ಸದಸ್ಯರೂ, ಮುಸ್ಲಿಂ ಕಾಂಗ್ರೆಸ್ ನಾಯಕರೂ ಆದ ಸಾಧು ಅಹಮ್ಮದ್ ಕುಟ್ಟಿ ಎಂಬವರು ಒಂದು ಭಾಷಣ ಕೊಟ್ಟದ್ದಕ್ಕಾಗಿ ಸೆರೆಹಿಡಿಯಲ್ಪಟ್ಟಿದ್ದಾರೆ.

ಸತ್ಯಾಗ್ರಹಕ್ಕಾಗಿ ಸೆರೆ

ಹೋಲ್‌ವೆಲ್ ಸತ್ಯಾಗ್ರಹದ ನಿಮಿತ್ತ ಇದುವರೆಗೆ ೧೦೪ ಮಂದಿ ಸೆರೆಹಿಡಿಯಲ್ಪಟ್ಟಿದ್ದಾರೆ.

ಶೋಧ

ಅಡಿಕೆ ಸಿಪ್ಪೆಯಿಂದ ಉತ್ತಮ ತರಡ ಕಾಗದ ತಯಾರಿಸಬಹುದೆಂದು ಮೈಸೂರಿನ ಕಾಗದ ಕಾರ್ಖಾನೆಯವರು ಶೋಧ ನಡೆಸಿದ್ದಾರೆ.

ಇಂಡಿಯದ ತುಕ್ಕಡಿ

ಕಳೆದ ದಶಂಬರದಲ್ಲಿ ಫ್ರಾನ್ಸಿಗೆ ತೆರಳಿದ ಭಾರತೀಯ ಸೇನೆಗಳಲ್ಲಿ ಒಂದು ಪ್ರಬಲ ತುಕ್ಕಡಿಯೇ ಕಾಣೆಯಾಗಿದೆ. ಉಳಿದವುಗಳು ಇಂಗ್ಲಾಂಡನ್ನು ಸೇರಿವೆ.

ಶಾಂತಿ ದಳ

ಮದ್ರಾಸ್ ನಗರವು ಕಾಂಗ್ರೆಸ್ ಸ್ವಯಂಸೇವಕ ಹಾಗೂ ಸ್ವಯಂಸೇವಕಿ ದಳಗಳನ್ನು ಶಾಂತಿ ಹಾಗೂ ಸಮಾಜ ಹಿತ ಕಾರ್ಯಕ್ಕಾಗಿ ರಚಿಸಲಿದೆ.

ಮಂಗಳೂರು

ವಾರ್ಷಿಕೋತ್ಸವ

ಸ್ಥಳೀಯ ಕಲ್ಚರಲ್ ಎಸೋಸಿಯೇಶನಿನ ವಾರ್ಷಿಕೋತ್ಸವವು ಕಳೆದ ತಾ. ೧೧ರಲ್ಲು ಥಿಯಾಸಫಿಕಲ್ ಲೋಜಿನಲ್ಲಿ ಜರುಗಿತು. ಶ್ರೀ. ಯಸ್. ಮುಕುಂದರಾಯರು ಕಾರ್ಯದರ್ಶಿಗಳಾಗಿ ಚುನಾಯಿಸಲ್ಪಟ್ಟರು.

"ದೇಶಭಕ್ತ"

ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ, ಜನತೆಯ ಹಿತಕ್ಕಾಗಿ ತನು-ಮನ-ಧನಗಳನ್ನರ್ಪಿಸಿ ಅಮರರಾದ ದೇಶಭಕ್ತ ಕಾರ್ನಾಡ್ ಸದಾಶಿವರಾಯರ ಸ್ಮಾರಕವಾಗಿ "ದೇಶಭಕ್ತ" ಎಂಬ ಕನ್ನಡ ವಾರ ಪತ್ರಿಕೆಯು ಆಗೋಸ್ತು ತಾ. ೧ನೇ ಗುರುವಾರ ಮೊದಲ್ಗೊಂಡು ಮಂಗಳೂರಿನಲ್ಲಿ ಪ್ರಕಟವಾಗಲಿದೆ ಇದರ ಸಂಪಾದಕ, ವ್ಯವಸ್ಥಾಪಕರು ಸುಪ್ರಖ್ಯಾತ ಜ್ಯೋತಿಷಿಗಳೂ, ಸಾಮುದ್ರಿಕಾ ಶಾಸ್ತ್ರಜ್ಞರೂ ಆದ ಪ್ರೊ. ಬಿ ವಿ ಜಯದೇವಜಿ ಯವರೆಂದು ತಿಳಿದುಬರುತ್ತದೆ.

ಜಿಲ್ಲಾ ಬೋರ್ಡು ಸಭೆ

ನಮ್ಮ ಜಿಲ್ಲಾ ಬೋರ್ಡು ಸಭೆಯು ಪ್ರೆಸಿಡೆಂಟರಾದ ಡಾ॥ ಕೆ. ವಿಠಲ ಶೆಟ್ರ ಅಧ್ಯಕ್ಷತೆಯಲ್ಲಿ, ಬೋರ್ಡು ಆಫೀಸಿನಲ್ಲಿ, ಕಳೆದ ತಾ. ೧೨ರಂದು ಮುಂಜಾನೆ ೧೦ ಗಂಟೆಗೆ ಸರಿಯಾಗಿ ನಡೆಯಿತು. ಇಂಜಿನಿಯರಿಂಗ್ ಶಾಖೆಗೆ ರೂ. ೧೯-೨೫ರ ವೇತನದ ಮೇಲೊಬ್ಬ ಎಟೆಂಡರನ್ನು ನೇಮಿಸಲು ನಿರ್ಣಯವಾಯಿತು. ಮೂಲ್ಕಿ ಹೈಸ್ಕೂಲಿನ ಹೊಸ "ಬ್ಲಾಕಿ"ನ ರಚನೆಗೆ ಇದಾಗಲೇ ಮಂಜೂರಾದ ರೂ. ೫೦೦ ಅಲ್ಲದೆ ಹೆಚ್ಚಿಗೆ ಬೇಕಾದ ಹಣವೂ ಮಂಜೂರಾತಿ ಪಡೆಯಿತು. ಮಂಗಳೂರು ಡಿವಿಜನಿನ ಎಕ್ಸೈಜ್ ಕಮಿಟಿಗೆ ಬೋರ್ಡಿನ ಪ್ರತಿನಿಧಿಗಳಾಗಿ ಶ್ರೀ.ಗಳಾದ ಅಲ್ಬುಕರ್ಕರೂ, ಕೃಷ್ಣ ಶೆಟ್ಟರೂ ಆರಿಸಲ್ಪಟ್ಟರು. ಬಡಾನಿಡಿಯೂರು ಹುಡುಗರ ಬೋರ್ಡು ಶಾಲೆಯನ್ನು ಕೆಥೊಲಿಕರಿಗೆ ಕೊಡಬಹುದೇ ಎಂಬ ಇನ್ಸ್‌ಪೆಕ್ಟ್ರಸ್‌ರ ಕೇಳಿಕೆಗೆ, ಆ ಶಾಲೆ ಬೋರ್ಡಿನ ವಶವೇ ಇರಬೇಕೆಂದಾಯಿತು. ಮುಂಡ್ಕೂರಿನಲ್ಲಿ ಆಸ್ಪತ್ರೆ ತೆರೆಯುವ ಬಗ್ಗೆ, ಔಷಧಕ್ಕಾಗಿ ರೂ. ೫೫೦ ಮಂಜೂರು ಮಾಡಿ,-ಇದು ಆಯುರ್ವೇದ ಆಸ್ಪತ್ರೆಯಾಗಬೇಕೋ ಅಥವಾ ಎಲೋಪತಿ ಡಿಸ್ಪೆನ್ಸರಿಯಾಗಬೇಕೋ ಎಂಬ ವಿಚಾರ ಚರ್ಚಿಸಲು ಮೂರು ಮಂದಿಯ ಸಮಿತಿಯೊಂದು ರಚಿತವಾಯಿತು. ಕುಂದಾಪುರದಿಂದ ಹೊರಕ್ಕೆ ಹೋಗುವ ಹಾಗೂ ಕುಂದಾಪುರಕ್ಕೆ ಬರುವ ಸಾಮಗ್ರಿಗಳ ಮೇಲೆ ಕಡವಿನ ಫೀಸು ವಸೂಲಿ ಮಾಡಕೂಡದು, ಮೋಟರ್ ಪೋಣೆಯನ್ನು ಸರಿಯಾದ ಸ್ಥಿತಿಯಲ್ಲಿರಿಸಬೇಕು ಎಂಬ ಶರ್ತಗಳೊಡನೆ ವರ್ಷಕ್ಕೆ ಮೂರು ಸಾವಿರ ಗುತ್ತಿಗೆ ಹಣಕ್ಕೆ ೫ ವರ್ಷಗಳಿಗೆ ಕುಂದಾಪುರ-ಬೈಂದೂರು ಕಡವನ್ನು ಮಿ. ಕೆ. ಹಸ್ಸನ್ ಸಾಹೇಬರಿಗೆ ಕೊಡಲಾಯಿತು.

ಸಹಕಾರಿ ಸ್ಟೋರ್ಸ್

ಮಂಗಳೂರು ಸಹಕಾರಿ ಸ್ಟೋರ್ಸ್‌ನವರು ತಮ್ಮದೊಂದು ಶಾಖೆಯನ್ನು ಕದ್ರಿ ಟ್ಯೂಬ್‌ವೆಲ್ ಬಳಿ ತಾ. ೧೨ರಲ್ಲಿ ತೆರೆದರು. ಸಹಕಾರಿ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರರಾದ ಶ್ರೀ. ಕೆ. ಸರ್ವೋತ್ತಮ ರಾಯರು ಉದ್ಘಾಟನೆಯನ್ನು ನೆರವೇರಿಸಿದರು.

ಬಿಡುಗಡೆ

ಕಾಸರಗೋಡು ತಾಲೂಕು ಬೇಡಡ್ಕ ಗ್ರಾಮದ ಕೃಷ್ಣ ಮತ್ತು ಈತನ ಹೆಂಡತಿ ಕುಂಞಮ್ಮ ಇವರು ತಾ. ೧೦—೧೨—೩೯ರಲ್ಲು ಅಬ್ಬಾಸ್ ಎಂಬಾತನನ್ನು ಕೊಂದರೆಂಬ ಆಪಾದನೆಯ ಮೇಲೆ ಸೆಶ್ಯನ್ಸಿಗೆ ಕಮಿಟ್ ಮಾಡಲ್ಪಟ್ಟದ್ದು, ಇದರ ವಿಚಾರಣೆ ತಾ. ೧೧—೭—೪೦ರಲ್ಲು ಇಲ್ಲಿನ ಸೆಶ್ಯನ್ಸ್ ಕೋರ್ಟಿನಲ್ಲಿ ನಡೆದು, ಜಿಲ್ಲಾ ಜಡ್ಜರಾದ ಶ್ರೀ ಟಿ. ಯಸ್. ರಾಮ ಚಂದ್ರನ್, ಐ.ಸಿ.ಎಸ್ ರವರು ಆಪಾದಿತರು ನಿರಪರಾಧಿಗಳೆಂದು ಬಿಡುಗಡೆ ಮಾಡಿದರು.

"ಲೋಕ್ ಅವುಟ್"

ಕಂಕನಾಡಿಯ ಯಂ. ಯಸ್. ಯಂ. ನೆಯಿಗೆ ಕಂಪೆನಿಯವರು ಕೆಲವು ಕಾರರು ಕಡಿಮೆ ಸಂಬಳಕ್ಕೆ ಒಪ್ಪದೆ ಕಾರ್ಖಾನೆಯು ಬಾಗಿಲು ತೆರೆಯುವದಿಲ್ಲಿಂದು ೧೨೫ ಮಂದಿ ಕೆಲಸಗಾರರನ್ನು ಕಳೆದ ತಾ. ೮ರಲ್ಲು ಹೊರಗೆ ಹಾಕಿದ್ದಾರೆ. ಮಾಲಿಕರು ಹಾಗೂ ಮಜೂರ ಮುಖಂಡರೊಳಗೆ ಸಂಧಾನ ನಡೆಯುತ್ತಿರುವಂತೆ, ಮಾಲಿಕರು ಪೋಲೀಸರ ಸಹಾಯದಿಂದ ಬಲಾತ್ಕಾರವಾಗಿ, ಹೊಸ ಕೆಲಸಗಾರರನ್ನು ಒಯ್ಯಲು ಯತ್ನಿಸುತ್ತಿದ್ದಾರೆ. ಶಾಂತರೀತಿಯಿಂದ ಕಳೆದ ೯ ದಿನಗಳಿಂದ ಉಪವಾಸವಿದ್ದು ಕೆಲಸಗಾರರು ಪಿಕೆಟಿಂಗ್ ನಡೆಸುತ್ತಿದ್ದಾರೆ ಎಂದು ವದಂತಿ.

ಭಾಷಣ

ಕೃಷಿ ಇಲಾಖೆಯ ಅಸಿಸ್ಟಾಂಟ್ ಡೈರೆಕ್ಟರರಾದ ಮಿ. ಯಂ. ಯು. ವೆಲ್ಲೋಡಿಯವರು ಸಹಕಾರಿ ಇನ್ಸ್‌ಪೆಕ್ಟರರಿಗೆ ಹಾಗೂ ಸುಪರ್‌ವೈಸರುಗಳಿಗೆ ಸಹಕಾರಿ ಸಂಘಗಳ ಡಿಪ್ಯುಟ ರಿಜಿಸ್ಟ್ರಾರರ ಕಚೇರಿಯಲ್ಲಿ ತಾ. ೯ರಂದು ಬೆಳಿಗ್ಗೆ ಒಂದು ಭಾಷಣವಿತ್ತರು. ಕೃಷಿ ಹಾಗೂ ಸಹಕಾರ ಸಂಘಗಳ ಸಹಕಾರದ ಅಗತ್ಯವನ್ನು ವಿವರಿಸಿದರು. ಶ್ರೀ.ಗಳಾದ ಉಳ್ಳಾಲ ಮಂಗೇಶರಾವ್ ಮತ್ತು ಯಸ್. ನರ್ಸಪ್ಪಯ್ಯನವರು "ಕನ್ಸ್ಯೂಮರ್ಸ್ ಕೋಪರೇಟಿವ್ ಸೊಸೈಟಿ" ವಿಚಾರದಲ್ಲಿ ಭಾಷಣವಿತ್ತರು.

ಜಿನ್ನರಿಗೇರಿದ ಪಿತ್ತ

ಮಿ| ಜಿನ್ನರಿಗೆ ರಾಷ್ಟ್ರಪತಿಗಳಾದ ಮೌಲಾನಾ ಆಜಾದರು "ಡಿಲ್ಲಿಯಲ್ಲಿನ ಕಾಂಗ್ರೆಸ್ ಠರಾವೆಂದರೆ ಯಾವುದೇ ಒಂದು ಪಾರ್ಟಿಯದಾಗಿರದೆ ಎಲ್ಲರದಾದ ಮಂತ್ರಿಮಂಡಲ ಎಂಬರ್ಥ. ಆದರೆ, ರಾಷ್ಟ್ರ ವಿಭಜನೆಯನ್ನುಳಿದ ಅದಾವುದಕ್ಕೂ ಸಮ್ಮತಿಸಬಾರದೆಂಬುದು ಲೀಗಿನ ಧೋರಣೆಯೇ? ಹಾಗಿದ್ದರೆ ದಯವಿಟ್ಟು ವಿಚಾರ ವಿವೇಚಿಸಿರಿ" ಎಂದು ಬರೆದ ತಂತಿಗೆ ಮಿ| ಜಿನ್ನರು ಈ ರೀತಿ ಉತ್ತರ ಕೊಟ್ಟದ್ದಾರೆ: "ನಿಮ್ಮ ತಂತಿ—ನಂಬಿಗೆ ಹುಟ್ಟಿಸಲಾರದು. ನಿಮ್ಮೊಡನೆ ಪತ್ರಮೂಲಕವಾಗಲೀ, ಇನ್ನಾವುದೇ ರೀತಿಯಿಂದಾಗಲೀ ನಾನು ಮಾತನಾಡಲು ನಿರಾಕರಿಸುತ್ತೇನೆ; ಕಾರಣ ಮುಸ್ಲಿಮ್ ಭಾರತದ ನಂಬಿಗೆಯನ್ನು ನೀವು ಕಳೆದುಕೊಂಡಿದ್ದೀರಿ. ಪರರಾಷ್ಟ್ರಗಳಿಗೆ ಕಾಂಗ್ರೆಸ್ ರಾಷ್ಟ್ರೀಯ ಸಂಸ್ಥೆಯೆಂದು ತೋರಿಸಲಾಗಿ ನಿಮ್ಮನ್ನು ಮುಸ್ಲಿಮ್ ಆಟದ ಕಾಂಗ್ರೆಸ್ ಅಧ್ಯಕ್ಷನನ್ನಾಗಿ ಮಾಡಿದ್ದಾ ರೆಂಬುದೂ ನಿಮಗೆ ತಿಳಿಯದೇ? ನೀವು ಹಿಂದು ಗಳದಾಗಲೀ, ಮುಸ್ಲಿಮರದಾಗಲಿ, ಪ್ರತಿನಿಧಿ ಗಳಲ್ಲ. ಕಾಂಗ್ರೆಸ್ ಹಿಂದೂ ಸಂಸ್ಥೆ. ನಿಮ್ಮಲ್ಲಿ ಸ್ವಾಭಿಮಾನವಿದ್ದರೆ ಕೂಡಲೇ ರಾಜಿನಾಮೆ ಕೊಡಿರಿ. ಇದುವರೆಗೆ ಲೀಗಿನ ವಿರುದ್ಧ ನೀವು ಅತ್ಯಂತ ಹೀನಕಾರ್ಯಗಳನ್ನೆಲ್ಲಾ ಮಾಡಿದ್ದೀರಿ. ನೀವು ನಿರಾಶಾಜನಕ ಸ್ಥಿತಿಯಲ್ಲಿ ಸೋತುಹೋದಿರೆಂಬುದು ನಿಮಗೆ ತಿಳಿದಿದೆ. ಆದನ್ನು ಬಿಟ್ಟು ಬಿಡಿರಿ." ಈ ಎರಡು ಪತ್ರಗಳನ್ನು ಮಿ| ಜಿನ್ನರೇ ಪ್ರಕಟನೆಗಾಗಿ ಹೊರಡಿಸಿದ್ದಾರೆ. ಜಿನ್ನರ ಮನಸ್ಸಾ ಮಿದುಳೂ ಇದರಿಂದ ಜಗತ್ತಿಗೆ ಗೊತ್ತಾಗದೇ?

ಬಲ್ಲಪ್ಪ ಮತ್ತು ಒಲ್ಲಪ್ಪ
ಇವತ್ತಿನ ನನ್ನ ಕೆಲಸ ಮುಗಿಯಿತು — ಒಂದು ಸಿನೀ ಮಾಕ್ಕೆ ಹೋಗೋಣ.
ಏನು. ಆಗಲೇ ನುಗಿಯಿತೇ. ನಿನಗಿಂತ ನನ್ನ ಕೆಲಸ ಕಡಿಮೆ ಇದ್ದರೂ ಇನ್ನೂ ಇಷ್ಟೆಲ್ಲಾ ಪತ್ರಗಳನ್ನು ದಾಖಲ್ಮಾಡಬೇಕಾದ್ದು ಉಳಿದಿದೆ. ಅದು ಹೇಗೆ ನೀನು ಬೇಗ ಬೇಗನೂಡುತ್ತೀ.
ಬುದ್ಧಿ ಚುರುಕಾಗಿಲ್ಲದಿದ್ದರೆ ಕೆಲಸ ಜಾಗ್ರತೆಯಾಗಿ ಮಾಡಲು ಆಗುವುದಿಲ್ಲ. ನಾನು ಪ್ರತಿಬೆಳಿಗ್ಗೆ
ಈನೊಸ್
"ಫ್ರೂಟ್ ಸಾಲ್ಟ್"
ತೆಗೆದುಕೊಳ್ಳುವುದರಿಂದ ದಿನ ಪೂರ್ತಿ ಚುರುಕಾಗಿರುತ್ತೇನೆ.
ಪ್ರತಿದಿನ ಎಷ್ಟು ಮೇಲೆ ತಿಳಿಯಾದ ಒಂದು ಲೋಟ ಈನೊಸ್ ಫ್ರೂಟ್ ಸಾಲ್ಟನ್ನು ಸೇವಿಸಿದರೆ ಬುದ್ಧಿ ಕಾರ್ಯಗಳಿಗೆ ಅಡಚಣೆ ತರುವ ತಲನೋವು, ಪೈತ್ಯ, ಅಜೀರ್ಣ, ಹೃದಯತಾಪ, ಮಲಬದ್ಧತೆ ಮುಂತಾದ ಆಹಾರ ವೃತ್ತಿಗಳ ಅಜಾಗರೂಕತೆಯಿಂದ ಉಂಟಾಗುವ ಶಾರೀರಿಕ ಅನ್ಯವಸ್ತೆಗಳಿಗೆ ಅವಕಾಶ ಕೊಡದೆ ಬುದ್ಧಿಯನ್ನು ಸ್ವಚ್ಛವಾಗಿಯೂ ಚುರುಕಾಗಿಯೂ ಇಡುವುದು. ಶರೀರ ಆರೋಗ್ಯವಾಗಿದ್ದರೆ ಬುದ್ಧಿಯೂ ಸರಿಯಾಗಿಯೇ ಇರುವುದು.
ಈನೊಸಿನ ಉಲ್ಲಾಸವನ್ನು ಸೀಸೆ ತೆರೆದ ಮೇಲೆಯೂ ಕಾಪಾಡುವುದಕ್ಕೋಸ್ಕರ ಗಾಳಿ ಸಂಚಾರಕ್ಕೆ ಅವಕಾಶವಿಲ್ಲದಂತೆ ಬಿರಟೆಯುಳ್ಳ ಸೀಸೆಗಳಲ್ಲಿಯೇ ಮಾರಲ್ಪಡುವುದು. ಈನೊಸಿನ ಚಿಕ್ಕ ಸೀಸೆಗೆ ಬೆಲೆ ಆರು ಆಣೆಯಷ್ಟು ಕಡಿಮೆ.
715

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆಗಳು

I. ಇಂಗ್ಲೀಷ್

1. ದಿ ಮೈಸೂರ್ ಟ್ರೈಬ್ಸ್ ಎಂಡ್ ಕಾಸ್ಟ್ಸ್—ಕೀರ್ತಿಶೇಷ ಶ್ರೀ. ಎಚ್. ವಿ. ನಂಜುಂಡಯ್ಯ, ಎಂ.ಎ., ಎಂ.ಎಲ್., ಸಿ.ಐ.ಇ.ರವರು ಮತ್ತು ರಾವ್ ಬಹದ್ದೂರ್ ಎಲ್. ಕೆ. ಅನಂತಕೃಷ್ಣ ಅಯ್ಯರ್, ಇವರ ಇಂಡೆಕ್ಸ್ ಸಹಿತ. ನಾಲ್ಕು ಭಾಗಗಳಲ್ಲಿ. ಭಾಗ 1 . 15--0--0
ಇತರ ಭಾಗಗಳು (ಇಂಡೆಕ್ಸ್ ಉಚಿತ) ಪ್ರತಿಯೊಂದಕ್ಕೆ . . . 12--8--0
2. ಪ್ರಮಾಣ ಸಮುಚ್ಚಯ—ಆಚಾರ್ಯ ದಿನ್ನಾಗ. ಭಾಗ 1. ಶ್ರೀ. ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್, ಎಂ. ಎ., ಇವರಿಂದ 3--0--0
3. ದಿ ಮನ್ರೋ ಸಿಸ್ಟೆಮ್ ಓಫ್ ಬ್ರಿಟಿಷ್ ಸ್ಟೇಟ್ಸ್‌ಮೇನ್‌ಶಿಪ್ ಇನ್ ಇಂಡಿಯಾ—ಡಾ. ಕೆ. ಎನ್. ವೆಂಕಟಸುಬ್ಬಾ ಶಾಸ್ತ್ರಿ, ಎಂ.ಎ., ಪಿಎಚ್.ಡಿ., ಅವರಿಂದ . . . 3--0--0

II. ಕನ್ನಡ

1. ಕನ್ನಡ ಭಾಷೆಯ ಇತಿಹಾಸ—ಶ್ರೀ. ಆರ್. ನರಸಿಂಹಾಚಾರ್, ಎಂ ಎ.,ಬಿ.ಎಲ್.ರವರಿಂದ 1--0--0

(ಬಿ) ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಮಾಲೆ

1. ಹರಿಶ್ಚಂದ್ರ ಕಾವ್ಯ ಸಂಗ್ರಹ 0-12--0
2. ಕಾದಂಬರಿ ಸಂಗ್ರಹ 0-12--0
3. ಪ್ರಭುಲಿಂಗಲೀಲೆಯ ಸಂಗ್ರಹ 0-12--0
4. ಸೊಕ್ರೆಟೀಸನ ಕೊನೆಯ ದಿನಗಳು—ಲೇಖಕರು: ಶ್ರೀ. ಎ. ಎನ್. ಮೂರ್ತಿರಾವ್, ಎಂ.ಎ. ಸಾದಾ ಪ್ರತಿ 0-12--0. ಕೆಲಿಕೊ 1--0--0
5. ಶ್ರೀ. ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ—ಶ್ರೀ. ಕೆ. ವಿ. ಪುಟ್ಟಪ್ಪ — ಸಾದಾ 0-12--0 ಕೆಲಿಕೊ 1--4--0
6. ರವೀಂದ್ರನಾಥ ಠಾಕೂರರ ಜೀವನ ಮತ್ತು ಕಾರ್ಯಗಳು—ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ. — — ಸಾದಾ 0--12--0. ಕೆಲಿಕೊ 1--4--0
7. ಆರೋಗ್ಯ ಮತ್ತು ಅದರ ಜ್ಞಾನ ಮತ್ತು ಸಾಧನ—ಡಾ. ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್.ಎಸ್‌ಸಿ.—ಅವರಿಂದ. ರಟ್ಟು 0--12--0. ಕೆಲಿಕೊ 1--4--0
8. ಪಂಪರಾಮಾಯಣ ಸಂಗ್ರಹ—ಪಂಡಿತ ಟಿ. ಶ್ರೀನಿವಾಸ ರಾಘವಾಚಾರ್ ಮತ್ತು ಶ್ರೀ. ಡಿ. ಎಲ್. ನರಸಿಂಹಾಚಾರ್ಯರಿಂದ. — — ರಟ್ಟು 0--12--0. ಕೆಲಿಕೊ 1--0--0
9. ಹಣ ಪ್ರಪಂಚ—ಶ್ರೀ. ವಿ. ಸೀತಾರಾಮಯ್ಯನವರಿಂದ. ರಟ್ಟು 0--12--0. ಕೆಲಿಕೊ 1--4--0
10. ಸಂಸ್ಕೃತ ನಾಟಕ—ಶ್ರೀ. ಎ ಆರ್. ಕೃಷ್ಣಶಾಸ್ತ್ರಿ, ಎಂ.ಎ, ಅವರಿಂದ. — ರಟ್ಟು 0-12--0 ಕೆಲಿಕೊ 1--4--0
11. ಜೀವ ವಿಜ್ಞಾನ—ಶ್ರೀ. ಬಿ. ವೆಂಕಟನಾರಣಪ್ಪ, ಎಂ.ಎ., ಅವರಿಂದ . — ರಟ್ಟು 0-12--0 ಕೆಲಿಕೊ 1--4--0
12. ಹಿಂದೂ ದರ್ಶನಸಾರ—ಶ್ರೀ. ಲಕ್ಷ್ಮೀಪುರಂ ಶ್ರೀನಿವಾಸಾಚಾರ್‌ರಿಂದ. — ರಟ್ಟು 0-12--0 ಕೆಲಿಕೊ 1--4--0

ನೋಟೀಸು

ದಕ್ಷಿಣ ಕನ್ನಡ ಸಬ್-ಕೋರ್ಟಿನಲ್ಲಿ

ಕ್ರಮ ನಂಬ್ರ 16/1940.

ಕುಂಞಂಣ ಭಂಡಾರಿ —ವಾದಿ

ಮತ್ತು

ಅಬ್ಬಕ್ಕೆ ಶೆಡ್ತಿ ಕೂಡಾ 27 ಜನರು —ಪ್ರತಿವಾದಿರು

10ನೇ ಪ್ರತಿವಾದಿಯಾದ ಮಂಗಳೂರು ತಾಲೂಕು ಸೂರಿಂಜೆ ಗ್ರಾಮದ ಕೋಟ್ಯಾರ್ ದಲ್ಲಿರುವ ತಂಗಿ ಶೆಡ್ತಿ ಮಗ ಮರ್ದ ಶೆಟ್ರಿಗೆ

ಮೇಲ್ಕಂಡ ವಾದಿಯು ನೀವು ವಗೈರೆ ಮೇಲೆ ತಾ. 24-6-1927ನೇ ಅಡವು ದಸ್ತಾವೇಜು ವಗೈರೆ ಬಾಬ್ತು ಬಹಾ ಐವೇಜು ಬರ ಮಾಡಿಕೊಳ್ಳುವರೆ ದಾಕಲು ಮಾಡಿದ ಮೇಲಿನ ವ್ಯಾಜ್ಯವು ತಾ. 23-7-1940ಕ್ಕೆ ತನಿಕೆಗೆ ಇಟ್ಟಿರುತ್ತದೆ ಆ ದಿವಸ ಸದರಿ ಕೋರ್ಟು ಮುಂದೆ ನೀವು ಹಾಜರಾಗಿ ವ್ಯವಹರಿಸುವರೆ ತಪ್ಪಿದ್ದಲ್ಲಿ ನಿಮ್ಮ ಶಿವಾಯಿ ಮೇಲಿನ ವ್ಯಾಜ್ಯ ತೀರ್ಮಾನಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ತಿಳಿಸೋಣವಾಗಿಯದೆ.

Mangalore, 15-7-'40. } **B. Vyasarayachar,** Advocate for Plaintiff.

KAYAKALPA MODAK

ಕಾಯಕಲ್ಪ ಮೋದಕ

ಆಯುರ್ವೇದಿಕ್ ಡ್ರಗ್ ರೀಸರ್ಚ್ ಇನ್ಸ್-ಟಿಟ್ಯೂಟ್ ಇವರ ಶರೀರಕ್ಕೆ ದಾರ್ಢ್ಯ ಮತ್ತು ಪುಷ್ಟತೆ ಉಂಟುಮಾಡಿ, ಆಬಾಲವೃದ್ಧರಿಗೆ ರೋಗರಹಿತರಾಗಿ, ದೀರ್ಘಾಯುವನ್ನು ಕೊಡುವ ಶರೀರಕ್ಕೆ ದಿವ್ಯ ವನಸ್ಪತಿಗಳಿಂದ ಕೂಡಿರುವ ವಿಶೇಷ ಮೋದಕ. ಬಾಟ್ಲಿ 1ರ ರೂಪಾಯಿ 3-8-0 (ಪೋಸ್ಟಿಂಗ್ ವಗೈರೆ ಹೊರತು ಮಾಫಿ).

Sole Distributors: THE

Indian Drug & General Agencies,

23, Stringers Street G. T. MADRAS

ಐಯರ್‌ಲ್ಯಾಂಡ್ ಮತ್ತು ಭಾರತ

ಲಾರ್ಡ್
ಜೆಟ್‌ಲ್ಯಾಂಡರಿಗೊಂದು ಉತ್ತರ
(ಲೇಖಕರು: ಶ್ರೀ. ನಿಲ್ಕನ್ ಪೆರುಮಾಳ್)

"ಐಯರ್‌ಲ್ಯಾಂಡ್ ಮತ್ತು ಭಾರತ ಇವುಗಳು, ನಮ್ಮನ್ನೆಲ್ಲರನ್ನೂ ಒಂದೇ ರೀತಿಯಾಗಿ ಇದಿರಿಸುವ ಅಪಾಯವಿದ್ದರೂ ವಿರೋಧಾಭಿಪ್ರಾಯಗಳ ಚರ್ಚೆಗಳಲ್ಲಿ ತಲ್ಲೀನವಾಗಿ ವಿಷಾದಾತ್ಮಕ ದೃಶ್ಯವನ್ನು ಪ್ರದರ್ಶಿಸಿವೆ" ಎಂದು ಲಾರ್ಡ್ ಜೆಟ್‌ಲ್ಯಾಂಡರು ಒಂದೆರಡು ವಾರಗಳ ಹಿಂದೆ ಲಂಡನಿನಲ್ಲಿ ಭಾಷಣವೀಯುತ್ತಾ ನುಡಿದಿದ್ದಾರೆ.

ಬ್ರಿಟಷ್ ಅಧಿಕಾರಕ್ಕೆ ಎರಡೂ ಒಳಗಾಗಿವೆ ಹೊರತಾಗಿ ಬೇರಾವ ಒಂದೇ ರೀತಿಯ ವಿಚಾರವೂ ಐಯರ್‌ಲ್ಯಾಂಡ್ ಮತ್ತು ಭಾರತಗಳನ್ನು ಒಂದಾಗಿಸಲಿಲ್ಲ. ಎರಡು ರಾಷ್ಟ್ರಗಳ ಚರ್ಚೆ ಹಾಗೂ ವಿರೋಧಗಳೂ ಒಂದೇ ರೀತಿಯಾಗಿಲ್ಲ. ಐಯರ್‌ಲ್ಯಾಂಡಿಗೆ ಅರ್ಧ ಸ್ವಾತಂತ್ರ್ಯ ದೊರೆತಿದೆ; ಆದರೆ ಭಾರತವು ಕೈಯಲ್ಲಿ ತಟ್ಟೆಯನ್ನು ಹಿಡಿದುಕೊಂಡು ಡೊಗ್ಗಾಲು ಹಾಕಿ ಅಷ್ಟನ್ನಾದರೂ ಕೊಡಿರೆಂದು ಬೇಡುತ್ತಿದೆ. ನಿರ್ಭೀತನಾಗಿ ಡಿ'ವೆಲರಾನು ಲಾರ್ಡ್ ಕ್ರೈಗಾವನ್‌ನಿಗೆ ಐಯರ್‌ಲ್ಯಾಂಡಿನಲ್ಲಿ ಶರ್ತಗಳನ್ನು ತಾನೇ ಹೇಳುತ್ತಿರುವಾಗ, ನಮ್ಮ ಅಸಮಾನ ಹಾಗೂ ಏಕಮಾತ್ರ ನಾಯಕರಾದ ಗಾಂಧೀಜಿ ಲಾರ್ಡ್ ಲಿನ್‌ಲಿತ್‌ಗೋರವರಿಂದ ಅಧಿಕಾರದ ಶರ್ತಗಳನ್ನು ಕೇಳಲು ಸಿಮ್ಲಕ್ಕೆ ನಡೆಯಬೇಕಾಗಿದೆ. ಇಂತಹ ವಿಚಾರಗಳು ಸಾಗುತ್ತಿರುವಾಗ ವಿಶಾದಾಂತ ದೃಶ್ಯಗಳನ್ನು ಐಯರ್‌ಲ್ಯಾಂಡ್ ಹಾಗೂ ಭಾರತಗಳು ಪ್ರದರ್ಶಿಸುತ್ತಿವೆ ಎಂಬ ಲಾರ್ಡ್ ಜೆಟ್ಲೆಂಡರ ತಾರತಮ್ಯಕ್ಕೆ ನಿಜಕ್ಕೂ ವಿಷಾದಿಸಬೇಕಾಗಿದೆ.

ಐಯರ್‌ಲ್ಯಾಂಡಿನ ಪರಿಸ್ಥಿತಿಯನ್ನು ನಾವು ಮೊದಲು ತೆಗೆದುಕೊಳ್ಳೋಣ. ಡಬ್ಲಿನ್‌ನ ವೀರನು ಕೊನೆಯ ತನಕವೂ ಕಾದಾಡಬಲ್ಲ ಸಾಹಸಿ. ಹಲವು ವರುಷಗಳ ಕಾದಾಟ ನಡೆಸಿ ಕೊನೆಗೆ ಸ್ವಾತಂತ್ರ್ಯವನ್ನೀತ ಗಳಿಸಿದ್ದಾನೆ. ಸಂಪೂರ್ಣವಲ್ಲದಿದ್ದರೂ ಇಂದು "ಐರ್" — ಸ್ವಿಜರ್‌ಲ್ಯಾಂಡಿನಂತೆ ಚಿಕ್ಕದೊಂದು ಪ್ರಜಾಪ್ರಭುತ್ವ. ಇಂದು ಬ್ರಿಟಷ್ ಅರಸನು ಪರರಾಷ್ಟ್ರಗಳ ಸಂಬಂಧದ ಒಂದು ಸಾಧನವಾಗಿರುವನಲ್ಲದೆ, ರಾಷ್ಟ್ರದ ರಾಜ್ಯಭಾರದಲ್ಲಿ ಅಲ್ಲ. ರಾಜ್ಯಘಟನೆಯಲ್ಲಿ ಆತನ ಸ್ಥಾನವಿಲ್ಲ; ಬದಲು ಬರೆಹದಲ್ಲಿ ಮಾತ್ರ. ಅಷ್ಟೇ ಅಲ್ಲದೆ ಐಯರ್‌ಲ್ಯಾಂಡಿನಲ್ಲಿ "ರಾಜನಿಗೆ ವಿಧೇಯನಾಗಿರುವೆ" ಎಂಬ ಪ್ರತಿಜ್ಞೆಗೂ ಸ್ಥಾನವಿಲ್ಲ. ಪರರಾಷ್ಟ್ರ ರಾಜಕಾರಣದಲ್ಲಿ ಈ ಚಿಕ್ಕ ಪ್ರಜಾಪ್ರಭುತ್ವವು ಬ್ರಿಟನ್ನಿನಂತೆಯೇ ಕಾರ್ಯ ನಿರ್ವಹಿಸುವುದು. ಡಿ'ವೆಲರಾ ತನ್ನ ಪ್ರತಿನಿಧಿಗಳನ್ನು ವೋಶಿಂಗ್‌ಟನ್, ರೋಮ್, ಬರ್ಲಿನ್ ಮುಂತಾದ ಪ್ರಮುಖ ರಾಷ್ಟ್ರಗಳ ಕೇಂದ್ರಗಳಿಗೆ ಕಳುಹಿಸಿರುವನಷ್ಟೆ ಅಲ್ಲದೆ, ಸ್ವಂತ ರಾಷ್ಟ್ರಧ್ವಜವೂ, ಸೇನೆಯೂ ಇದ್ದು ಈ ಸೇನೆಯು ಇಂಗ್ಲೀಷರನ್ನು "ವೈರಿಗಳು" ಎಂದು ಸಂಬೋಧಿಸುವ ರಾಷ್ಟ್ರಗೀತೆಯನ್ನು ಹಾಡುತ್ತಿದೆ. ಆದರೆ, ಅನ್ಯ ರಾಷ್ಟ್ರಗಳಿಗೆ ತೆರಳಲು ಐರಿಷ್ ಪ್ರಜೆಗಳಿಗೆ ಕೊಡಲಾಗುವ "ಪಾಸ್‌ಪೋರ್ಟ್"ನಲ್ಲಿ ಜಾರ್ಜ್ ಚಕ್ರವರ್ತಿಯ ಹೆಸರೊಂದು ಇದೆ. ಇವೆಲ್ಲವೂ ತೃಪ್ತಿಕರವಾಗಿ ಕಾಣುವುದಿಲ್ಲವೇ? ಆದರೂ ಐರಿಷ್ ಪ್ರಜೆಗಳು ಇಂದು ಜರ್ಮನ್ ಹಾಗೂ ಅಮೇರಿಕನರಂತೆ ತಮಗೂ ಬ್ರಿಟಷರೊಡನೆ ಸಮಾನತೆ ಬೇಕೆನ್ನುತ್ತಿದ್ದಾರೆ. ಸಮತೆಯೊಂದನ್ನು ಕೊಡಲು ಸಾಧ್ಯವಿಲ್ಲೆನ್ನುವ ರಾಷ್ಟ್ರ — ಸಮತೆಗಾಗಿ ಸ್ಥಾಪಿತವಾದ ಜಗತ್ತಿನಲ್ಲಿ ನ್ಯಾಯ ಸ್ಥಾಪಿಸಿದ ಹಾಗಾಯಿತೆ? ಇಂದು ಐರಿಷ್ ಪ್ರಜೆಗಳು ಅಂತಹ ಸಮತೆಯ ಸ್ವಾತಂತ್ರ್ಯ ತಮಗೆ ಹತ್ತು ಸಿಮಿಷಗಳ ಕಾಲಕ್ಕಾದರೂ ದೊರೆತರೆ ಸಾಕೆನ್ನುತ್ತಿದ್ದಾರೆ. ಅಲ್ಲದೆ ರಾಷ್ಟ್ರದ ಶಕ್ತಿಯನ್ನು ಕುಂದಿಸುವುದಕ್ಕಾಗಿ ಅಲ್ಸ್ಟರ್ ಪ್ರಾಂತ್ಯವನ್ನು ಬ್ರಿಟನ್ನು ಬೇರ್ಪಡಿಸಿದುದನ್ನು ಒಟ್ಟು ಗೂಡಿಸಬೇಕೆನ್ನುತ್ತಿದ್ದಾರೆ.

ಐಯರ್‌ಲ್ಯಾಂಡಿನ ತಾಟಸ್ಥ್ಯ

ಪ್ರಕೃತದ ಯುದ್ಧದಲ್ಲಿ ಐಯರ್‌ಲ್ಯಾಂಡ್ ಸಂಪೂರ್ಣ ತಾಟಸ್ಥ್ಯವನ್ನು ವಹಿಸಿದೆ. ಹೀಗೆ ಐಯರ್‌ಲ್ಯಾಂಡ್ ಮಾಡುವುದೆಂದು ಮೂರು ವರ್ಷಗಳ ಹಿಂದೆಯೇ ಗೊತ್ತಾಗಿದೆ. "ಡಿ'ವೆಲರಾನ ಐಯರ್‌ಲ್ಯಾಂಡಿನ — ಯುರೋಪಿನ ಕಡೆಗಣ ರಾಜಕೀಯ ವಿಚಾರವು ತಾಟಸ್ಥ್ಯ ಧೋರಣೆಯದಾಗಿದೆ. ಈ ತಾಟಸ್ಥ್ಯವು ಬೆಲ್ಜಿಯಂ ಅಥವಾ ಸ್ವಿಜರ್‌ಲ್ಯಾಂಡಿನ ಜಾತಿಯದಲ್ಲಿ ಬದಲು ಸಂಪೂರ್ಣವಾಗಿ ದೂರ ನಿಲ್ಲುವ ಅಮೇರಿಕೆಯ ಧೋರಣೆಯಂತಹದು" ಎಂದು ಹೆರೋಲ್ಡ್ ಕೆಲೆಂಡರ್ ಎಂಬವನು ಮೂರು ವರ್ಷಗಳ ಹಿಂದೆ "ನ್ಯೂಯೋರ್ಕ್ ಟೈಮ್ಸ್" ಪತ್ರಿಕೆಯಲ್ಲಿ ಬರೆದಿದ್ದಾನೆ.

ಹಾಗೆಂದು ಐರಿಷ್ ಪ್ರಜೆಗಳ ವಿಚಾರದಲ್ಲಿ ಅನ್ಯಥಾ ಭಾವಿಸಲಾಗದು. ಹಿಟ್ಲರನಿಗೆ ವಿಜಯ ದೊರೆಯಬೇಕೆಂದೆಣಿಸುವ ಒಬ್ಬನೇ ಒಬ್ಬ ಐರಿಷ್ ಪ್ರಜೆಯೂ ಇರಲಾರನು. ಐಯರ್‌ಲ್ಯಾಂಡಿಗೆ ಸ್ವಾತಂತ್ರ್ಯ ತರಲು ಬ್ರಿಟಷರನ್ನು ಇದಿರಿಸಿದ ರಿಪಬ್ಲಿಕನ್ ಸೇನೆಯ ಸೈನಿಕನೊಬ್ಬನು "ಇನ್ನೊಂದು ಯುದ್ಧದಲ್ಲಿ ನಾನು ಬ್ರಿಟಷ್ ಸೇನೆಯಲ್ಲಿ ಸೇರಿ ಕಾದಾಡಲೂ ಬಹುದು. ಆದರೆ ಸ್ವಾತಂತ್ರ್ಯವಾಗಿ, ನಾನಾಗಿಯೇ ಮುನ್ನಡೆದು ಕಾದಲು ಇಚ್ಛಿಸುತ್ತೇನೆ" ಎಂದು ಕೆಲೆಂಡರನೊಡನೆ ನುಡಿದಿದ್ದ.

ಇಷ್ಟೇ ಅಲ್ಲದೆ, ಐರ್ — ಯುರೋಪಿನ ಸಮರದಿಂದ ದೂರ ನಿಲ್ಲಲು ಬೇರೆ ಕೆಲವು ಕಾರಣಗಳೂ ಇವೆ. ಈ ಪುಟ್ಟ ಅರ್ಧ ಪ್ರಜಾಪ್ರಭುತ್ವದ ರಾಷ್ಟ್ರ ಇನ್ನು ಹಸುಳೆ. ಡಿ'ವೆಲರನ ಕೈಕೆಳಗೆ ಈ ರಾಷ್ಟ್ರವು ತನ್ನ ಆದೃಷ್ಟವನ್ನು ಸಿಥಾನವಾಗಿ ಬಲಪಡಿಸಿಕೊಳ್ಳುತ್ತಲಿದೆ. ಅಲ್ಲದೆ, ಮಹಾಯುದ್ಧದಲ್ಲಿ ಬಲಿಕೊಡಲು ಬೇಕಷ್ಟು ಮಂದಿಯೂ, ಹಣವೂ ತಮ್ಮಲ್ಲಿಲ್ಲವೆಂದು ಐರಿಷ್ ಪ್ರಜೆಗಳ ಎಣಿಕೆ. ಅಷ್ಟೇ ಅಲ್ಲ; ಯುದ್ಧಕ್ಕೆ ಸೇರಿದರೂ ತಮ್ಮ ಪರಿಸ್ಥಿತಿಯಲ್ಲಿ ಎಳ್ಳಷ್ಟೂ ಬದಲಾವಣೆ ಉಂಟಾಗದೆಂದು ಅವರಿಗೆ ಖಚಿತವಾಗಿದೆ. ತಮ್ಮ ರಾಷ್ಟ್ರದಲ್ಲಿ ಇರುವ ಹಣವನ್ನು ಬಡರೈತರ ಪ್ರಗತಿಗಾಗಿ ವಿನಿಯೋಗಿಸುವುದು, ಯುದ್ಧದೇವತೆಯ ಪರಮ ಮಿತ್ರನಾದ ಧನಾಢ್ಯ ಹಾಗೂ ಯುದ್ಧ ಸಾಮಗ್ರಿಗಳ ತಯಾರಕನಿಗಾಗಿ ವಿನಿಯೋಗಿಸುವುದು ಹೆಚ್ಚಿನದೆಂದು ಇವರು ತಿಳಿದಿದ್ದಾರೆ. ಈ ವಿಚಾರಗಳು ಅವರ ದೃಷ್ಟಿಯಲ್ಲಿ ಎಲ್ಲಕ್ಕೂ ಹೆಚ್ಚಿನ ಬೆಲೆಬಾಳುವವುಗಳು. ಇವು ಐರಿಷ್ ಜನತೆಯ ತನಗೆ ತಾನು ಎಂಬ ಬುದ್ಧಿಯನ್ನು ಪ್ರಕಟಿಸುವುದಿಲ್ಲ; ಬದಲು ಯುದ್ಧದಿಂದ ದೂರವಿರಿಸುತ್ತದೆ. "ಐರಿಷ್ ಜನತೆಗೆ ಸಮರವೇ ಶಾಂತಿಯ ಕಾಲ". ಆದರೂ, ಇಂದು ಪ್ರತಿಯೊಬ್ಬ ಐರಿಷ್ ಪ್ರಜೆಯೂ ಬ್ರಿಟಿಷರ ಗೆಲುವಿಗಾಗಿ ಪ್ರಾರ್ಥಿಸುತ್ತಿರಬಹುದು–ಎಂಬುದರಲ್ಲಿ ಸಂಶಯಕ್ಕೆ ಎಡೆ ಇಲ್ಲ. ಆದರೆ ಇಂದು ಅವರ ವಿರೋಧ ಹಾಗೂ ಚರ್ಚೆಗಳೇನೆಂಬುದು ನಮಗಿಲ್ಲಿ ತಿಳಿದು ಬಂದಿಲ್ಲ. ಆದರೆ ಎಲ್ಲವನ್ನು ಅರಿತ ಜೆಟ್ಲೆಂಡರ ಟೀಕೆ ಇಲ್ಲಿ ಕೇಳಿಸುತ್ತಿದೆ. ಅಂತೂ ಇಂದು ಐರಿಷ್ ಜನತೆಗೆ ಬ್ರಿಟನ್ನಿನೊಡನೆ ಚರ್ಚಿಸಬೇಕಾದ ಯಾವ ವಿರೋಧ ಸಮಸ್ಯೆಯೂ ಇಲ್ಲವೆನ್ನಬಹುದು.

ಎಲ್ಲಿದೆ ತಾರತಮ್ಯ?

ಭಾರತದ ವಿಚಾರದಲ್ಲಿ — ನಾವಿನ್ನೂ ದಬ್ಬಾಳಿಕೆಗೆ ಒಳಗಾಗಿದ್ದೇವೆ; ಬ್ರಿಟಷರು ಇದನ್ನು ತಮ್ಮ ಅಮೂಲ್ಯ ಸೊತ್ತಾಗಿ ತಿಳಿದಿದ್ದಾರೆ. ಲಾರ್ಡ್ ರೊತೆರ್‌ಮೇರ್‌ರೇ "ಬ್ರಿಟಷ್ ಇಂಡಿಯಾ ಇಲ್ಲದಿರುತಿದ್ದರೆ, ಬ್ರಿಟಷ್ ಸಾಮ್ರಾಜ್ಯವೇ ಇರುತ್ತಿರಲಿಲ್ಲ" ಎಂದು ಸಾರಿದ್ದಾರೆ. ನಾವಂತೂ ಇಂಗ್ಲೀಷರು ಪರಮ ವೈರಿಗಳೆಂದು ಭಾವಿ

[ಪುಟ ೧೧ ನೋಡಿ]


SHAKE THE BOTTLE
Waterbury's Compound
INDICATED IN
ಸೌಖ್ಯದ ಸ್ವರ್ಗ
ಆರೋಗ್ಯವಂತರಾದ ತಾಯಿತಂದೆಗಳು . . . . ಆರೋಗ್ಯಶಾಲಿಯಾದ ಮಗು! ವಾಟರ್‌ಬರೀಸ್ ಕಾಂಪೌಂಡ್‌ನ ಸಹಾಯದಿಂದ ದೊರೆತಿರುವ ಆರೋಗ್ಯದ ಫಲವಾಗಿ ಆ ಸಂಸಾರದಲ್ಲಿ ಸೌಖ್ಯವು ನೆಲಸಿದೆ.
ವಾಟರ್‌ಬರೀಸ್ ಕಾಂಪೌಂಡ್‌ನಲ್ಲಿ, ಉತ್ತಮವಾದ ಬೆಳವಣಿಗೆ ಮತ್ತು ಚೆನ್ನಾದ ಆರೋಗ್ಯದ ರಕ್ಷಣೆಗೆ ಬೇಕಾದ ಕಾಳಜ ಮತ್ತು ಮೂಲ್ಯ ಸತ್ವಗಳೂ, ಕಬ್ಬಿಣ ಮತ್ತು ತಾಮ್ರದ ಅಂಶಗಳೂ ಇವೆ ಬೆಳೆಯುವ ಮಕ್ಕಳನ್ನು ಸುದೃಢರಾದ ಮನುಷ್ಯರನ್ನಾಗಿ ಬೆಳೆಸಲೂ ತಾಯಿತಂದೆಗಳನ್ನು ಆರೋಗ್ಯದಲ್ಲಿದ್ದಲೂ ಯೋಗ್ಯವಾದ ಅತ್ಯುತ್ತಮ ದರ್ಜೆಯ ಟಾನಿಕ್ ಆಹಾರ ಇದು. ಸ್ತ್ರೀಯರು ಗರ್ಭಿಣಿಯರಾಗಿರುವಾಗಲೂ ಹೆರಿಗೆಯಾದ ಮೇಲೂ, ವಾಟರ್‌ಬರೀಸ್ ಕಾಂಪೌಂಡನ್ನು ದಿನಂಪ್ರತಿ ಕ್ರಮವಾಗಿ ಉಪಯೋಗಿಸತಕ್ಕದ್ದು ಅವಶ್ಯಕ.
ಈ ದಿನವೇ ಒಂದು ಸೀಸೆ ವಾಟರ್‌ಬ್ಯರೀಸ್ ಕಾಂಪೌಂಡ್ ಕೊಂಡುಕೊಳ್ಳಿರಿ. ಅದು ರುಚಿಕರ ಮತ್ತು ಸೇವಿಸಲು ಸುಲಭ ಆಗಿರುತ್ತದೆ. ಎರಡು ಸೈಜ್ — ೬ ಔನ್ಸ್ ಮತ್ತು ೧೬ ಔನ್ಸ್ ಸೀಸೆಗಳಲ್ಲಿ ಸಿಗುತ್ತದೆ.
ವಾಟರ್‌ಬರೀಸ್
ಕಾಂಪೌಂಡು . . . . ನಿಮ್ಮನ್ನು ಆರೋಗ್ಯವಾಗಿಡುತ್ತದೆ
NW4

ಅಶಕ್ತ ಮಕ್ಕಳು
ಡೋಂಗರೇ
ಬಾಲಾಮೃತವನ್ನು
ಕೊಡುವದರಿಂದ
ಸಶಕ್ತರೂ,
ಚೆಲುವರೂ,
ಸಂತೋಷ ಚಿತ್ತರೂ
ಆಗುವರು

ಐಯರ್‌ಲ್ಯಾಂಡ್ ಮತ್ತು ಭಾರತ

[೯ನೇ ಪುಟದಿಂದ]

ಸುತ್ತಿಲ್ಲ. ಒಡೆಯ ಹಾಗೂ ಸೇವಕರ ಅಂತರ ದಲ್ಲಲ್ಲ ಬದಲು ಸಮಾನತೆಯಿಂದ, ಸಮಾನ ಹಕ್ಕಿನಿಂದ ಎಂದೆಂದಿಗೂ ಇಲ್ಲಿ ಇರುವಂತೆ ನಾವು ಆಹ್ವಾನಿಸುತ್ತೇವೆ. ನಮ್ಮ ರಾಷ್ಟ್ರದಲ್ಲೇ ನಾವಿಂತಹ ಸ್ಥಾನವನ್ನಿನ್ನು ಪಡೆದಿಲ್ಲ. ಇದು ನಮ್ಮ ದುರದೃಷ್ಟ! ನಮ್ಮ ಧ್ಯೇಯಸಾಧನೆಗಾಗಿ ರಕ್ತ ಹರಿಯುವಂತೆ ನಾವು ಯತ್ನಿಸಿಲ್ಲ. ನಮ್ಮ ಅಭಿಮಾನದ ಬಲದಿಂದ ನಾವು ಜಳವಳ ಹೂಡುತ್ತಿದ್ದೇವೆ. ಕ್ರೈಸ್ತ ಧರ್ಮದ ಪ್ರಮುಖ ಸಾಧನವಾದ ಅಹಿಂಸೆಯೇ ನಮ್ಮ ಧ್ಯೇಯ. ನಮ್ಮ ರಾಜಕೀಯ ಹಕ್ಕಿಗಾಗಿ ನಾವು ಬ್ರಿಟಿಷರನ್ನು ಪ್ರಾರ್ಥಿಸುತ್ತೇವೆ, ಕೇಳಿಕೊಳ್ಳುತ್ತೇವೆ, ಬಿನ್ನಹಗಳನ್ನು ಮಾಡುತ್ತಿದ್ದೇವೆ. ಪ್ರತಿಯೊಂದು ವಿಚಾರವನ್ನು ಅದೃಷ್ಟವೆಂದು ತಿಳಿದುಕೊಂಡು ನಮ್ಮ ಕನಸಿನ ನೆನಸಿಗಾಗಿ ನಿಧಾನವಾಗಿ ಸಾಗುತ್ತಿದ್ದೇವೆ. ಅಂದ ಮೇಲೆ ಲಾರ್ಡ್ ಜೆಟ್ಲೆಂಡರ ಆ ಉಪಮಾನಕ್ಕೆ ಸಹಕಾರಿಯಾಗಿ ನಾವು ಯಾವ ರೀತಿಯಲ್ಲಿ ಐಯರ್‌ಲ್ಯಾಂಡಿಗೆ ಸಮನಾಗಿದ್ದೇವೆ ಎಂದಿರಬಹುದೋ!

ಕಳೆದ ಮಹಾ ಯುದ್ಧದಲ್ಲಿ ನಾವು ಬ್ರಿಟನ್ನಿಗೆ ಸೊಡನೆ ಇದ್ದೆವು; ಇಂದೂ ಇದ್ದೇವೆ. ಜನ, ಧನ ಹಾಗೂ ಸಕಲ ಸಹಾಯಗಳನ್ನೆನ್ನು ನಾವು ಕೊಟ್ಟೆವು. ನಾವು ಇತ್ತ ಅಮೂಲ್ಯ ಸಹಾಯಕ್ಕಾಗಿ ರಾಜಕೀಯ ಸವಲತ್ತು ನಮಗೆ ಕೊಡುವ ಭರವಸೆ ಬಂದಿತು. ಹಾಗೆ ಭರವಸೆ ಈಯಲಾದ ಸವಲತ್ತು ಉಗ್ರರೂಪದಿಂದಲೇ ಬಂತು. ಭಾರತೀಯರು ಬೇಸರಗೊಂಡರು. ಮುಂದೆ ಪ್ರಾಂತಿಕ ಸ್ವಾತಂತ್ರ್ಯ ಹಾಗೂ ಅಖಿಲ ಭಾರತ ಫೆಡರೇಶನುಗಳ ಯೋಜನೆ ತಲೆ ಎತ್ತಿತು. ಅಷ್ಟರಲ್ಲೇ ಮತ್ತೊಂದು ಮಹಾಯುದ್ಧವಿಂದು ಆರಂಭವಾಗಿದೆ. ಬ್ರಿಟಷ್ ವಿಜಯಕ್ಕಾಗಿ ನಾವಿಂದು ನಮ್ಮಿಂದಾದ ಸಹಾಯಮಾಡುತ್ತಿದ್ದೇವೆ. ಹಾಗಿದ್ದರೂ "ವಿಷಾದಾಂತ ಪ್ರದರ್ಶನ" ಎಂಬ ಬಹುಮಾನವು ಜವಾಬ್ದಾರಿಯನ್ನರಿತ ಲಾರ್ಡ್ ಜೆಟ್ಲೆಂಡರಂತಹ ರಾಜಕಾರಣಿಗಳಿಂದ ನಮಗೆ ದೊರೆಯುತ್ತಿದೆ. ಭಾರತೀಯರು ಇಂದಿನ ಸಮರದ ಧ್ಯೇಯಕ್ಕಾಗಿ ಈಯುತ್ತಿರುವ ಅಮೂಲ್ಯ ಸಹಕಾರವನ್ನು ಶ್ಲಾಘಿಸುವಾಗ, ಲಾರ್ಡ್ ಜೆಟ್ಲ್ಯಾಂಡರ ಜ್ಞಾನವು ಈ ಸಕಲ ಸಹಾಯವೂ ಅತ್ಯಲ್ಪವೆಂದಿನ್ನಿಸಲು ಯತ್ನಿಸುತ್ತಿದೆ. ಈ ರೀತಿಯ ಅಪಕಾರಕ್ಕೆ ನಾವು ತಲೆಕೊಡೆವಾದರೂ ಇಂತಹದನ್ನು ಮರೆಯಲಾರೆವು. ಮುಂದೆ ಭಾರತ ಸ್ವಾತಂತ್ರ್ಯವನ್ನು ಕೇಳಿದರೆ, ನಿಮ್ಮ ಸಹಕಾರ ಬರಲೇ ಇಲ್ಲವೆಂದು ಉತ್ತರಿಸಲು ಬೇಕಾದ ಆಸ್ತಿವಾರವನ್ನು ಲಾರ್ಡ್ ಜೆಟ್‌ಲ್ಯಾಂಡರು ಇಂದಿನಿಂದಲೇ ತಯಾರಿಸಲು ಆರಂಭಿಸಿದ್ದಾರೆ.

ಯುದ್ಧಾನಂತರ "ವೆಸ್ಟ್‌ಮಿನ್‌ಸ್ಟರ್" ಟ್ರೀಡ್ ಮಾರ್ಕಿನ ಸ್ವಾತಂತ್ರ್ಯದ ವಿಚಾರವಾಗಿ ಯೋಚಿಸಲಾಗುವುದೆಂಬೀ ಭರವಸೆ ನಮಗೆ ಕೊಡಲಾಗಿದೆ. ಬ್ರಿಟನ್ನು ಇಂದಿನ ದುರ್ಘಟನೆಯ ಅಂತ್ಯದಲ್ಲಿ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ಕೊಡದಿರದೆಂದು ನಂಬುಗೆ. ಆದರೆ, ಈ ನಂಬಿಕೆ ಕೆಲವರಿಗೆ ಮಾತ್ರ ಇರಬಹುದು. ಭಾರತದ ಪ್ರಜೆಗಳಲ್ಲಿ ಹೆಚ್ಚಿನವರಿಗೆ ಇಂದಿಗೂ ಬ್ರಿಟನ್ನಿನ ಕುರಿತಾದ ಸಂಶಯವೇ ಇದೆ. ಆದ್ದರಿಂದಲೇ ಹೀಗೆ ಚರ್ಚೆ–ವಿರೋಧಗಳು ಅಂತಹ ಸಂಶಯಗಳಿಗೆ ಬ್ರಿಟಷ್ ರಾಜಕಾರಣಿಗಳೂ, ಬರಹಗಾರರೂ ಕಾರಣರು. ಇ. ಟಿ. ರೇಮಂಡ್ ಎಂಬ ಬ್ರಿಟಷ್ ಲೇಖಕರು ತನ್ನ ಜನತೆಯ ವಿಚಾರವಾಗಿ ಬರೆಯುತ್ತಾ "ಕರ್ತವ್ಯಶಾಲಿಗಳಾಗಿ – ನಾವು ವ್ಯಾಪಾರೀ ಕರಾರುಗಳಿಗೆ ಅದನ್ನು ಪೂರೈಸಲು ನಿಶ್ಚಯಿಸಿ ಹೆಚ್ಚಿನ ಪೇಳೆ ಸಹಿಮಾಡುತ್ತೇವೆ. ಆದರೆ ಯೋಜನೆಯ ಪ್ರೋಮಿಸರಿ ನೋಟುಗಳನ್ನು ಬರೆದು ಸಹಿಹಾಕಿ ಕೊನೆಯ ತನಕವೂ ನಿರಾಕರಿಸುವ ಒಂದು ಹೀನ ಮನೋವೃತ್ತಿ ನಮ್ಮಲ್ಲಿದೆ" ಎಂದಿದ್ದಾರೆ. ಅಂತೆಯೇ ಸರ್ ಜೋನ್‌ಸನ್ ಹಿಕ್ಸ್‌ರವರು ಪಾರ್ಲಿಮೆಂಟಿನಲ್ಲಿ "ಬ್ರಿಟನ್ನು ಪಡ್ಡದ ಶಕ್ತಿಯಿಂದ ಭಾರತವನ್ನು ಆಳಲಿಸುವೆ" ಎಂದು ಸಾರಿದ್ದಾರೆ!

ಇಂತಹ ಉಗ್ರಲೇಖಗಳೂ, ಮಾತುಗಳೂ, ಭಾರತೀಯರಿಗೆ ಹೆಚ್ಚಿನ ಯೋಜನೆಗಳಿಗೆ ಎಡೆಕೊಟ್ಟು ಸಹಾಯಗ್ರಸ್ಥರಾಗುವಂತೆ ಮಾಡುತ್ತಿವೆ ಆದರೂ ಜೀವನದ ಧ್ಯೇಯ ಧರ್ಮವೆಂದರಿತ ನಾವು ನಮ್ಮ ಕರ್ತವ್ಯವನ್ನು ಮಾಡಿದ್ದೇವೆ. "ವಿಷಾದಾತ್ಮಕ ದೃಶ್ಯ"ವಾಗಿ ಕಾಣುವಂತೆ ನಾವೆಂದೂ ಎಡೆಕೊಡಲಾರೆವು. ಜೆಟ್‌ಲ್ಯಾಂಡರ ಜ್ಞಾನ ಸಾಲದ ಈ ನುಡಿಗಳು ಭಾರತಕ್ಕೆ ಬರುವಂತೆ ಮಾಡಿದುದೂ, ಬ್ರಿಟಷ್ ಪ್ರಚಾರಖಾತೆಯ ಹೆಚ್ಚಿನ ಕೆಲಸವೆನ್ನಲೂ ಬೇಕಾಗಿದೆ. ಆದರೂ ನಾವು ಇಂತಹ ನುಡಿಗಳಿಗೆ ಸಿಕ್ಕುಬಿದ್ದು ಕರ್ತವ್ಯವನ್ನು ಮರೆಯಲಾರದಷ್ಟು ವಿಶಾಲಹೃದಯಿಗಳಿದ್ದೇವೆ!

(ಇಂಡಿಯನ್ ಎಕ್ಸ್‌ಪ್ರೆಸ್)

ನಾಜಿ "ಫಿಫ್ತ್ ಕಾಲಮಿ"ನ

ವಿವಿಧ ಆಟಗಳು

ಬೆಲ್ಜಿಯಂ ಹೇಗೆ ನಾಶವಾಯಿತು?

ಜರ್ಮನಿಯು ತನ್ನ ಗೂಢಚಾರರ ಸಹಾಯದಿಂದಲೇ ಯುರೋಪಿನ ವಿವಿಧ ರಾಷ್ಟ್ರಗಳನ್ನು ಗೆದ್ದಿತೆಂದೂ, ಈ ದಳದ ನಾಮಕರಣವೇ "ಫಿಫ್ತ್ ಕೊಲಮ್" ಎಂದೂ ಇದಾಗಲೇ ಪ್ರಕಟವಾಗಿದೆ ಇದೀಗ ಈ ಜರ್ಮನ್ "ಫಿಫ್ತ್‌ಕೊಲಂ" ಮಂದಿ, ಬೆಲ್ಜಿಯಮ್‌ನಲ್ಲಿ ಆಡಿದ ಆಟ ಪ್ರಕಟವಾಗಿದೆ.

ಜರ್ಮನ್ ಕಾಫಿ, ಬೀರ್ ಮುಂತಾದ ಪದಾರ್ಥಗಳ ಜಾಹೀರಾತುಗಳು ನಗರದ ಸಿಕ್ಕಸಿಕ್ಕ ಗೋಡೆಗಳಲ್ಲಿ ಕಂಡು ಬರುತ್ತಿದ್ದುವಂತೆ. ಈ ಜಾಹೀರಾತಿನ "ಪೋಸ್ಟರ್"ಗಳೇ ಬೆಲ್ಜಿಯಮ್‌ನ ಶಕ್ತಿಯನ್ನು ನಾಶಪಡಿಸಲು ಕಾರಣವಾಗಿದೆಯೆಂದು ಹೇಳಲಾಗಿದೆ.

ನಾಜಿ ಗೂಢಚಾರರು, ಯುದ್ಧಪೂರ್ವದಲ್ಲೆ ಪೆರಜೂಟ್‌ಗಳ ಮೂಲಕ ರಾಷ್ಟ್ರದೊಳಗೆ ಇಳಿಯುತ್ತಿದ್ದರಂತೆ ಪಾಸ್‌ಪೋರ್ಟ್ ಇಲ್ಲದೆ ರಾಷ್ಟ್ರಕ್ಕೆ ಬರಲು ಸಾಧ್ಯವಿಲ್ಲದುದರಿಂದಲೂ, ಬೆಲ್ಜಿಯಮ್ ಸರಕಾರ ಪಾಸ್‌ಪೋರ್ಟ್‌ನ್ನು ಸುಲಭವಾಗಿ ಕೊಡದಿದ್ದುದರಿಂದಲೂ ಇವರು ಪೆರಜೂಟ್‌ಗಳ ಮೂಲಕ ನಿತ್ಯದ ಸಾಮಾನ್ಯ ಉಡಿಗೆಯಲ್ಲಿ ದೇಶದೊಳಕ್ಕೆ ಇಳಿಯುತ್ತಿದ್ದರು.

ಹೀಗೆ ಇಳಿದವರು ಮೊದಲೇ ನಿರ್ದಿಷ್ಟರಾದ ಗೂಢಚಾರರೊಡನೆ ಕೂಡಿಕೊಂಡು ಕೆಲಸ ನಡೆಸಬೇಕಾಗಿತ್ತು. ಅಲ್ಲದೆ ಆ ನುಂದಿ ಎಲ್ಲಿರುವರೆಂದು ಇವರು ಇತರರೊಡನೆ ಕೇಳಿದರೆ ಸಂಶಯಕ್ಕೆ ಕಾರಣವಾಗಬಹುದಷ್ಟೆ? ಇದಕ್ಕೆ ತಕ್ಕ ಉಪಾಯ ಜರ್ಮನರಲ್ಲಿತ್ತು!

ಜರ್ಮನ್ ಕಾಫಿಯನ್ನು ವಿಕ್ರಯಿಸುವ ಪ್ರಖ್ಯಾತ ಅಂಗಡಿಯೊಂದು ಬೆಲ್ಜಿಯಮ್‌ನಲ್ಲಿತ್ತು. ಈ ಸಂಸ್ಥೆ ಜಾಹೀರಾತಿನ "ಪೋಸ್ಟರು"ಗಳನ್ನು ದೇಶದ ಮೂಲೆ ಮೂಲೆಗಳಲ್ಲೂ ಅಂಟಿಸಿತ್ತು. ಈ ಪೋಸ್ಟರುಗಳ ಹಿಂಬದಿಗೆ ಕಣ್ಣಿಗೆ ಕಾಣದ ಶಾಯಿಯಲ್ಲಿ ಬಿಡಿಸಿದ ಬೆಲ್ಜಿಯಮ್ ಭೂಪಟದ ಚಿತ್ರವೂ, ಸಲಹೆ ಸೂಚನೆಗಳೂ ಅಡಗಿದ್ದುವು. ಪೆರಜೂಟ್‌ನಿಂದ ಇಳಿದ ಗೂಢಚಾರನ ಮೊದಲ ಕೆಲಸವೆಂದರೆ ಇಂತಹ 'ಜಾಹೀರಾತು'ಗಳನ್ನು ಹುಡುಕಿ, "ಪೋಸ್ಟರ್"ನ್ನು ಕಿತ್ತು ನೀರು ಅಥವಾ ಇತರ ದ್ರವ ಪದಾರ್ಥದಲ್ಲಿ ಅದ್ದಿ ಅದರ ಹಿಂಗಡೆಗೆ ಬರೆಯಲಾದ ವಿಚಾರಗಳನ್ನು ಕಂಡು ಹಿಡಿಯುವುದು.

ಇಂತಹ ಆಟವು ಜರ್ಮನ್ ಸಾಮಗ್ರಿಗಳ ಸಕಲ ಜಾಹೀರಾತುಗಳಲ್ಲೂ ನಡೆಯುತ್ತಿತ್ತು. ಪೆರಜೂಟ್ ಮಂದಿ, ತಾವು ಇಳಿದೊಡನೆ ಮೊದಲು ತಮಗೆ ಕಂಡು ಬಂದ ಹೊಟೇಲಿಗೆ ತೆರಳಿ, ಅಲ್ಲಿ ಕಾಫಿ ಅಥವಾ ಇತರ ವಸ್ತುಗಳ ಜಾಹೀರಾತು ಇದೆಯೇ ಎಂದು ನೋಡುತಿದ್ದರು. ಹಾಗೆ ಇಲ್ಲವೆಂದಾದರೆ ಮುಂದಿನ ಹೊಟೇಲಿಗೆ ಹಾಗೂ ಅಂತಹ ಜಾಹೀರಾತು ಸಿಗುವ ಹೊಟೇಲಿಗೆ ತೆರಳಿ, ತಮಗೆ ಬೇಕಾದ ಸಲಹೆಗಳನ್ನು ಪಡೆಯುತ್ತಿದ್ದರು.

ಇನ್ನೊಂದು ವಿಚಾರವೆಂದರೆ ಬೆಲ್ಜಿಯಮಿಗೆ ದೂರದೃಷ್ಟಿ ಇಲ್ಲದೆ ಇದ್ದುದು. ಸೈಕಲ್ ಓಟದ ಪಂದ್ಯಾಟವೆಂದರೆ ಬೆಲ್ಜಿಯಮ್ ಜನರಿಗೆ ತುಂಬಾ ಮೆಚ್ಚು. ಯುದ್ಧಪೂರ್ವದಲ್ಲಿ ಜರುಗಿದ ಪಂದ್ಯಾಟದ ವೇಳೆ, ರಕ್ಷಣಾ ಪ್ರದೇಶದ ಬಳಿಯಲ್ಲೂ ಸೈಕಲುಗಳು ಹೋಗಲು ಎಡೆಕೊಟ್ಟರು. ಹೀಗೆ ಪಂದ್ಯ ಸಾಗುವಾಗ ಅವರ ಹಿಂದೆ ಅವರನ್ನು ತರ ಬೇತಿಗೊಳಿಸಿದವರು ಕಾರಿನಲ್ಲಿ ಹೋಗುವುದು ರೂಢಿ. ಅಂತೆಯೇ ಇಬ್ಬರು ಜರ್ಮನರು ಹೋಗಿದ್ದರು. ಅವರು ರಕ್ಷಣಾ ವಿಚಾರದ ಸಕಲ ಫೋಟೋವನ್ನು ತೆಗೆದಿದ್ದರು. ಈ ವಿಚಾರ ತಿಳಿದು ಬಂದುದು ಯುದ್ಧಾರಂಭದ ಬಳಿಕ.

ಇದಲ್ಲದೆ, ಫ್ರೆಂಚರ ಕಡು ವಿರೋಧಿಗಳು ಬೆಲ್ಜಿಯಮ್‌ನಲ್ಲಿ ಅನೇಕರು ವಾಸವಾಗಿದ್ದರು. ಇಂತವರನ್ನು ಜರ್ಮನ್ ಗೂಢಚಾರರಿಗೆ ಎಡೆಕೊಟ್ಟರು.

ಅಂತೂ ಬೆಲ್ಜಿಯಮ್ ಇತರ ರಾಷ್ಟ್ರಗಳಂತೆ ಜರ್ಮನ್ ಗೂಢಚಾರರ ಮರೆ, ಮೋಸ, ಕುತಂತ್ರಗಳಿಂದ ನಾಶವಾಯಿತು. ಬ್ರಿಟಷರು ತಮ್ಮ ಗೂಢಚಾರರನ್ನು ಭಾರತದಲ್ಲಿ ತುಂಬುವದಕ್ಕಿಂತ ಜರ್ಮನಿಗೆ ಕಳುಹಿದ್ದರೆ ನಾಜಿಗಳ ಶಕ್ತಿ ಇಂದು ಏರುತ್ತಿರಲಿಲ್ಲ.

ದೊಬ್ರುಜಾ

೧೯೧೩ರಲ್ಲಿ ನಡೆದ ಎರಡನೇ ಬಾಲ್ಕನ್ ಯುದ್ಧಕಾಲದಲ್ಲಿ ಬಲ್ಗೇರಿಯದಿಂದ ಕಿತ್ತುಕೊಳ್ಳಲ್ಪಟ್ಟ ಇಂದಿನ ರುಮೇನಿಯದ ಆಗ್ನೇಯ ಭಾಗ. ೧೯೧೮ರಲ್ಲಿ ನಡೆದ ಬುಕರೆಸ್ಟ್ ಶಾಂತಿ ಒಪ್ಪಂದದ ಪ್ರಕಾರ ಈ ಪ್ರಾಂತ್ಯ ಬಲ್ಗೇರಿಯಕ್ಕೆ ಕೊಡಲ್ಪಟ್ಟರೂ ೧೯೧೯ರ ನೋಲೀ ಒಪ್ಪಂದದ ಪ್ರಕಾರ ಇದು ಪುನಃ ರುಮೇನಿಯಕ್ಕೆ ದೊರೆಯಿತು. ಈ ಪ್ರದೇಶವು ಪ್ರಾಮುಖ್ಯವಾದುದೆಂದು ತಿಳಿದು ಬಂದಿದೆ. ಇಲ್ಲಿ ರುಮೇನಿಯವು ರುಮೇನಿಯನರ ಸಂಖ್ಯೆ ಹೆಚ್ಚೆಂದೂ, ಬಲ್ಗೇರಿಯವು ಬಲ್ಗೇರಿಯನರ ಸಂಖ್ಯೆ ಅಧಿಕವೆಂದೂ ಸಾರುತ್ತಿವೆ. ಇದೀಗ ರುಮೇನಿಯವು ಜರ್ಮನಿಯ ಕಡೆಗೆ ಬಾಗಿರುವದರಿಂದಲೂ, ರಷ್ಯಕ್ಕೆ ಕಪ್ಪು ಸಮುದ್ರದ ಕರಾವಳಿ ತನ್ನ ಮಿತ್ರರ ಕೈಯಲ್ಲೇ ಇರಬೇಕಾದ ಅಗತ್ಯ ವಿದ್ದು, ಈ ಪ್ರಾಂತ್ಯ ಕಪ್ಪು ಸಮುದ್ರದ ಕರಾವಳಿಯಲ್ಲಿರುವದರಿಂದಲೂ, ರಷ್ಯದ ಸಹಾಯದಿಂದ ಬಲ್ಗೇರಿಯ ಈ ಪ್ರಾಂತ್ಯವನ್ನು ಹಿಂದಕ್ಕೆ ಕೇಳಿದೆ!

ಕೊಳಕಾದ ಕೈಗಳಿಂದ ಅಪಾಯವುಂಟು. ಮಕ್ಕಳಿಗೆ ಈ ಆರೋಗ್ಯವರ್ಧಕ ತಿಯನ್ನು ಕಲಿಸಿರಿ—ಕ್ರಿಮಿನಾಶಕ ಲೈಫ್‌ಬಾಯ್ ಸೋಪಿನಿಂದ ಮೈ ತೊಳೆಯಲಿ.

ಕ್ರಿಮಿಗಳು ಕಠಿಣ ಕಾಯಿಲೆಗಳಿಗೆ ಕಾರಣವಾಗುವವೆಂದೂ, ಕೊಳೆ ಮತ್ತು ದೂಳು ಈ ಕ್ರಿಮಿಗಳಿಗೆ ತವರ್ಮನೆಗಳೆಂದೂ ಪ್ರತಿಯೊಬ್ಬನಿಗೂ ತಿಳಿದಿರುವುದು. ಆದರೆ ನಿಮ್ಮ ಮಕ್ಕಳು ಆಟವಾಡಿ, ಕೊಳೆಯಿಂದ ಕೂಡಿ ಮನೆಗೆ ಬರುವಾಗ, ಅವರನ್ನು ಗದರಿಸಬೇಡಿರಿ.

ಅದಕ್ಕೆ ಬದಲಾಗಿ ಅವರಿಗೆ ಲೈಫ್‌ಬಾಯ್ ಸೋಪಿನ ಸುಲಭವಾದ ಈ ಆರೋಗ್ಯವರ್ಧಕ ತಿಯನ್ನು ಕಲಿಸಿರಿ. ಅವರು ನಿರ್ಮಲರಾಗಿಯೂ ಸುರಕ್ಷಿತರಾಗಿಯೂ ಇರುವಂತೆ, ಯಾವಾಗಲೂ ಲೈಫ್‌ಬಾಯ್ ಸೋಪಿನಿಂದ ಮೈತೊಳೆದು ಕೊಳ್ಳುವಂತೆ ಹೇಳಿರಿ. ಲೈಫ್‌ಬಾಯ್ ಸೋಪಿನಲ್ಲಿ ಕ್ರಿಮಿನಾಶಕ ಮತ್ತು ಆರೋಗ್ಯದಾಯಕ ಗುಣಗಳಾದ ವಿಶೇಷಗುಣವಿದೆ. ಅದರಿಂದ ಮೈ ತೊಳೆದರೆ ಕೊಳೆಯೊಂದಿಗೆ ಕ್ರಿಮಿಗಳೂ ನಾಶವಾಗುವವು. ನೀವೂ ಈ ವಿಶೇಷವಾದ ಆರೋಗ್ಯ ಸೋಪಿನಿಂದ ನಿಮ್ಮ ಕೈಗಳನ್ನು ತೊಳೆದುಕೊಂಡು ಕ್ರಿಮಿಗಳ ಅಪಾಯದಿಂದ ತಪ್ಪಿಕೊಳ್ಳಿರಿ.



ಲೈಫ್ ಬಾಯ್ ಸೋಪಿನಲ್ಲಿ
ಆರೋಗ್ಯಕರವಾದ ವಿಶೇಷಗುಣವೊಂದಿದೆ.

L. 14-169 KN LEVER BROTHERS (INDIA) LIMITED

50 ವರ್ಷಗಳಿಂದ ಜಗತ್ಪ್ರಸಿದ್ಧ
ಮದನಮಂಜರಿ
ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತು ವಿಕಾರ ಮೊದಲಾದವುಗಳನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ. ಕ್ರಯ: ಡಬ್ಬಿ 1ಕ್ಕೆ 1 ರೂ.

ರಮಣ ವಿಲಾಸಿನೀ
ಕಾಮಶಕ್ತಿ ಹೆಚ್ಚಿಸಿ ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡುವ ನಿರ್ಬಾಧಿರ ಔಷಧ. ಕ್ರಯ: ಡಬ್ಬಿ 1ಕ್ಕೆ 1 ರೂ.

ಮದನಮಂಜರಿ ಫಾರ್ಮಸಿ,
184, ಜೈನಾ ಬಜಾರ್, ಮದ್ರಾಸ್.

ಇವರೂ ಸಿದ್ಧರೇ.

ಬ್ರಿಟಿಷ್ ಸಾಮ್ರಾಜ್ಯದ ಇತರರಂತೆ ಆಸ್ಟ್ರೇಲಿಯವೂ ಸಿದ್ಧವಾಗಿದೆ. ಸೊಕ್ಕಿದ ವೈರಿ ವಿಮಾನಗಳಿಗಿವರು ಉತ್ತರವೀಯಲು ಸಿದ್ಧರೇ.

ಬ್ರಿಟನ್ನಿನ ಭಾಗ್ಯವಿಧಾತ ಡಿ'ವೆಲೆರಾ

ಐಯರ್‌ಲ್ಯಾಂಡನ್ನು ಒಂದುಗೂಡಿಸಲೆಳಸುವ ಸ್ವಾತಂತ್ರ್ಯವೀರ ಜರ್ಮನರು ಬ್ರಿಟನ್ನಿಗೆ ಬರದಂತೆ ತಡೆಯಬಲ್ಲ ಸರ್ವಶಕ್ತ ಈತನ ಜೀವನದ ಮೇಲ್ಕಿ

ಇಂದು ಬ್ರಿಟನ್ನಿನ ಪರಿಸ್ಥಿತಿ ಚಿಂತಾಜನಕವಾಗಿದೆ. ಬಿಸಿ ತುಪ್ಪಕ್ಕೆ ಬಾಯೊಡ್ಡಿದವನಂತಾಗಿದೆ. ತನ್ನ ರಾಜಕಾರಣದ ಪರಿಣಾಮವಾಗಿ ಸಾಮ್ರಾಜ್ಯದ ವಿವಿಧ ಪ್ರಾಂತ್ಯಗಳನ್ನು ಸತ್ವಹೀನವಾಗಿ ಮಾರ್ಪಡಿಸಿದ್ದರೂ, ಅವೆಲ್ಲವೂ ಇಂದು ಬೂದಿ ಮುಚ್ಚಿದ ಕೆಂಡಗಳಾಗಿವೆ. ಭಾರತಕ್ಕೆ ಸ್ವಾತಂತ್ರ್ಯವನ್ನಿತ್ತರೆ ಮುಂದೆ ತನ್ನ ಬಾಳುವೆಗೆ ತೊಡಕು ತರಬಹುದು, ಭಾರತ ತನ್ನ ಬೆಂಬಲಕ್ಕೆ ನಿಲ್ಲುವ ನಂಬುಗೆ ಅಲ್ಪ ಎಂಬುದರಿಂದ, ತನ್ನ ಪರಿಸ್ಥಿತಿ ಹೇಗೆ ಇದ್ದರೂ ಭಾರತಕ್ಕೆ ಸ್ವಾತಂತ್ರ್ಯವನ್ನೀಯಲು ಅದಕ್ಕೆ ಸಾಧ್ಯವಿಲ್ಲವಾಗಿದೆ. ಇನ್ನೊಂದೆಡೆಯಿಂದ ನೋಡಿದರೆ, ಬ್ರಿಟನ್ನಿನ ಹಿಂಗಡೆಯಲ್ಲೇ ಇಂದದಕ್ಕೆ ಅಹಿತರು ಇದ್ದಾರೆ. ಐಯರ್‌ಲ್ಯಾಂಡನ್ನು ಇಬ್ಭಾಗನಾಡಿ, ಒಂದು ಅಂಶವನ್ನು ತನ್ನ ಅಂಕೆಯಲ್ಲಿರಿಸಿಕೊಂಡು, ಇನ್ನೊಂದಕ್ಕೆ ಸ್ವಾತಂತ್ರ್ಯವಿತ್ತುದರಿಂದ, ಐಯರ್‌ಲ್ಯಾಂಡಿನ ಮಂದಿ ಸಿಟ್ಟಗೆದ್ದಿದ್ದಾರೆ. ಇಡೀ ಪ್ರಾಂತ್ಯಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಸಾರಿದ್ದಾರೆ. ಅಷ್ಟೇ ಅಲ್ಲದೆ ಇಂದು, ತಮ್ಮ ಪ್ರಾಂತ್ಯದ ಸ್ವಾತಂತ್ರ್ಯ ಹರಣವಾಗುವದಿದ್ದರೆ ಅದನ್ನು ತಡೆಯುವೆವಲ್ಲದೆ; ಬ್ರಿಟನ್ನಿನ ಜೊತೆಗೆ ಸೇರಬೇಕಾದರೆ ಐಯರ್‌ಲ್ಯಾಂಡ್ ಒಂದುಗೂಡಿಸಲ್ಪಡಬೇಕು ಎಂದಿದ್ದಾರೆ! ಈ ರೀತಿ ಬ್ರಿಟನ್ನನ್ನು ಉಭಯ ಸಂಕಟದಲ್ಲಿ ಹಾಕಿದ ಆ ಸ್ವತಂತ್ರ್ಯ ಪ್ರಿಯನಾದ ಐಯರ್‌ಲ್ಯಾಂಡಿನ ನಾಯಕನಾದ ಡಿ'ವೆಲರಾನ ಜೀವನವೇನು? ಅವನು ಸ್ವಾತಂತ್ರ್ಯಕ್ಕಾಗಿ ನಡೆಸಿದ ಸಾಹಸಗಳಾವುವು?

ಸ್ಪೆನಿಶ್ ತಂದೆ ಹಾಗೂ ಐರಿಷ್ ತಾಯಿಯಲ್ಲಿ ಎಡ್ವರ್ಡ್ ಡಿ'ವೆಲಾರಾ ಅಮೇರಿಕೆಯ ನ್ಯೂಯಾರ್ಕ್ ನಗರದಲ್ಲಿ ೧೮೮೨ರ ಅಕ್ಟೋಬರ ೧೪ರಂದು ಜನಿಸಿದ. ಮೂರನೇ ವರ್ಷ ಪ್ರಾಯದಲ್ಲಿ ಐಯರ್‌ಲ್ಯಾಂಡಿಗೆ ಬಂದು, ಸಂಬಂಧಿಕರ ಆರೈಕೆಯಲ್ಲಿ ಬೆಳೆದು, ಡಬ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಗಣಿತದಲ್ಲಿ ಬಿ.ಎ.ಯನ್ನು ೧೯೦೪ರಲ್ಲಿ ಪಾಸುಮಾಡಿದ ಮುಂದೆ ಉಪಾಧ್ಯಾಯನಾಗಿ, ಐಯರ್‌ಲ್ಯಾಂಡಿನ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿ, ಐರಿಷ್ ಭಾಷೆಯನ್ನು ತಾನು ಕಲಿತು ಇತರರಿಗೆ ಕಲಿಸಿದ ೧೯೧೬ರ ಈಸ್ಟರ್ ನಲ್ಲಿ ನಡೆದ ದಂಗೆಯಲ್ಲಿ ಒಂದು ಸೇನೆಯ ನಾಯಕತ್ವ ವಹಿಸಿ, ಸೋಲಿಸಲ್ಪಟ್ಟು ಸೆರೆ ಸಿಕ್ಕಿದ. ಮರಣದಂಡನೆಗೆ ಗುರಿಪಡಿಸಲ್ಪಟ್ಟರೂ ಆ ಶಿಕ್ಷೆ ಆಜೀವ ಸಜೆಗೆ ಇಳಿಸಲ್ಪಟ್ಟಿತು. ಆದರೆ, ೧೯೧೭ರಲ್ಲಿ ಇವನನ್ನು ಕ್ಷಮಿಸಿ ಬಿಡುಗಡೆಮಾಡಿದರು.

ಸೆರೆಯಿಂದ ಬಿಡುಗಡೆಮಾಡಲ್ಪಟ್ಟೊಡನೆಯೇ ಐಯರ್‌ಲ್ಯಾಂಡಿನ ಸಿನ್ ಫೀನ್ ಜಳವಳಿಯಲ್ಲಿ ಭಾಗವಹಿಸಿ ಆ ದಳದ ಅಧ್ಯಕ್ಷನಾದ. ಪರಿಣಾಮವಾಗಿ ಸೆರೆಹಿಡಿಯಲ್ಪಟ್ಟ. ೧೯೧೯ರಲ್ಲಿ ಅಮೇರಿಕೆಗೆ ತೆರಳಿ, ಐಯರ್‌ಲ್ಯಾಂಡಿನ ಸ್ವಾತಂತ್ರ್ಯ ಸಮರದ ವಿಚಾರವಾಗಿ ಜಳವಳ ನಡೆಸಿ, ಅಮೇರಿಕನರ ಸೌಹಾರ್ದ ಗಳಿಸಿ ೧೯೨೦ರಲ್ಲಿ ಹಿಂತಿರುಗಿದ. ಐರಿಷ್ ಬಂಡಾಯದ ಕಾಲ ತಲೆತಪ್ಪಿಸಿಕೊಂಡಿದ್ದು, ಬಂಡಾಯದ ಸೂತ್ರ ಚಾಲನೆಯನ್ನು ನಡೆಸಿದ

೧೯೨೧ರಲ್ಲಿ ಆಂಗ್ಲ—ಐಯರ್‌ಲ್ಯಾಂಡ್ ಸಂಧಾನ ವಿಚಾರ ನಡೆಯಿತು. ಡಿ'ವೆಲರಾ—ಸಂಪೂರ್ಣ ಸ್ವಾತಂತ್ರ್ಯದ ಹೊರತು ಬೇರೆ ಬೇಕಿಲ್ಲ ಎಂದ. ಐಯರ್‌ಲ್ಯಾಂಡನ್ನು "ಡೊಮಿನಿಯನ್" ಆಗಿ ಮಾರ್ಪಡಿಸಿದ್ದ ೧೯೨೧ರ ಒಪ್ಪಂದವನ್ನು ಡಿ'ವೆಲರಾ ಒಪ್ಪದೆ, ಸೈನಿಕರ ಬಂಡಾಯವಾಗುವಂತೆ ಮಾಡಿ ಎರಡನೆಯ ಬಾರಿಗೆ ಐರಿಶ್ ಜನರು ಬಂಡಾಯ ಹೂಡಿದ ವೇಳೆ ಅಡಗಿದ್ದು ಕೆಲಸ ಸಾಗಿಸಿದ. ೧೯೨೩ರಲ್ಲಿ ಸೆರೆಹಿಡಿಯಲ್ಪಟ್ಟು ೧೯೨೪ರಲ್ಲಿ ಬಿಡುಗಡೆ ಮಾಡಲ್ಪಟ್ಟ. ರಾಷ್ಟ್ರದ ಸಂಪೂರ್ಣ ಸ್ವಾತಂತ್ರ್ಯವನ್ನಾತಿಸುವ ರಿಪಬ್ಲಿಕನರ ನಾಯಕನಾಗಿ ಕೆಲಸಮಾಡಿ ೧೯೨೫ರಲ್ಲಿ ಪೂರ್ಣ ಸ್ವಾತಂತ್ರ್ಯವನ್ನೇ ಧ್ಯೇಯವಾಗಿಟ್ಟುಕೊಂಡ. ಪ್ರಕೃತದ ಸರಕಾರದೊಡನೆ ಸಹಕರಿಸಲು ಯೋಚಿಸಿದ.

ಪರಿಣಾಮವಾಗಿ ೧೯೨೭ರಲ್ಲಿ ಡಿ'ವೆಲರನೇ ಅಧ್ಯಕ್ಷನಾದ. ದಕ್ಷಿಣ ಐಯರ್‌ಲ್ಯಾಂಡಿನ ಸಂಬಂಧವನ್ನು ಬ್ರಿಟನ್ನಿನಿಂದ ದೂರಮಾಡಿದ.

ಡಿ'ವೆಲರಾ ಸೋಶಿಯಲಿಸ್ಟ್ ಅಲ್ಲವಾದರೂ, ಕೆಥೋಲಿಕ್ ಮತದವನಾದರೂ, ರಾಷ್ಟ್ರದ ಸ್ವಾತಂತ್ರ್ಯವನ್ನೂ, ಎಡಪಕ್ಷವನ್ನೂ ಸಮರ್ಥಿಸುವನು. ಐಯರ್‌ಲ್ಯಾಂಡಿನ ಒಂದುಗೂಡುವಿಕೆ ಈತನ ಅಭಿಲಾಷೆ. ಪ್ರಕೃತದ ಯುದ್ಧಾರಂಭದಿಂದಲೂ ತಾಟಸ್ಥ್ಯ ಧೋರಣೆಯನ್ನು ವಹಿಸಿದ್ದಾನೆ.

ಏನು, ನಿಮ್ಮ ಹುಡುಗನು ದೃಢಕಾಯನೆ?

ಈ ಕೆಳಗಿನ ಐದು ಆರೋಗ್ಯ ಚಿಹ್ನೆಗಳನ್ನು ಗಮನಿಸಿರಿ.

ಮಗುವಿನ ಬೆಳವಣಿಗೆಯು ಸರಿಯಾಗಿದೆಯೇ ಇಲ್ಲವೇ ಎಂಬುವುದನ್ನು ತಿಳಿಯಲು ವೈದ್ಯನು ಸದಾ ಈ ಐದು ಚಿಹ್ನೆಗಳನ್ನು ಗಮನಿಸುವನು. ಈ ಪೈಕಿ ಯಾವುದಾದರೊಂದು ಲೋಪವಿದ್ದಲ್ಲಿ ನಿಮ್ಮ ಮಗುವಿಗೆ ದೇಹಾಭಿವೃದ್ಧಿ ಮಾಡತಕ್ಕ ಟಾನಿಕ್ ಅತ್ಯಾವಶ್ಯಕ.



ದುರ್ಬಲವಾದ ಮಗುವಿಗೆ ಅಂಟು ರೋಗಗಳನ್ನು ಎದುರಿಸಲು ಶಕ್ತಿಸಾಲದು. ದೃಢಗಾತ್ರರಾದ ಮಕ್ಕಳಿಗೆ ಕೊಡುವಂತೆ ಸರಿಯಾದ ಆಹಾರ ಮತ್ತು ಆದರಣೆಯಿದ್ದಾಗ್ಗೂ ಅವನಿಗೆ ಮನಶ್ಶಾಂತಿಯಿರಲಾರದು. ಶಾಲೆಯಲ್ಲಿ ಪಾಠಗಳ ಮೇಲೆ ದೃಷ್ಟಿಯಿರದು. ಮನೆಯಲ್ಲಿ ಸಹ ಅವನನ್ನು ಕ್ರಮಪಡಿಸಲು ಅಸಾಧ್ಯ. ಇದಕ್ಕಾಗಿ ಅವನಿಗೆ ಅಗತ್ಯವಾಗಿ ಬೇಕಾದದ್ದು—

೪ ಮತ್ತು ೧೬ ಔನ್ಸುಗಳ ಸೀಸಾಗಳಲ್ಲಿ ಮಾರಲ್ಪಡುತ್ತದೆ. ದೊಡ್ಡ ಸೀಸಾದಿಂದ ಲಾಭ ಹೆಚ್ಚು.

ರಖಂ ವ್ಯಾಪಾರಿಗಳು:—

ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್, (ಇಂಡಿಯಾ) ಲಿಮಿಟೆಡ್

ಕಲ್ಕತ್ತಾ . ಬೊಂಬಾಯಿ . ಮದ್ರಾಸ್ . ಕರಾಚಿ . ರಂಗೂನ್ . ಕೊಲಂಬೊ . ಕಾನ್ಪುರ್ . ಪಾಟ್ನಾ . ಅಹಮ್ಮದಾಬಾದ್ . ಕೊಚ್ಚಿನ್ . ಕಾಲಿಕಟ್ . ವಿಶಾಖಪಟ್ಟಣ . ಲಾಹೋರ್ . ಅಮೃತಸರ್

ಎಲುಬಿನ ಬೆಳವಣಿಗೆ: ಒಂದು ಫಲ ಚಂಚ ಸ್ಕಾಟ್ಸ್ ಎರಡು ಸಿಂಟು (೨೪ ಔನ್ಸು) ತಾಜಾ ಹಾಲಿಗೆ ಸಮಾನ.
ದೇಸ ಬೆಳವಣಿಗೆ: ಒಂದು ಫಲ ಚಂಚ ಸ್ಕಾಟ್ಸ್ ಎರಡು ಔನ್ಸು ಬೆಣ್ಣೆ ಅಥವಾ ತುಪ್ಪಕ್ಕೆ ಸಮಾನ.

'ಸ್ಕಾಟ್'ರವರ ಕಾಡ್ ಲಿವರ್ ಆಯಿಲ್ ಎಮಲ್ಷನ್ ಈ ಐದು ಆರೋಗ್ಯ ಲಕ್ಷಣಗಳನ್ನು ವೃದ್ಧಿಪಡಿಸುವುದು. ಹೇಗೆಂದರೆ:

೧. ಹಲ್ಲುಗಳನ್ನು ಬಲಪಡಿಸಿ ಹುಳುಕಾಗದಂತೆ ರಕ್ಷಿಸುವುದು.
೨. ಕೆಮ್ಮು ಮತ್ತು ನೆಗಡಿ ಬಾರದಂತೆ ಎದೆಯನ್ನು ಮತ್ತು ಶ್ವಾಸಕೋಶಗಳನ್ನು ಬಲಪಡಿಸುವುದು.
೩. ದೃಢವಾದ ಎಲುಬುಗಳನ್ನು, ಮಾಂಸಖಂಡಗಳನ್ನು ಬೆಳೆಯಿಸುವುದು.

ಸ್ಕಾಟ್ಸ್ ಎಮಲ್ಷನ್ ಪೂರ್ತಿಯಾಗಿ ತೀವ್ರವಾಗಿ ಜೀರ್ಣಿಸುವುದು. ಅಲ್ಲದೆ, ನಿಮ್ಮ ಮಗುವು ತಿಂದ ಇತರ ಆಹಾರದಲ್ಲಿನ ಸತ್ವವನ್ನು ಹೆಚ್ಚಾಗಿ ಸ್ವೀಕರಿಸುವಂತೆ ಮಾಡುವುದು. ಕೆನೆಯಂತೆ ಇರುವ ಅದರ ರುಚಿಯನ್ನು ಮಕ್ಕಳು ಬಹಳ ಪ್ರೀತಿಸುವರು.

SCOTT'S
Emulsion

ಸ್ಕಾಟ್ಸ್ ಎಮಲ್ಷನ್ ಜೀವಾಂತರ ಶಕ್ತಿಯನ್ನುಂಟುಮಾಡುವುದು

Jaya Laxmi Bank, Ltd., Mangalore.
ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ಮಂಗಳೂರು.
(ಸ್ಥಾಪಿಸಲ್ಪಟ್ಟದ್ದು—1923)

ಶಾಖೆಗಳು: ಪುತ್ತೂರು, ಕಾಸರಗೋಡು, ಚಿಕ್ಕಮಗಳೂರು, ಮೂಡಿಗೆರೆ ಮತ್ತು ಕಣ್ಣಾನೂರು.

ಅಧಿಕೃತ ಮೂಲಧನ . . .	ರೂ. 1,00,000
ಅರ್ಪಿಸಲಾದ ಮತ್ತು ಚೆಂದಾಹಾಕಿದ ಮೂಲಧನ	ರೂ. 1,00,000
ತೆತ್ತ ಮೂಲಧನ	ರೂ. 92,705
ಕ್ಷೇಮ ಮತ್ತಿತರ ನಿಧಿಗಳು . .	ರೂ. 1,10,979

ಕಾಯಂ ಠೇವಣಾತಿಗಳು.

3 ತಿಂಗಳ ಠೇವಣಾತಿಗಳಿಗೆ—ಸೇ. 3%; 6 ತಿಂಗಳ ಠೇವಣಾತಿಗಳಿಗೆ—ಸೇ. 3½%; 12 ತಿಂಗಳ ಠೇವಣಾತಿಗಳಿಗೆ—4%.

ಮಾಸಿಕ, ಸೇವಿಂಗ್ಸ್ ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ಮೇಲೆ, ಸಾಲವನ್ನು ಕೊಡುವುದು.

M. Ganesh Rao,
ಸೆಕ್ರೆಟರಿ.

ಮೈಸೂರು

ಸಾಬೂನು

ಇಪ್ಪತ್ತು ವರ್ಷದ ತಯಾರಿಕೆ ಅನುಭವ

ನೈಪುಣ್ಯವು

ಒಳ್ಳೆ

ಅಭ್ಯಾಸದ ಪರಿಣಾಮ

ನಿಮ್ಮ ಮೈ ಮತ್ತು ಬಟ್ಟೆಗಳನ್ನು ಶುಚಿ ಮಾಡಲು

ಮೈಸೂರು

ಸಾಬೂನುಗಳು ಕಾದಿವೆ.

ಮೈಸೂರು ಸಾಬೂನುಗಳು ಸರಕಾರದ ಆಡಳಿತದಲ್ಲಿ ಇಪ್ಪತ್ತು ವರ್ಷಗಳಿಂದಲೂ ಬೆಂಗಳೂರಿನಲ್ಲೇ ತಯಾರಾಗುತ್ತಿವೆ.

ಮೈಸೂರು

ಸ್ಯಾಂಡಲ್ ಸೋಪ್

ವೆಂಕಟಗಿರಿ ಮಹಾತ್ಮೆ

೫೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖಚಿತವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ.

ಮುದ್ದಾದ ಮುಬ್ಬಣ. ಬೆಲೆ ರೂಪಾಯಿ ೧—೮—೦. ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುನಿತ್ಯದ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಆಕ್ಟವ ಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1-8-0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಸಾವಕಾರ

ಶ್ರೀನಿವಾಸ ರಂಗ ಪೈ

ವಜ್ರಗಳು

ಸಾವಕಾರ ಮಹಾಲ್,

ಮಂಗಳೂರು.

ಸರ್ವಾಧಿಕಾರಿಗಳ ಕಣ್ಣು ಯುಗೋಸ್ಲಾವ್ಯದೆಡೆ ತಿರುಗಿದೆ

ಹಿಟ್ಲರ್‌ನಿಗೆ ಈ ರಾಷ್ಟ್ರವೇಕೆ ಬೇಕು?

ಯುಗೋಸ್ಲಾವ್ಯದ ಪ್ರಕೃತಿ ಹಾಗೂ ಖನಿಜ ಸಂಪತ್ತಿ

ಪಶ್ಚಿಮ ಯುರೋಪಿನ ಕಡೆಗೆ ಸಾಗುತ್ತಿರುವ ಹಿಟ್ಲರನ ಮುಂದಿನ ಧ್ಯೇಯವೇನು? ಫ್ರಾನ್ಸನ್ನು ನುಂಗಿದ ಈತನ ಕಣ್ಣು ಬಾಲ್ಕನಿನ ಕಡೆಗೂ ಅದೇಕೆ ತಿರುಗಿದೆ? ರಷ್ಯದ ಜಲನ ವಲನಗಳನ್ನು ಕಂಡು ಮನನೊಂದರೂ ಅದೇಕೆ ಆತ ಕಾದಾಟಕ್ಕೆ ಮುಂದಾಗಿಲ್ಲ?—ಎಂಬತ್ಯಾದಿ ಹಲವಾರು ಸಮಸ್ಯೆಗಳ ನಡುವೆ, ಹಿಟ್ಲರನಿಗೆ ಆಥವಾ ಮುಸಲಿನಿಗೆ ಸುಮ್ಮನೆ ಕುಳಿತ ಯುಗೋಸ್ಲಾವಿಯದ ಮೇಲೆ ಅದೇಕೆ ಕಣ್ಣು ಎಂಬುದು ಮಹತ್ತಾದ ಸಮಸ್ಯೆಯಾಗಿ ಕಾಣದೆ ಇರದು.

ಯುಗೋಸ್ಲಾವಿಯವು ತನ್ನ ತಾಟಸ್ಥ್ಯದ ಮಂತ್ರವನ್ನು ಜಪಿಸುತ್ತಿದ್ದಂತೆಯೇ, ಹಿಟ್ಲರನ ತಾಳಕ್ಕೆ ಸರಿಯಾಗಿ ಕುಣಿಯುತ್ತಲೂ, ಸುಮ್ಮನಾಗುತ್ತಲೂ ಇದೆ. ಅಂತೆಯೇ ಬಾಲ್ಕನ್ ಹಾಗೂ ಉಕ್ರೈನ್‌ಗಳ ಕಡೆಗೆ ತಿರುಗಿದ್ದ ನಾಜಿಗಳ ದೃಷ್ಟಿ, ಇದೀಗ ಹಂಗೇರಿ ಹಾಗೂ ಪ್ರಾಮುಖ್ಯವಾಗಿ ಯುಗೋಸ್ಲಾವ್ಯ—ಇವುಗಳ ಮೇಲೆ ಅದೇಕೆ ಬಿದ್ದಿದೆ? ಈ ವಿಚಾರವನ್ನು ವಿವೇಚಿಸುವಾಗ ಯುಗೋಸ್ಲಾವ್ಯದ ಸಂಪತ್ತಿಯನ್ನೂ, ಇದನ್ನು ನುಂಗುವದರಿಂದ ಜರ್ಮನಿಗೆ ಆಗಬಹುದಾದ ಲಾಭವನ್ನೂ ತಿಳಿಯುವುದು ಅಗತ್ಯ

ಇತ್ತೀಚಿಗೆ ನಡೆದ ಶೋಧದಿಂದ ಯುರೋಪಿನ ರಾಷ್ಟ್ರಗಳಲ್ಲಿ ಯುಗೋಸ್ಲಾವಿಯಕ್ಕೆ ಸಮನಾದ ಖನಿಜ ಸಂಪತ್ತಿನ ರಾಷ್ಟ್ರ ಬೇರೊಂದಿಲ್ಲವೆಂದು ತಿಳಿದುಬಂದಿದೆ. ಅಂದ ಮೇಲೆ ಹಸಿವಿನಿಂದ ಬೆಂಡಾದ ನಾಯಿ ರೊಟ್ಟಿಗೆ ಹಾತೊರೆಯುವಂತೆ ಹಿಟ್ಲರ್ ಈ ರಾಷ್ಟ್ರಕ್ಕಾಗಿ ಹಾತೊರೆಯುವುದರ ಗೂಢ ಅರಿವಾಗದೆ ಇರದು!

ಸುಮಾರು ೫ ವರ್ಷಗಳ ಹಿಂದಿನ ತನಕ ಯುಗೊಸ್ಲಾವಿಯವು ತನ್ನ ದೃಷ್ಟಿಯನ್ನು ರಾಷ್ಟ್ರದ ಕೃಷಿಯ ಕಡೆಗೇ ತಿರುಗಿಸಿತ್ತು. ರಾಷ್ಟ್ರದ ಆಮದು–ರಫ್ತುಗಳೂ, ಆರ್ಥಿಕ ಪರಿಸ್ಥಿತಿಯೂ ಬೆಳೆವ ಬೆಳೆಯ ಮೇಲೆಯೇ ಹೊಂದಿಕೊಂಡಿತ್ತು. ಅಂತೆಯೇ ೧೯೩೭ರ ಹೊತ್ತಿನಲ್ಲಿ ಬ್ರಿಟಿಷ್—ಫ್ರೆಂಚ್ ಹಾಗೂ ಜರ್ಮನ್ ಕೈಗಾರಿಕೆ ನಾಯಕರು ತಮ್ಮ ಹಣಗಳನ್ನು ಇಲ್ಲಿ ಸುರಿದು, ಕೈಗಾರಿಕೆಯ ಸ್ಥಾಪನೆಗೆ ಮೊದಲು ಮಾಡಿದರು.

ಖನಿಜ ಸಂಪತ್ತಿ

ಮೆಂಗನೀಸ್ ಲೋಹದ ಅದುರು ಯುಗೊಸ್ಲಾವ್ಯದ ಮುಖ್ಯ ಖನಿಜ ಸಂಪತ್ತಿಯೆನ್ನಬಹುದಾಗಿದೆ. ಲೋಕದ ಈ ಲೋಹ ದೊರೆವ ರಾಷ್ಟ್ರಗಳಲ್ಲಿ ಮೂರನೆಯ ಸ್ಥಾನ ಯುಗೊಸ್ಲಾವಿಯಕ್ಕೆ. ಬೊಕ್ಸೈಟ್‌ನ ವಿಚಾರದಲ್ಲಿ ಜಗತ್ತಿನಲ್ಲಿ ಇದು ನಾಲ್ಕನೆಯದು; ಯುರೋಪಿನಲ್ಲಿ ಮೂರನೆಯದು. ಫ್ರೆಂಚ್ ಬಂಡವಲದ ಸಹಾಯದಿಂದ ಜೋರ್ ಎಂಬಲ್ಲಿನ ತಾಮ್ರದ ಗನಿ ತಲೆ ಎತ್ತಿ ನಿಂತಿದೆ. ಜೆನಿಕಾ ಮತ್ತು ಜೆಸೆನೀಕ್ ಎಂಬಲ್ಲಿ ಕಬ್ಬಿಣದ ಕೈಗಾರಿಕೆ ಉತ್ತಮ ರೀತಿಯಲ್ಲಿ ಸಾಗುತ್ತಿದೆ. ಕ್ರೋಮ್ ಅದುರು, ಸೀಸ ಮತ್ತು ತವರಗಳನ್ನು ಆಗೆದು ಉಪಯೋಗಕ್ಕೆ ತರುವ ಸಾಹಸ ಸಾಗುತ್ತಿದೆ. ಇಲ್ಲಿನ ಇನ್ನೊಂದು ಪ್ರಾಮುಖ್ಯ ವಸ್ತುವೆಂದರೆ ಸೀಮೆಂಟ್.

ಇಂತಹ ಸಕಲ ಕೈಗಾರಿಕೆಗಳ ಮೇಲ್ಮೆಗೆ ಸಾಧನವಾದುದೆಂದರೆ, ಮರ ಹಾಗೂ ಜಲಶಕ್ತಿ. ಇದು ಆಸ್ಟ್ರಿಯದಲ್ಲಿದ್ದಷ್ಟೇ ಯುಗೊಸ್ಲಾವಿಯದಲ್ಲೂ ಇದೆ ಬೆಳ್ಳಿ ಹಾಗೂ ಇತ್ತೀಚಿಗೆ ಕಂಡು ಹಿಡಿಯಲಾದ ಚಿನ್ನದ ಗನಿಗಳ ಕಾರ್ಯವು ಬ್ರಿಟಿಷ್ ಬಂಡವಲಶಾಹಿಗಳಿಂದ ಸಾಗುತ್ತಿದೆ. ಈ ರೀತಿಯಾಗಿ ವಿವಿಧ ಕೈಗಾರಿಕೆಗಳಿಗೆ ಅಗತ್ಯವುಳ್ಳ ವಿಧವಿಧದ ಖನಿಜಗಳು ಇಲ್ಲಿ ಧಾರಾಳವಾಗಿ ದೊರೆಯುತ್ತಿರುವುದಲ್ಲದೆ ಗೋಧಿ, ಮೈಸ್, ಆಕಳು, ಹೊಗೆಸೊಪ್ಪು ಮುಂತಾದವುಗಳು ರಾಷ್ಟ್ರದ ರಫ್ತನ್ನು ಗಣನೀಯವಾಗಿ ಮಾರ್ಪಡಿಸಿವೆ.

ಹೀಗಿರಲು, ಇತ್ತ ಕೆಲ ವರುಷಗಳಿಂದ ವಿವಿಧ ಪರರಾಷ್ಟ್ರಗಳ ಬಂಡವಲಶಾಹಿಗಳು ತಮ್ಮ ಹಣವನ್ನು ಇಲ್ಲಿನ ಕೈಗಾರಿಕೆಗಳಲ್ಲಿ ಸುರಿಸಲೆಳಸಿದುದು ಆಶ್ಚರ್ಯವಲ್ಲ. ಅಂತೂ ಖನಿಜ ಸಂಪತ್ತಿನಿಂದಲೂ, ಧಾನ್ಯ ಸಂಪತ್ತಿನಿಂದಲೂ ಮೆರೆಯುತ್ತಿರುವ ಈ ರಾಷ್ಟ್ರವಿಂದು ಕೈಗಾರಿಕೆಯ ಬೀಡಾಗಿದೆ. ಈ ರಾಷ್ಟ್ರದ ಉತ್ತರದಲ್ಲಿ ಹಾಗೂ ಪಶ್ಚಿಮದಲ್ಲಿ ಜಗತ್ತನ್ನೇ ತಮ್ಮ ಕೈಗಾರಿಕೆಗಳ ಸಂತೆಯಾಗಿ ಮಾರ್ಪಡಿಸಲೆಳಸುವ ಜರ್ಮನಿ ಇಟೆಲಿಗಳಿವೆ ಎಂಬುದನ್ನು ಮರೆಯಲಾಗದು!

ಆಸ್ಟ್ರಿಯದಿಂದಾದ ಲಾಭ

ಆಸ್ಟ್ರಿಯವನ್ನು ನುಂಗಿದುದರಿಂದಾಗಿ ಜರ್ಮನಿಗೆ ಕಚ್ಚಾ ಮಾಲುಗಳೂ, ಲೋಹದ ಅದುರುಗಳೂ, ಕೃಷಿ ಸಾಮಗ್ರಿಗಳೂ ಹಾಗೂ ಕಾಡಿನ ಮತ್ತು ಜಲಶಕ್ತಿಯ ಬೆಂಬಲವೂ ದೊರೆಯಿತು. ಇದರಿಂದ ಜರ್ಮನಿಗೆ ಹತ್ತಿದ ರುಚಿಯ ಪರಿಣಾಮವಾಗಿ ಅದಕ್ಕೆ ಬಾಲ್ಕನ್ ರಾಷ್ಟ್ರಗಳ ಹಾಗೂ ಮಧ್ಯ ಯುರೋಪಿನ ರಾಷ್ಟ್ರಗಳ ಮೇಲಿನ ಆಶೆ ಅಧಿಕವಾಯಿತು. ಮಾತ್ರವಲ್ಲ; ಆಸ್ಟ್ರಿಯದ ನಾಶದಿಂದ ಇತರ ರಾಷ್ಟ್ರಗಳಿಗೂ ಕೊಂಚ ಧಕ್ಕೆ ತಗಲಿತು.

ಕಲ್ಲಿದ್ದಲು, ಔಷಧ ಸಾಮಗ್ರಿಗಳಿಗೆ ಬೇಕಾದ ವಸ್ತುಗಳು ಹಾಗೂ ಆಸ್ಟ್ರಿಯದ ಪತನದಿಂದ ಕಬ್ಬಿಣ ಮತ್ತು ಮರ ಜರ್ಮನಿಗೆ ದೊರೆಯಿತೇನೋ ನಿಜ. ಆದರೆ ಅತ್ಯಗತ್ಯದ ವಸ್ತುಗಳಾದ ಪೆಟ್ರೋಲಿಯಂ, ಹತ್ತಿ, ಉಣ್ಣೆ, ರಬ್ಬರ್, ಅಗತ್ಯದ ಇತರ ಲೋಹಗಳು, ಬೆಳ್ಳಿ ಹಾಗೂ ಚಿನ್ನಗಳ ವಿಚಾರಗಳಲ್ಲಿ ಇದು ಪರರಾಷ್ಟ್ರಗಳ ಮೇಲೆಯೇ ಹೊಂದಿಕೊಂಡಿರಬೇಕಾಗಿತ್ತು; ಕೃಷಿ ಪ್ರಧಾನ ಸಾಮಗ್ರಿಗಳಲ್ಲೂ ಹೆಚ್ಚಿನವು ಹೊರಗಿನಿಂದಲೇ ಬರಬೇಕಾಗಿತ್ತು. ಪರಿಣಾಮವಾಗಿ ಜರ್ಮನಿಯು ಕೃತಕ ವಸ್ತುಗಳ ತಯಾರಿಗೆ ಮುಂದಾಯಿತು. ಪರರಾಷ್ಟ್ರಗಳಿಂದ ಬರಬೇಕಾದ ಸಾಮಗ್ರಿಗಳನ್ನು ಅತ್ಯಂತ ಸೂಕ್ಷ್ಮ ರೀತಿಯಿಂದ ಉಪಯೋಗಿಸಲು ಆರಂಭಿಸಿತು.

ಜರ್ಮನಿಗೇನು ಬೇಕು?

ಜರ್ಮನಿಯು ತನ್ನ ನಿತ್ಯ ಜೀವನಕ್ಕೆ ಹಾಗೂ ರಾಷ್ಟ್ರದ ಶಕ್ತಿಯ ಹೆಚ್ಚಳಕ್ಕೆ ಅತ್ಯಗತ್ಯವುಳ್ಳ ಪ್ರಮುಖ ಸಾಮಗ್ರಿಗಳನ್ನೆಲ್ಲ ಪರರಾಷ್ಟ್ರಗಳಿಂದಲೇ ತರಿಸಿಕೊಳ್ಳಬೇಕಾಗಿದೆ ಎಂಬುದು ತಿಳಿಯಿತಷ್ಟೆ? ಹಂಗೇರಿ—ರುಮೇನಿಯಗಳಂತೆ ಗೋಧಿಯೇ ಯುಗೊಸ್ಲಾವಿಯದ ಪ್ರಮುಖ ರಫ್ತು. ಇತರ ಎರಡು ರಾಷ್ಟ್ರಗಳಂತೆ ಜರ್ಮನಿಯ ಯುಗೊಸ್ಲಾವಿಯದಿಂದಲೂ ಬೇಕಾದಷ್ಟು ಧಾನ್ಯಗಳನ್ನು ತರಿಸಿಕೊಳ್ಳುತ್ತಿದೆ.

ಯುದ್ಧವಾರಂಭವಾದಂದಿನಿಂದಲಂತೂ, ಜರ್ಮನಿಯು ಯುಗೊಸ್ಲಾವಿಯದ ಸಕಲ ಸಾಮಗ್ರಿಗಳಿಗೂ ಮುಖ್ಯ ಗಿರಾಕಿಯಾಗಿದೆ. ಅಲ್ಲದೆ ತನ್ನ ಜಾಣ್ಮೆ ಹಾಗೂ ಬಂಡವಲಗಳನ್ನು ಪ್ರಯೋಗಿಸಿದರೆ, ಯುಗೋಸ್ಲಾವಿಯದಿಂದ ಇಂದಿನ ಇನ್ನುಡಿ ಲಾಭವನ್ನು ಹುಟ್ಟಿಸಿಕೊಳ್ಳಬಹುದೆಂಬ ಆಶೆ ಜರ್ಮನಿಯನ್ನು ಕಾಡುತ್ತಿದೆ. ಜರ್ಮನಿಯ ಶಕ್ತಿ ಇದರಿಂದ ಹೆಚ್ಚಾಗುವದೆಂಬುದರಲ್ಲಿ ಸಂದೇಹವಿಲ್ಲ.

ಹೀಗಿರಲು, ಇಷ್ಟು ಲಾಭದಾಯಕ ಪ್ರದೇಶವನ್ನು ಜರ್ಮನಿ ಬಿಟ್ಟೀತೇ? ರಷ್ಯನನ್ನು ಇದಿರಿಸಿ, ಅದರ ಅಂಕೆಗೆ ಬಾಗಿದ್ದ ಉಕ್ರೈನನ್ನು ಪಡೆಯಬೇಕೆಂಬ ಜರ್ಮನಿಯ ಕನಸು ಅಳಿದು ಹೋಯಿತು. ಹೋದುದು ಹೋಗಲಾಗಿ, ಅದರ ಮೇಲೂ ರಷ್ಯವು ಜರ್ಮನಿ ನುಂಗಲೆಳಸಿದ ರಾಷ್ಟ್ರಗಳನ್ನೆಲ್ಲ ತನ್ನ ಮಿತ್ರರಾಷ್ಟ್ರವಾಗಿ ಮಾರ್ಪಡಿಸುತ್ತಲಿದೆ. ಹಾಗಿರಲು, ರಷ್ಯವು ಬೇಡವೆಂದು ಬಿಟ್ಟ ಅಥವಾ ರಷ್ಯದ ಸ್ನೇಹವನ್ನು ನಿರಾಕರಿಸಿದ ರಾಷ್ಟ್ರಗಳಷ್ಟೇ ಜರ್ಮನಿಗೆ ಮುಂದೆ ಆಹುತಿಯಾಗಬಹುದು!

ನಿಮಗೆ ಬೇಕಾಗುವ ಎಲ್ಲಾ ತೆರನ ರಬ್ಬರ್ ಸ್ಟಾಂಪ್

ಮೊನೋಗ್ರಾಮ್ ಮೊಹರುಗಳು,

ಪೇದೆಗಳ ಬೇಜ್ ಬೆಲ್ಟ್, ತರವಾರಿ ಸ್ಕೌನ್ ಬೋರ್ಡ್ ಇತ್ಯಾದಿಗಳಿಗೆ

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,

(ಸ್ಥಾಪನೆ: 1926)

A 17, ಬಲ್ಮಠ ರಸ್ತೆ ——— ಮಂಗಳೂರು.

(ಮೈಸೂರು ಸರಕಾರದ ಸ್ಟೋರ್ಸ್ ಪರ್ಚೇಸ್ ಕಮಿಟಿಯ ಅಧಿಕೃತ ಪಟ್ಟಿಯಲ್ಲಿ ಸೇರಿಸಲ್ಪಟ್ಟಿದೆ)

ಮೇಹಧ್ವಂಸಿನಿ

ಗುಪ್ತವ್ಯಾಧಿಗಳ ಮೇಲೆ ಬ್ರಹ್ಮಾಸ್ತ್ರ! ನೋವನ್ನು ಕೊಡುವ ಶಸ್ತ್ರಚಿಕಿತ್ಸೆ ಅನಾವಶ್ಯಕ!!

ಶರೀರವನ್ನು ಕೃಶಿಸಿ ಮಾನವನ ಜೀವಶ್ರವ ಗೈಯುತ್ತಿರುವ ಬಿಳುಪು, ಕೆಂಪು, ಪರಂಗಿಹುಣ್ಣು, ಮೇಹಗಡ್ಡೆ, ಮೇಹಜ್ವರ, ಜರ್ಮವ್ಯಾಧಿ, ಕೀಲು ಕೀಲುಗಳ ನೋವು, ಅತಿಮೂತ್ರ ವಸ್ಥೆರೆ ಚಿಹ್ನೆಗಳನ್ನು "ಮೇಹಧ್ವಂಸಿನಿ"ಯು ತೀಕ್ಷ್ಣವಾಗಿ ಖಂಡಿಸಿ ರಕ್ತಶುದ್ಧಿಮಾಡಿ ನರಗಳಿಗೆ ಶಕ್ತಿಕೊಡುವುದು. ಸೇವಿಸುವುದಕ್ಕೆ ಹಿತಕರ. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವಿದೆ. ದೊಡ್ಡ ಸೀಸೆಗೆ ರೂ. ೪—೦—೦, ಮಿಡಿಯಂ ರೂ. ೨—೪—೦, ಚಿಕ್ಕ ಸೈಜು ರೂ. ೧—೨—೦.

ಲಸ್ಟರ್‌ದಂತಮಂಜನ

ದಿನವಹಿ ಉಪಯೋಗಿಸುತ್ತ ಬಂದಲ್ಲಿ ದಂತ ಚಿಕಿತ್ಸೆ ಅನಾವಶ್ಯಕ. ಖಂಡಿತವಾಗಿಯೂ ಒಂದೆರಡು ಸಲ ಪ್ರಯೋಗಿಸುವುದರಲ್ಲಿ ಹಲ್ಲಿನ ರಕ್ತವು ನಿಲ್ಲುವುದು. ವಸಡಿನ ಊದು ಬಾಯಿ ದುರ್ಗಂಧವು ನಾಶವಾಗುವುದು. ಹಲ್ಲುಗಳು ಬಹಳ ಶುಭ್ರವಾಗುವುದಲ್ಲದೆ ದೃಢಪಡಿಸಲ್ಪಡುವವು. ಬಹಳ ಬೆಲೆಯಾಗುವ ಟೂತ್ ಪೇಸ್ಟಿನ ಗುಣಾತಿಶಯಗಳು ಇದರಲ್ಲಿವೆ.

ಕ್ರಯ ಪಟ್ಟಿ 1ಕ್ಕೆ 0-1-0.

ಲಸ್ಟರ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಡಿಪೋ: ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೈಸೂರು ಏಜೆಂಟ್ಸ್:—ಶ್ರೀನಿವಾಸ ಸ್ಟೋರ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್.

Sole Agents:—Basel Mission Press, Mangalore.

ಸಬ್ ಏಜೆಂಟ್ಸ್:—Messrs. ಉಡುಪಿ ಮಿಷನ್ ಷಾಪ್, ಸಂತೆಕಟ್ಟೆ, ಉಡುಪಿ.
Messrs. ಭಕ್ತಾ ಅಂಡ್ ಬ್ರದರ್ಸ್, ಕಾಸರಗೋಡು.
ವಿ. ವಿ. ಶೆಣೈ, ಕಾರ್ಕಳ.
ಬಿ. ಗೋವಿಂದ ಪಾಂಡುರಂಗ ಭಂಡಾರಿ, ಪುತ್ತೂರು.

ನೆಳಲು ಬೆಳಕು

[೨ನೇ ಪುಟದಿಂದ]

'ಏಕೆ ಹಾಗೆನ್ನುವಿ,' ವೇಣು? ಬರುವ ಜನ್ಮದಲ್ಲಿಯೂ ನಾನು ಹೆಂಗುಸಾಗಿ ಬಾಳಬೇಕೆಂದೇ ನಿನ್ನ ಆಸೆ; ಮಗನಾಗಿ ಹುಟ್ಟಬಾರದೇಕೆ?'

'ಅದಾಗದಮ್ಮಾ! ಎಳೆಯವಳಾಗಿದ್ದಾಗಿನ ಆ ನಿನ್ನ ಅನುಪಮ ಸೌಂದರ್ಯವನ್ನು ಇನ್ನೊಮ್ಮೆ ಸವಿಯಬೇಕೆಂದೇ ಎದೆ ಕಾತರಿಸುತ್ತಿದೆ.'

'ಅಷ್ಟು ಮಾತನಾಡಬೇಡ ಮಗೂ! ಮಲಗಲೆತ್ತಿಸು.'

'ಆಗ, ನೆನಪಿರಲಿ, ನಿನ್ನನ್ನು 'ಲಕ್ಷ್ಮಿ' ಎಂದೇ ಕರೆಯದಿರಲಾರೆ.'

'ಛೆ! ಹಳೆಯ ಕಾಲದವರ ಹೆಸರಲ್ಲವೆ ಅದು?'

'ನೀನು ಆ ಹಳೆಯ ಸಂಪ್ರದಾಯದ ಚಿಕ್ಕಮ್ಮನೇ ಅಲ್ಲವೇನಮ್ಮಾ? ಆ ಪ್ರಾಚೀನರ ಸೌಂದರ್ಯವನ್ನೇ ಇನ್ನೊಮ್ಮೆ ಹೀರುವಾಸೆ ನನಗೆ!'

'ಆದರೆ ವೇಣೂ, ಹೆಣ್ಣು ಮಗುವಾಗಿ ಜನಿಸಿ ನಿನ್ನ ಸಂಕಷ್ಟಗಳಿಗೆ ನನ್ನದನ್ನೂ ಜೊತೆಗೊಳಿಸಲು ಮನಸ್ಸು ಒಪ್ಪಲಾರದು.'

'ನಾನು ಅಬಲನೆಂದೇ ನಿನ್ನೆಣಿಕೆ ಆದ ಕಾರಣವೇ, ನನ್ನನ್ನು ಬಾಧಿಸಲು ನೀನಿಷ್ಟಪಡದಿರಬಹುದು.'

'ಹೌದು. ನಾನು ಹೆಂಗುಸು. ಸಹಜವಾಗಿಯೂ ದುರ್ಬಲೆ. ನಿನಗೂ ಯಾವ ವಿಧದ ಸಂತಾಪವೂತಟ್ಟದಿರಲೆಂದೇ ಹವಣಿಸಿದೆ ಅದಷ್ಟು ಹೆಣಗಾಡಿದೆ. ಆದರೆ ಸೋತುಹೋದೆ.'

'ಅಮ್ಮಾ! ನಾನು ಕಲಿತ ಪಾಠಗಳನ್ನೆಲ್ಲ ಕಾರ್ಯರೂಪಕ್ಕೆ ತರಲು, ನನಗೆ ಈ ಜನ್ಮ ಪರ್ಯಂತ ಸಾಲದೇ ಹೋಯಿತು. ಮುಂದಿನ ಜನ್ಮದಲ್ಲಾದರೂ, ಮಾನವನ ಶಕ್ತಿ ಸಾಮರ್ಥ್ಯಗಳ ಪರಾಕಾಷ್ಠೆಯೆಷ್ಟೆಂದು ಪ್ರದರ್ಶಿಸಬಲ್ಲೆನೆಂಬ ನಂಬುಗೆ ನನ್ನಲ್ಲಿದೆ... ಸ್ವಾರ್ಥವೇ ಪ್ರಪಂಚವನ್ನು ಮುಂಕುಗೊಳಿಸುವ ಹೆಮ್ಮಾರಿಯಲ್ಲವೇನಮ್ಮಾ?'

'ನೀನೇನೆಂದರೂ ಸ್ವಾರ್ಥಕ್ಕಾಗಿ ಒಂದನ್ನೂ ಹೆರರಿಂದ ನೀನು ದೋಚಲಿಲ್ಲ. ಮಗೂ! ಸರ್ವಸ್ವವನ್ನು ಉದಾರಹಸ್ತದಿಂದ ದಾನವಾಡಿರುವೆ.'

'ಒಂದು ವಿಷಯದಲ್ಲಿ ಮಾತ್ರ, ನಾನು ನಿಜವಾಗಿಯೂ ಹೆಮ್ಮೆಪಡತಕ್ಕದ್ದೆ! ಕೇವಲ ಸ್ವಕೀಯ ಸುಖಕ್ಕಾಗಿ, ನಾನು ಯಾರನ್ನೂ ಪೀಡಿಸಲಿಲ್ಲ. ಪರರ ಮೇಲಿದ್ದ ಅಧಿಕಾರವನ್ನಿಷ್ಟೂ ಉಪಯೋಗಿಸಲಿಲ್ಲ.... ಹುಸಿ ನಡತೆ ಮಾತ್ರ ನನಗೆ ಒಗ್ಗದುದರಿಂದ, ಎಷ್ಟೋ ಕಾಲದ ವರೆಗೆ ಕಾಯಬೇಕಾಯಿತು. 'ಸತ್ಯ'ವಾದರೂ ನನ್ನ ಮೇಲೆ ಕರುಣೆಯ ಬೆಳಕನ್ನು ಬೀರಲೆಂದೆ ನನ್ನ ಕೊನೆಯ ಆಸೆ... ಯಾರಮ್ಮಾ ಅಲ್ಲಿ?'

'ಎಲ್ಲಿ ವೇಣೂ, ಯಾರೂ ಬಂದಿಲ್ಲ.'

'ಆಚೆ ಕೋಣೆಗೆ ಹೋಗಿ ನೋಡು, ... ಬಹುಶಃ ....'

'ಇಲ್ಲ ಮಗೂ! ಯಾರೂ ಕಾಣುವುದಿಲ್ಲ.'

'ಆದರೆ .... ಅವಳು .... ಬರುವಂತೆ ತೋರುತ್ತದಲ್ಲಮ್ಮಾ!'

'ಇಲ್ಲ ವೇಣೂ, ಸುಮ್ಮನಿರು. ಡಾಕ್ಟರರು ಬರುತ್ತಿದ್ದಾರೆ ನೋಡು.'

ಅಷ್ಟರಲ್ಲೇ ಡಾಕ್ಟರರು ಸಹಾಯಕನೊಂದಿಗೆ ಪ್ರವೇಶಿಸಿದರು. 'ನೋಡಮ್ಮಾ! ರೋಗಿಯ ಬಳಿ ನೀವು ಅಷ್ಟು ಹೊತ್ತು ನಿಲ್ಲಲಾಗದು. ಸ್ವಲ್ಪ ವಿರಾಮ ಪಡೆಯಿರಿ. ಸಹಾಯಕ್ಕೆ ಇವನನ್ನು ಕರೆತಂದಿರುವೆನು' ಎಂದರು.

'ಇಲ್ಲ ರಾಧಮ್ಮಾ, ನೀನು ಇಲ್ಲಿಂದ ಅಲುಗಬಾರದು.'

'ಆಯಿತು ವೇಣು! ಇಲ್ಲೆ ಮೂಲೆಯಲ್ಲಿ ಕೂತುಕೊಳ್ಳುವೆನು.'

'ಅದಾಗದು ಮಗ್ಗುಲಲ್ಲೇ ಕುಳಿತಿರಬೇಕು. ಕೊನೆತನಕ ನಾನು ನಿನ್ನ ಕೈಬಿಡಲಾರೆ ಯಾವ ಕೈಗಳು ನಿನ್ನ ಜೀವನಾಧಾರವಾಗಿದ್ದುವೋ ಅವುಗಳಿಂದಲೇ ಭಗವಂತನು ನನ್ನನ್ನು ಕೊಂಡು ಹೋಗಲಿ.'

'ಚಿಂತೆಯಿಲ್ಲ' ಎಂದರು ಡಾಕ್ಟರರು ನೀವಿಲ್ಲೇ ಕೂತಿರಬಹುದು. ವೇಣು! ನೀನು ಮಾತ್ರ ಉಸಿರೆತ್ತಬಾರದು. ಮನಸ್ಸು ಕ್ಷೋಭೆಗೊಂಡೀತು. ಮದ್ದಿಗೆ ಹೊತ್ತಾಯಿತು.'

'ಮದ್ದಿಗೆ ಹೊತ್ತು? ಅ! ಹ! ಹ! ಅದು ಎಂದೋ ಮಿಂಚಿಹೋಗಿದೆ. ಇನ್ನೂ ಮದ್ದೆಂದರೆ ಕಣ್ಣುಕಟ್ಟಗಾಗಿ! ನನಗೆ ಸಾವಿನ ಅಂಜಿಕೆ ಒಂದಿಷ್ಟೂ ಇಲ್ಲ. ಮೊದಲೇ ಕಾಲನ ಸೆಳೆತಕ್ಕೆ ಸಿಲುಕಿದೆ ಈ ಶರೀರ. ನಡುವೆ ಡಾಕ್ಟರರೊಬ್ಬರನ್ನು ತಂದೊಡ್ಡುವುದೇಕೆ? ಅವರನ್ನತ್ತ ಕಳುಹಿಸು, ಅಮ್ಮಾ! ನೀನೇ ನನಗಿಂದು ಬೇಕಾದವಳು.'

'ಕೂಡದು, ಕೂಡದು. ರೋಗಿಯು ಈ ತೆರನಾಗಿ ಉದ್ವೇಗಗೊಂಡಿರುವುದು ಹಾನಿಕರ.'

'ಹಾಗಾದರೆ, ನೀವೂ ಇನ್ನಷ್ಟು ಉದ್ವೇಗಗೊಳಿಸುವುದು ಬೇಡ. ಅಮ್ಮಾ! ... ಅವರು ಡಾಕ್ಟರರು ಹೋದರೇ! .... ಚೆನ್ನಾಯಿತು. ಈಗ ಬಾ, ತಲೆಯನ್ನು ನಿನ್ನ ತೊಡೆಯಲ್ಲಿರಿಸು.'

'ಆಯಿತಪ್ಪಾ! ಈಗಲಾದರೂ ಸ್ವಲ್ಪ ಮಲಗು.'

'ಬೇಡ, ಅಮ್ಮಾ ಇನ್ನೂ ಮಲಗಿನ್ನಬೇಡ. ಮಲಗಿದರೆ ಎದ್ದೇಳುವ ಆಸೆ ನನಗಿಲ್ಲ. ಕೊಂಚ ಎಚ್ಚರವಾಗಿರೋಣವೆಂದೆನ್ನಿಸುತ್ತದೆ .... ನೋಡು! ನೋಡವ್ವಾ ಧ್ವನಿಯೊಂದು ಕೇಳದೆ ನಿನಗೆ .... ? ಅದಾರೋ ಇತ್ತ ಬರುತ್ತಿರುವರು.'

೫

'ವೇಣೂ! ಸ್ವಲ್ಪ ಕಣ್ದೆರೆದು ನೋಡಪ್ಪಾ! ಆವಳು ಬಂದಿರುವಳು. ಒಮ್ಮೆ ಈ ಕಡೆ ದೃಷ್ಟಿ ಬೀರು.'

'ಯಾರು ಬಂದಿರುವುದು? ಕನಸೆ?'

'ಕನಸಲ್ಲ, ಮಗೂ; ವಿೂರೆಯು ತಂದೆಯೊಂದಿಗೆ ಬಂದಿರುವಳು.'

'ನೀನಾರು?'

'ಕಾಣಲಾರೆಯೆ? ಈಕೆಯೇ ನಿನ್ನ ವಿೂರೆ.'

'ವಿೂರೆ! ಆ ಬಾಗಿಲು ತೆರೆಯಿತೆ?'

'ಹೌದು, ಮಗೂ, ತೆರೆದೇ ಇದೆ ನೋಡು'

'ಆಲ್ಲಮ್ಮಾ! ಆ ಶಾಲು ಆಕೆ ಮಾಡಿದುದಲ್ಲ, ಅದು ಬರಿಯ ಕಲ್ಪನೆ.'

'ಶಾಲಲ್ಲ, ವೇಣೂ! ನಿನ್ನ ಕಾಲಿಗೆರಗಿರುವ ವಿೂರೆ. ಕಡೆಗಾಲಕ್ಕಾದರೂ ಹರಸು ಮಗೂ! ... ಹಾಗೆ ಅಳಬೇಡ ವಿೂರಾ! ಅಳಲಿಕ್ಕೆ ಧಾರಾಳ ಸಮಯವಿದೆ. ಅರೆನಿವಿಷ ಶಾಂತಳಾಗು.'

(ಆಧಾರದಿಂದ)

ಕಮರ್ಷಿಯಲ್ ಓರಿಯಂಟ್ ಗೋಲ್ಡ್ ಸ್ಪರ್ಧೆ ನಂ. 20.

ರೂ. 2,000ದ ನಗದು ಬಹುಮಾನ

ಪ್ರತಿ ಸರಿಯಾದ ಉತ್ತರಕ್ಕೆ ಗ್ಯಾರಂಟಿ ಇದೆ.

ಓರಿಯಂಟ್ ಗೋಲ್ಡ್ ತರಿಸುವ ಸ್ಪರ್ಧಕರಿಗೆ ಪ್ರವೇಶಧನವಿಲ್ಲ.

ಸ್ಪರ್ಧೆಯ ಸರಿಯಾದ ಉತ್ತರವನ್ನು ಬೇಂಕುವಶಾ ಇರಿಸಲಾಗಿಯಿದೆ.

"ಓರಿಯಂಟ್ ಗೋಲ್ಡ್" ಈ ಆತ್ಯಾಶ್ಚರ್ಯಕಾರೀ ಕೃತಕ ಬಂಗಾರವು ಜನತೆಗೆ ತಿಳಿಯುವಂತೆ, ಕಂಪೆನಿಯವರು ಕೈಕೊಂಡ ಜಾಹೀರಾತು ಕ್ರಯಕ್ಕನುಗುಣವಾಗಿ, ಈ ವ್ಯವಹಾರಿಕ ಬಹುಮಾನ ಸ್ಪರ್ಧೆಯನ್ನು ಅರ್ಪಿಸಲಾಗಿದೆ. ಅಲ್ಪ ಪ್ರಯತ್ನ ಹಾಗೂ ಸ್ವಲ್ಪ ಖರ್ಚಿನಿಂದ ಹೇಗೆ ಗ್ಯಾರಂಟಿ ಇರುವ ನಗದು ಬಹುಮಾನ ಪಡೆಯಬಹುದೆಂದು ಓದಿರಿ.



ಈ ಚೌಕದಲ್ಲಿ 5ರಿಂದ 20ರ ವರೆಗಿನ ಅಂಕೆಗಳನ್ನು ಪ್ರತಿಯೊಂದು ಸಾಲಿನಲ್ಲಿ ಅಡ್ಡಕ್ಕೂ ನೀಟಕ್ಕೂ ಮತ್ತು ಮೂಲೆಯಿಂದ ಮೂಲೆಗೂ ಕೂಡಿಸಿದಲ್ಲಿ ಜುಮ್ಲಾ 50 ಬರುವಂತೆ ಕ್ರಮವಾಗಿ ಸರಿಪಡಿಸಿರಿ. ಪ್ರತಿಯೊಂದು ಅಂಕೆಯನ್ನು ಒಂದೇ ಬಾರಿ ಉಪಯೋಗಿಸತಕ್ಕುದು.

ಪ್ರವೇಶ ಹಾಸಲು: ಉತ್ತರ 1ಕ್ಕೆ ರೂಪ್ಯಾ 1

ಆಖೈರು ತಾರೀಕು: 27ನೇ ಜುಲ್ಯಾ 1940.

ಉತ್ತರ 1ಕ್ಕೆ ರೂಪ್ಯಾ 1ರಂತೆ, ಮನಿ ಆರ್ಡರ್ ಅಥವಾ ಇಂಡಿಯನ್ ಪೋಸ್ಟಲ್ ಆರ್ಡೆರ್ ಮೂಲಕ ಚಿತ್ತಿಲ್ಲದೆ ಖಾಲಿ ಕಾಗದದಲ್ಲಿ ಬರೆದು ಎಷ್ಟೇ ಉತ್ತರಗಳನ್ನೂ ಕಳುಹಬಹುದು. ನಾಲ್ಕು ಅಥವಾ ಅದಕ್ಕೆ ಮಿಗಿಲಾಗಿ ಉತ್ತರಗಳನ್ನು ಹಣ ಸಹಿತ ಕಳುಹಿಸುವವರಿಗೆ, ಕಳುಹಿದ ಮೊತ್ತಕ್ಕೆ ಸರಿಯಾದ ಬೆಲೆಯ, ಅಮೂಲ್ಯ ಓರಿಯಂಟ್ ಗೋಲ್ಡಿನ ಅಭರಣಗಳು ಇನಾಮು ಸಿಗುವುವು. ಬಳೆ, ಬೆಂಡೋಲೆ, ಚೈನ್, ಕಂಠಹಾರ, ಉಂಗುರ, ಬಿಂಕಿ, ಕಡಗ ಇತ್ಯಾದಿಗಳ ನಮೂನೆವಾರುಗಳನ್ನು, ಅಪೇಕ್ಷಿಸಿದಲ್ಲಿ ಕಳುಹಲಾಗುವ ಸಚಿತ್ರ ಉಚಿತ ಕೆಟಲಾಗಿನಿಂದ ಆರಿಸಬಹುದು.

ಸ್ಪರ್ಧೆಯ ಫಲಿತಾಂಶ 1940ನೇ ಜುಲ್ಯಾ ತಾ. 31ರಂದು ಪ್ರಕಟಿಸಲ್ಪಡುವುದು ಮತ್ತು ವಿಳಾಸ ಅಂಚೆಚೀಟಿ ಸಹಿತ ಲಕೋಟೆಗಳನ್ನು ಉತ್ತರದೊಡನೆ ಕಳುಹಿದ ಸ್ಪರ್ಧಕರಿಗೂ ಕಳುಹಿಸಲಾಗುವುದು. ಬಹುಮಾನ ಹಂಚುವಿಕೆಯಲ್ಲಿ ಸೋಡ್ತಿಯಾಗಲೀ, ದಾಮಾಶಾಯಿಯಾಗಲೀ ಇಲ್ಲ. ಮತ್ತು (ಬ್ಯಾಂಕಿನಲ್ಲಿರಿಸಲಾದ ಸರಿಯಾದ ಉತ್ತರವನ್ನು ಹೋಲಿಸಿ) ಪ್ರತಿಯೊಂದು ಸರಿಯಾದ ಉತ್ತರಕ್ಕೂ ರೂ. 2000ದ **ಕನಿಷ್ಟ ಮಿತಿಯ** ಬಹುಮಾನ **ಖಂಡಿತ.** ಗವರ್ನಿಂಗ್ ಡೈರೆಕ್ಟರರ ತೀರ್ಮಾನವೇ ಕೊನೆಯದೂ, ನ್ಯಾಯಬದ್ಧವಾದುದೂ ಆಗಿದೆ.

ಆರ್ಡರುಗಳನ್ನೂ, ಸ್ಪರ್ಧೆಯ ಉತ್ತರ, ಹಣಗಳನ್ನೂ ಕಳುಹುವ ವಿಳಾಸ:—

ORIENT GOLD INDUSTRIES, LTD.,
WELLING HOUSE, 201, HORNBY ROAD, BOMBAY.

ಅಖಿಲ ಭಾರತದಲ್ಲಿ 200ಕ್ಕೂ ಮಿಕ್ಕಿ ಮಾರಾಟದ ಕೇಂದ್ರಗಳಿವೆ.

ಹಿಂದಿನ ಸ್ಪರ್ಧೆಯ ಫಲಿತಾಂಶ:

ಒಂದನೆ ಸಾಲು: 6—8—11—9; ಮೂರನೆ ಸಾಲು: 12—15—2—5;
ಎರಡನೆ ಸಾಲು: 13—10—7—4; ನಾಲ್ಕನೆ ಸಾಲು: 3—1—14—16.

A SURE CURE FOR COLDS AND RHEUMATIC PAINS

ತಲೆನೋವು, ಶೀತ, ವಾತ, ಉಳುಕು ಮತ್ತು ವಾತದ ಬೇನೆಗಳಿಂದ ವಾಸಿಹೊಂದಲು ಈ ಸುಗಂಧ, ಬೇನೆಹಾರಿ ಮುಲಾವನ್ನು ಹಚ್ಚಿರಿ. ಸಿಪ್ರಸ್ ಮುಲಾವಿನ ವಿಷಹಾರಕ ಗಂಧವು ಶೀತದಿಂದ ಕಟ್ಟಿಹೋದ ನಾಸಿಕ ದ್ವಾರವನ್ನು ಶೀಘ್ರದಲ್ಲಿ ಸರಿಪಡಿಸಿ ಉಪಶಮನವೀವುದು. ಎಲ್ಲಾ ಕೆಮಿಸ್ಟರಲ್ಲಿ ದೊರೆಯುವುದು. ಬಾಟ್ಲಿಯೊಂದರ ಬೆಲೆ ರೂ. 1. ಅಂಚೆ ಖರ್ಚಾಣೆ ಅಂಚೆ ಚೀಟಿ ಕಳುಹಿದಲ್ಲಿ ಪುಕ್ಕಟೆ ಮಾದರಿ ಸೀಸೆ ಕಳುಹಲಾದೀತು.

ಶೀತವನ್ನು ಅಲಕ್ಷಿಸದಿರಿ. ಶೀಘ್ರ ಉಪಶಮನಕ್ಕೆ ಸಿಪ್ರಸ್ ಮುಲಾವನ್ನು ಎದೆ ಮತ್ತು ಗಂಟಲುಗಳಿಗೆ ತಿಕ್ಕಿಕೊಳ್ಳಿರಿ.

ODMAN'S CYPRESS SALVE (Pain Balm) REGD

ಅಂಗ್ಲೋ ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂ.,
285, ಜುಮ್ಮಾ ಮಸೀದಿ, ಬೊಂಬಾಯಿ, 2.

ಮುಂಬಾಯಿಯಲ್ಲಿ ಹೊಸ ಮೋಟಾರುಕಾರು ಕಾರ್ಖಾನೆ

ಮೋಟಾರುಕಾರುಗಳನ್ನು ತಯಾರಿಸುವ ಹೊಸ ಕಾರ್ಖಾನೆಯೊಂದು ಸದ್ಯದಲ್ಲಿಯೇ ಮುಂಬಾಯಿಯಲ್ಲಿ ಸ್ಥಾಪಿಸಲ್ಪಡುವುದು. ಇದರ ಮೂಲ ಧನ ರೂ. ೨,೨೫,೦೦,೦೦೦. ಸೇಟ್ ವಾಲ್ಚಂದ್ ಹಿರಾಚಂದ್‌ರವರು ಇದರ ಸ್ಥಾಪಕರು. ಸರ್ ವಿಶ್ವೇಶ್ವರಯ್ಯನವರೂ ಇದರಲ್ಲಿ ಭಾಗವಹಿಸಲಿರುವರು. ಈ ಸಂಸ್ಥೆಗೆ ಅಮೇರಿಕದ ಕ್ರಿಸ್ಲರ್ ಕಾರ್ಪೊರೇಶನಿನವರಿಂದ ಸರ್ವತರದ ಸಹಾಯವೂ ಸಿಗಲಿದೆ. ಈ ಕಾರ್ಖಾನೆಯ ಸಕಲ ವಿಭಾಗಗಳಲ್ಲೂ ಹಿಂದೀಯರೇ ತರಬೇತಿಗೊಳಿಸಲ್ಪಡುವರು.

THE PIE-MONEY BANK, LTD.,
MAIDAN ROAD, MANGALORE.

Undertakes all kinds of Banking Business.
Current account at 2½% per annum.
Savings Bank Deposits at 4½% per annum.
FIXED DEPOSITS
For 2 years 5% · 1 year 4½% · For 6 months 4% · 3 months 3½%
Auction Chit Funds ranging from Rs. 100 5,000 run regularly on systematic lines.
Unique Banking facilities to Businessmen and Interested Public.
Apply for particulars. K. R GURU, *Managing Director.*

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗ ಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗ ಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಎಸರ್ಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯತ್ತಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1ಕ್ಕೆ ರೂ. 5—0—0.

ಆತಂಕನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.
ವಿಜಂಟ್ಸ್:—ಪರ್ಲ್ ಎಂಡ್ ಸನ್ಸ್, ಮಂಗಳೂರು.

THE BANK OF MANGALORE, LIMITED
MANGALORE.

Head Office:- **Mangalore.** *Branches:-* **Moodabidri & Padub**

Recurring Savings Bank Deposit

1. The minimum deposit payable at a time is only ONE ANNA.

2. Deposits collected at your door.

3. Every anna paid daily will grow, with interest, to Rs. **185/-**. Thus a depositor who pays in a sum of Re. 1/- daily will get at the end of seven years **2,960/-**.

4. Payment can even be discontinued and ag continued, if and when convenient.

5. No forfeiture of interest for such discontin period.

6. Maximum loan facilities on security of th deposits.

For further particulars please apply to our Head Office or Branches.



ಕೆ ಸ್ಟೊ ಫೇ ನ್
ಟೆ

ಹರಳೆಣ್ಣೆಯಿಂದ ಮಕ್ಕಳಿಗೆ ಎಷ್ಟೊಂದು ದುಃಖ! ಈಗ ಅದನ್ನು ಕೊಡಬೇಕಾಗಿಲ್ಲ. ಕಾರಣ, ವಿಜ್ಞಾನಿಗಳು ಅದರ ಬದಲು ಆದರ್ಶಪ್ರಾಯದ ಇನ್ನೊಂದನ್ನು ಪೂರ್ಣಮಾಡಿದ್ದಾರೆ–ಕೆಸ್ಟೊಫೇನ್ ಕೇಸ್ಟರ್ ಆಯಿಲ್ ಚಾಕೊಲೆಟ್‌ಗಳು, ಸೇವನೆಗೆ ಮಿಠಾಯಿಯಷ್ಟು ರುಚಿಯಾದ ಈ ಭೇದಿಯ ಬಿಲ್ಲೆಗಳನ್ನು ಡಾಕ್ಟರರೂ, ನರ್ಸುಗಳೂ ಅದರ ಸಂಪೂರ್ಣ ಆದರೆ ಮೃದುವಾದ ಕೆಲಸಕ್ಕಾಗಿ ಹೆಚ್ಚು ಶಿಫಾರಸು ಮಾಡುತ್ತಾರೆ.

ಇದು, ಮಕ್ಕಳಷ್ಟೇ, ಪ್ರಾಯಸ್ಥರಿಗೂ ಆದರ್ಶಪ್ರಾಯವಾಗಿದೆ. ಯಾವಾಗಲೂ ಒಂದು ಬಾಟಲಿ ಕೈಯಲ್ಲಿಟ್ಟುಕೊಳ್ಳಿ. ದಕ್ಷಿಣ ಹಿಂದೂಸ್ಥಾನದ ವಿಜಂಟರು:–

ಮೆಸರ್ಸ್ ಶಿವರಾಮ್ ಎಂಡ್ ಸ್ವಾಮಿ,
154, ನೈನಿಯಪ್ಪ ನಾಯಕ್ ಸ್ಟ್ರೀಟ್, ಪಿ. ಟಿ. ಮದ್ರಾಸು.

CASTOPHENE
CASTOR OIL CHOCOLATES

Diamonds! **D**

Best Brilliancy

K. R. K. SH

Opp. Government Col

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ

ವಜ್ರಗಳು

ಎಮ್‌ಸ್ಟ್ರ್ಡಮ್ಮಿನಿಂದ ಬರುವ ವಜ್ರಗ
ಧಾರಣೆಗಿಂತ ಐದು ಪರ್ಸೆಂಟಿಗೆ ಕ
ದಂತೆ ನಮ್ಮಲ್ಲಿ ವಿಕ್ರಯಿಸಲ್ಪಡು

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ
ನಮ್ಮ ವಜ್ರಗಳ ಉತ್ಕೃಷ್ಟ ಜುನಾ
ಸಲ್ಲಕ್ಷಣಗಳೂ ತಾನಾಗಿಯೇ ತಿಳಿದು

ನಿಮಗೆ ಬೇಕಾದುದನ್ನು ಏನೆ
ಹಂಗಿಲ್ಲದೆ ಪರೀಕ್ಷಿಸಿ ನೋಡಿ
ತಾನೇ ನಿಮಗೆ ಖಚಿತವಾಗು

ಯೋಗ್ಯ ದರದಲ್ಲಿ ದೇವಪೂಜಾ ಸಾಮಗ್ರಿ
ಉತ್ತಮ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಪುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಚಿತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸುತ್ತೇವೆ. ಗಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನಿಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. UDIPI, S. K.

(ರಿಜಿಸ್ಟರ್ಡ್) **ಬಾರಾಕಡಮಧು** ಲಕ್ಷಗಟ್ಟಿ
ಪ್ರಾಣ
ಕಾಪಾ

ಮಕ್ಕಳ ಜೀರ್ಣಶಕ್ತಿಯನ್ನು
ಗ್ರಹಣಿ, ಆಸ್ತಿಜ್ವರೆಪ್ಪನ್ನು ಹೋಗಲಾಡಿಸುವು
ಕಟ್ಟಕೊಂಡಿರುವ ಎದೆಯ ಎಲುಬುಗಳ ಮು
ಬೆಳೆದು ಪುಷ್ಟಿ ಬಲ್ಲ ಆರೋಗ್ಯ, ತೂಕ
ಮಧುರೌಷಧಿ.

ಬೆಲೆ 0-12-0. ಟ. ಖ. 0-

ಎಲ್ಲಾ ಕಛೇರಿಗಳಲ್ಲಿಯೂ ಏಜಂ
ಬೇಕಾಗಿದ್ದಾರೆ.

ಧಾರಾಳ ಕಮಿಶನ್ ಕೊಡಲ್ಪಡುವುದು.

ಯಂ. ವಿ. ಪ್ರಸಾದಿಕ ಔಷಧಾ
ಶಿವಮೊಗ್ಗಾ, (ಮೈಸೂರು ಸೀ

ಗುಣ ಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣ ಪರತ.

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವದು! ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ, ಮೈಯಲ್ಲಿ ನೋವು, ಉಷ್ಣತಾ, ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವುದು. ಮಕ್ಕಳಾಗುವುದಿಲ್ಲೆಂದು ತಿನೇ ಲಗ್ನವಾಗುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು: ಮಾ। ರಾ। ಎ. ಎಮ್. ಇನ್ಸ್‌ಪೆಕ್ಟರ್ ಬೆಳಗಾಂವ–'ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳೂ ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು.' ೨೧ ದಿವಸದ ಡಬ್ಬಿಯ ಕಿ. ರೂ. ೩. ಟ. ಖ. ಆಣೆ ೮.

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರಿಗೆ ಅಶಕ್ತಿಯಾಗುತ್ತದೆ. ಬಡತನದಲ್ಲಿ ಮಕ್ಕಳಾಗುವದರಿಂದ ದುಃಖವಾಗುತ್ತದೆ, ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಗರ್ಭಧಾರಣ ಬಂದಾಗುವುದು. ತದನಂತರ ಏನೂ ಮಾಡಿದರೂ ಸುರುವಾಗುವುದಿಲ್ಲ. ಮೊದಲೆ ವಿಚಾರ ಮಾಡಿ ಔಷಧಬೇಡಿರಿ. ಮುಖ್ಯ ಸರ್ಟಿಫಿಕೇಟು – ಡಾಕ್ಟರ್ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್., ಕೆಳವಾಮಾಹಿಮ, ಠಾಣೇ – ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ, ಗರ್ಭಧಾರಣವಾಗುವುದಿಲ್ಲ. ಪೂರ್ಣ ಗುಣಕಾರಿ. ಡಬ್ಬಿ ಕಿಮ್ಮತ್ತು ರೂ. ೪; ವಿ. ಪಿ. ಆಣೆ ೮.

ವಿಳಾಸ:—**ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.)**

ಡಾಕ್ಟರ್ ಜಿ. ಬಿ. ಇನವರ
ಸುಗಂಧ ನಸ್ಯದ ಪುಡಿ

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವಾ ಚದುರಂಗ ಆಡುವವರೆ? ನೀವು ಯಾರಾದರೂ ಸರಿ – ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇನವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ (ಟಪ್ಪಾಲು ಖರ್ಚು ಪ್ರತ್ಯೇಕ).

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,
ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮಹಬೂಬಸು.

Edited and Published by B. Vittal Rau at the Kanteerava Office, Maidan North Road, Mangalore. Printed by U. Vittalacharya, M at the Dharma Prakash Press, Car Street, Mangalore.